ಗಳು ಹಿಂದೆ ನಡೆದಿರತಕ್ಕಂಥಾದ್ದು ಇದೆ. ಅದು ಮತ್ತೆ ಮರುಕಳಿಸದೇ ಇರಲೀ ಎಂದು ನನ್ನ ಆಸೆ. ಆ ಆಸೆಯನ್ನು ನೀವು ಕೈಗೂಡಿಸುತ್ತೀರಿ ಎಂಬ ಸಂಪೂರ್ಣ ಭರವಸೆ ನನಗಿದೆ. ಶ್ರೀಮತಿ ನಾಗಮ್ಮ ಕೇಶವ ಮೂರ್ತಿಯವರು ಸೌಮ್ಯ ಸ್ವಭಾವದವರು, ಮೃದು ಸ್ವಭಾವದವರೆಂದು ಕೆಲವರು ಮಾತನಾಡುವಾಗ ಹೇಳಿದರು. ಈ ಅಧ್ಯಕ್ಷ ಸ್ಥಾನಕ್ಕೆ ಬಂದು ಕೂತಮೇಲೆ ನೀವು ಎಷ್ಟೇ ಸೌಮ್ಯ ಮೃದು ಸ್ವಭಾವದವರೇ ಇರಲಿ ಅವರ ಕೈಗೆ ಈ ಅಧ್ಯಕ್ಷಸ್ಥಾನದ ಗಂಟೆ ಸಿಕ್ಕಿದಾಗ ಆ ಮೃದು ಮತ್ತು ಸೌಮ್ಯ ಸ್ವಭಾವ ಸಂಪೂರ್ಣವಾಗಿ ಪರಿವರ್ತನೆಯಾಗಿ ರೂಲ್ಸ್ ಪುಸ್ತಕ ನಮ್ಮ ಮುಂದೆ ಎದ್ದು ಕಾಣುತ್ತದೆ. ಆದ್ದರಿಂದ ಅದರ ಚೌಕಟ್ಟಿನಲ್ಲಿ ಈ ಸಭೆಯನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ನಾವು ಇಲ್ಲಿ ಒಂದು ರೀತಿ ಬಂಧಿಗಳಾಗಿ ಈ ಕುರ್ಚಿಯಲ್ಲಿ ಕೂರಬೇಕಾಗುತ್ತದೆ. ಹಿಂದೆ ಈ ಸಭೆಯ ಅಧ್ಯಕ್ಷರಾಗಿದ್ದಂತಹ ಶ್ರೀಮತಿ ನಾಗರತ್ನಮ್ಮನವರು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಕಿವಿ ಮಾತುಗಳನ್ನು ಹೇಳುತ್ತಾ ಮೇಲೆ ತಕ್ಕಡಿ ಇದೆ, ಸಮಾನವಾದಂತಹ ದೃಷ್ಟಿಯಿಂದ ನ್ಯಾಯವಾದ ದೃಷ್ಟಿಯಿಂದ ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಿ ಎಂದು ಹೇಳಿದರು. ನನಗೆ ಮತ್ತು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಿಗೆ ಶ್ರೀಮತಿ ನಾಗರತ್ನಮ್ಮನವರು ಏನು ಕಿವಿ ಮಾತುಗಳನ್ನು ಹೇಳಿದ್ದಾರೆ ಆ ಕಿವಿ ಮಾತುಗಳನ್ನು ತತ್ವಶಃ ಅಕ್ಷರಶಃ ಅನುಸರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇವೆ ಅನ್ನತಕ್ಕಂತಹ ಮತ್ತೂ ಒಂದು ಭರವಸೆಯ ಮಾತನ್ನು ಆಡಿ ಈ ಸದನದ ತಮ್ಮೆಲ್ಲರ ಪರವಾಗಿ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಉಪಾಧ್ಯಕ್ಷರಾಗಿ ಆಯ್ಕೆಯಾದದ್ದನ್ನು ಮನಸಾರೆ ಅಭಿನಂದಿಸಿ ಇನ್ನೂ ಹೆಚ್ಚಿನ ಜನಸೇವೆ ಮಾಡತಕ್ಕಂತಹ ಅವಕಾಶ ಅವರಿಗೆ ಸಿಕ್ಕಲಿ, ಮತ್ತು ಈ ಸ್ಥಾನದಲ್ಲಿ ಹೆಚ್ಚಿನ ಯಶಸ್ಸನ್ನು ಅವರು ಗಳಿಸಲೀ ಎಂದು ಹಾರೈಸಿ ನನ್ನ ಅಭಿನಂದನೆಗಳನ್ನು ಅವರಿಗೇ ಸಲ್ಲಿಸುತ್ತೇನೆ.

† ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಉಪಾಧ್ಯಕ್ಷರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿವರ್ಯರೇ, ವಿರೋಧ ಪಕ್ಷದ ನಾಯಕರೇ, ಮತ್ತು ಇತರೇ ಎಲ್ಲಾ ಪಕ್ಷಗಳ ನಾಯಕರೆ ಹಾಗೂ ನನ್ನ ಆತ್ಮೀಯ ಶಾಸಕ ಮಿತ್ರರೇ, ತಾವುಗಳು ಮತ್ತು ಸಭಾ ನಾಯಕರು ನನ್ನ ಮೇಲೆ ವಿಶ್ವಾಸವನ್ನು ಇಟ್ಟು ನನ್ನನ್ನು ಈ ಸಭೆಯ ಉಪಾಧ್ಯಕ್ಷಣಿಯನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಕ್ಕಾಗಿ ಮೊಟ್ಟ ಮೊದಲನೆಯದಾಗಿ ನಾನು ತಮ್ಮೆಲ್ಲರಿಗೂ ಮುಖ್ಯವಾಗಿ ನಮ್ಮ ಸಭಾ ನಾಯಕರಿಗೆ ನನ್ನ ಹೃತ್ಪೂರ್ವಕವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ತಮ್ಮೆಲ್ಲರ ನಿರೀಕ್ಷೆಗಳಿಗೆ ತಕ್ಕಂತೆ, ತಮ್ಮೆಲ್ಲರ ಒಂದು ನಂಬಿಕೆಗೆ ಪಾತ್ರಳಾಗಿರುವ ನಾನು ಬಹಳ ನಿಷ್ಠೆಯಿಂದ ಮತ್ತು ಒಳ್ಳೆಯ ಸಂಪ್ರದಾಯಗಳು ಈ ಮನೆಯಲ್ಲಿ ಏನು ಇವೆ. ಅವನ್ನು ನಡೆಸಿಕೊಂಡು ಹೋಗಲು ಕಾರ್ಯ ನಿರ್ವಹಿಸಲು ಪ್ರಯತ್ನಿಸುತ್ತೇನೆ ಮತ್ತು ತಮ್ಮೆಲ್ಲರ ಸಹಾಯ ಸಹಕಾರವನ್ನು ಕೂಡ ಈ ದಿಶೆಯಲ್ಲಿ ನಿರೀಕ್ಷಿಸುತ್ತೇನೆ. I certainly try to come upto your expectations. ಎಂಬ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸಭಾಧ್ಯಕ್ಷರು ಸಂಸದೀಯ ವ್ಯವಹಾರದಲ್ಲಿ ಅರಿತವರು, ನುರಿತವರು ಇದ್ದೀರಿ. ತಮ್ಮ ಒಂದು ನಾಯಕತ್ವದಲ್ಲಿ ನನಗೆ ಅಪಾರವಾದ ನಂಬಿಕೆ ಇದೆ ಮತ್ತು ಗೌರವ ಸಹ ಇದೆ. ತಮ್ಮ ಜೊತೆಯಲ್ಲಿ ಕೆಲಸ ಮಾಡತಕ್ಕಂತಹ ಒಂದು ಅವಕಾಶ ಸಿಕ್ಕಿರುವುದು ನನಗೆ ಸಂತೋಷದ ವಿಷಯ ಹಾಗೂ ಆನಂದ ತಂದಿದೆ ಎಂದರೆ ತಪ್ಪಾಗಲಾರದು. ಈ ಸದನದ ಕಾರ್ಯ ಕಲಾಪಗಳ ಬಗ್ಗೆ ಯಾವುದೇ ಪಾತ್ರಕ್ಕೂ ತಮ್ಮ ಜೊತೆಯಲ್ಲಿ ಪಾಲುದಾರಳಾಗಿ ಕೆಲಸ ಮಾಡಲು ನಾನು ಯಾವಾಗಲೂ ಸಿದ್ಧಳಿದ್ದೇನೆ. ತಾವು Friend, Philosopher and guide ಎಂದು ಏನು ಹೇಳುತ್ತಾರೆ ಆ ರೀತಿಯಲ್ಲಿ ನಾನು ನಿಮ್ಮ ಜೊತೆಯಲ್ಲಿ ಕೆಲಸ ಮಾಡಲು ಇಚ್ಛಿಸುತ್ತೇನೆ.

ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದೂ ಅಲ್ಲದೆ ನನ್ನ ಬಗ್ಗೆ ಒಳ್ಳೆಯ ಮಾತನಾಡಿದ್ದೀರಿ ಆದ್ದರಿಂದ ತಮ್ಮೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ Litrle effort and gods grace can bring cent percent result. ಎಂದು ಏನು ಹೇಳುತ್ತಾರೆ ಈ ಒಂದು ಮಾತಿನಲ್ಲಿ ಪೂರ್ಣ ನಂಬಿಕೆ ಇರುವವಳು ನಾನಾಗಿದ್ದೇನೆ. ಇದರಲ್ಲಿ ಸ್ವಾಮಿಯ ಕೃಪೆ ಸದಾ ಇರಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI D. B. CHANDREGOWDA.—In honour of the Deputy Speaker's election I think we may adjourn the House upto 3.00 P.M. There is also BAC meeting. I may be permitted to speak after 3.15 P.M.

MR. SPEAKER.—That can be done.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ತಮ್ಮ ಭಾಷಣವನ್ನು ಮುಂದುವರಿಸಬಹುದು.

† ಶ್ರೀಮತಿ ಚಂದ್ರಪ್ರಭಾ ಅರಸ್ (ಹುಣಸೂರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಮಾತನಾಡುತ್ತಾ, ಈ ಮನೆಯ ಅನೇಕ ಹಿರಿಯ ಸದಸ್ಯರು ಕೂಲಂಕಷವಾಗಿ ಕೆಲವು ಅಂಶಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ಈ ಪ್ರಸ್ತಾವನೆಯಲ್ಲಿ ಬಂದಿರತಕ್ಕ ಕೆಲವೊಂದು ಅಂಶಗಳನ್ನು ಸಭೆಯ ಮುಂದೆ ಮತ್ತು ತಮ್ಮ ಮುಂದಿಡಲು ಅಪೇಕ್ಷಿಸುತ್ತೇನೆ.

ಸನ್ಮಾನ್ಯ ರಾಜ್ಯಪಾಲರ ೧೯೮೯ರ ನವೆಂಬರ್ ತಿಂಗಳಲ್ಲಿ ಚುನಾಯಿತವಾದಂಥ ನೂತನ ಸರ್ಕಾರದ ಬಗ್ಗೆ ತಮ್ಮ ಅನಿಸಿಕೆಗಳನ್ನು ತಮ್ಮ ಭಾಷಣದಲ್ಲಿ ಬಹಳ ಚೆನ್ನಾಗಿ ವ್ಯಕ್ತಪಡಿಸಿದ್ದಾರೆ. ಆ ಪೈಕಿ ಮೊದಲನೇ ಪ್ಯಾರಾದಲ್ಲಿರತಕ್ಕ ಅಂಶದ ಬಗ್ಗೆ ಅಂದರೆ ಗಡಿ ಪ್ರಶ್ನೆಯ ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಮತ್ತು ತಮ್ಮ ಸರ್ಕಾರದ ಧೃಡ ನಿಲುವು ಏನು ಎಂಬುದನ್ನು ಸಮಂಜಸವಾಗಿ ಹೇಳಿದ್ದಾರೆ. ಅವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇಲ್ಲಿ ಗಡಿ ಪ್ರಶ್ನೆಯೇ ಇಲ್ಲ, ಗಡಿಯ ಪ್ರಶ್ನೆ ಮುಗಿದುಹೋಗಿದೆ ಹೋಗಿದೆ ಎಂದು ನಮ್ಮ ಜನರು ತಿಳಿದುಕೊಂಡಿದ್ದಾರೋ, ಇದನ್ನು ಮತ್ತೆ ಮತ್ತೆ ಎತ್ತತಕ್ಕದ್ದು ಸರಿಯಲ್ಲ ಎಂದಿದ್ದಾರೆ. ಮಹಾರಾಷ್ಟ್ರ ಮತ್ತು ನಮ್ಮ ಕರ್ನಾಟಕ ರಾಜ್ಯದ ಗಡಿ ಪ್ರಶ್ನೆ ಬಂದಾಗ ಕೇಂದ್ರ ಸರ್ಕಾರವೇ ಮಹಾಜನ್ ಆಯೋಗವನ್ನು ನೇಮಿಸಿ ತನ್ಮೂಲಕ ಈ ವಿಚಾರವನ್ನು ಕೂಲಂಕಷವಾಗಿ ಪರಿಶೀಲಿಸಿ ಅದರ ಬಗ್ಗೆ ತಮ್ಮ ನಿಲುವನ್ನು ಅವರು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನಾವು ಬದ್ಧರಾಗಿದ್ದೇವೆ ಎಂಬುದನ್ನು ನಮ್ಮ ಸರ್ಕಾರದ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ರಾಜ್ಯಪಾಲರೂ ಕೂಡ ಒತ್ತಿ ಹೇಳಿದ್ದಾರೆ. ಇದನ್ನು ಪದೇ ಪದೇ ಕೆದುಕುವುದರಲ್ಲಿ ಅರ್ಥವಿಲ್ಲ. ಈಗ ನಮ್ಮ ಸರ್ಕಾರದ ದೃಡ ನಿಲುವು ಏನಿದೆ ಇದು ಹಾಗೆಯೇ ಮುಂದುವರಿದರೆ ಬಹಳ ಒಳ್ಳೆಯದೆಂದು ನನ್ನ ಭಾವನೆ. ಇನ್ನು ನಮ್ಮ ರಾಜ್ಯದ ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಬೇರೆ ರಾಜ್ಯಗಳನ್ನು ಅದರಲ್ಲೂ ಮುಖ್ಯವಾಗಿ ಉತ್ತರದ ರಾಜ್ಯಗಳನ್ನು ನೋಡಿದರೆ ಅಲ್ಲಿ ಇವತ್ತು ಬಹಳ ಖೇದಕರವಾದ ಸಂಗತಿಗಳು ನಡೆಯುತ್ತಿರುವುದನ್ನು ನೋಡಿದಾಗ ಹಾಗೂ ವಿವಾದನೀಯ ಸನ್ನಿವೇಶಗಳು ಅಲ್ಲಿ ಸೃಷ್ಟಿಯಾಗಿರುವುದನ್ನು ನೋಡಿದಾಗ ನಮ್ಮ ರಾಜ್ಯವು ಶಾಂತಿ ಮತ್ತು ಕಾನೂನು ಪಾಲನೆಯಲ್ಲಿ ಅತ್ಯಂತ ಒಳ್ಳೆಯ ಸ್ಥಾನವನ್ನು ಪಡೆದಿದೆ ಎಂದು ಹೇಳಬಹುದು. ಆದರೆ ಇತ್ತೀಚಿನ ದಿವಸಗಳಲ್ಲಿ ನಾವು ನೋಡುತ್ತಿದ್ದೇವೆ, ಆ ಗಾಳಿ ಇಲ್ಲೂ ಬೀಸಿದ ಹಾಗೆ ಕಾಣುತ್ತಿದೆ. ಅಕ್ಕಪಕ್ಕದ ರಾಜ್ಯಗಳಿಂದ ಮತ್ತು ಸುತ್ತಮುತ್ತಲ ರಾಜ್ಯಗಳಿಂದ ಬರುತ್ತಿರುವವರಿಗೆ ಇಲ್ಲಿ ನೆರವು ಕೊಡತಕ್ಕಂಥ ಕೆಲವು ಸಾಮಾಜಿಕ ದ್ರೋಹಿಗಳು ಮತ್ತು ದುಷ್ಕರ್ಮಿಗಳಿಂದ ಈ ರಾಜ್ಯದ ಕಾನೂನು ಮತ್ತು ಶಾಂತಿ ಪಾಲನೆ ಸ್ವಲ್ಪ ಮಟ್ಟಿಗೆ ಹದಗೆಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದರೋಡೆ ಪ್ರಕರಣಗಳು, ರಸ್ತೆದರೋಡೆಗಳು ಹಾಗೂ ಹಗಲು ಹೊತ್ತಿನಲ್ಲಿಯೇ ಮಹಿಳೆಯರು ಮನೆಯಲ್ಲಿ ಇದ್ದಂಥ ಸಮಯದಲ್ಲಿ ಅವರ ಇನ್ನಿತರ ಕುಟುಂಬದ ಸದಸ್ಯರು ಹೊರಗೆ ಹೋದಂಥ ಸಂದರ್ಭದಲ್ಲಿ ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಕಳ್ಳತನಗಳು ಹಾಗೂ ಕೆಲವೊಮ್ಮೆ ಕೊಲೆ ನಡೆಯುತ್ತಿರತಕ್ಕಂಥದನ್ನು ಪ್ರತಿನಿತ್ಯ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಹಾಗೂ ನಮ್ಮ ಕಣ್ಣೆದುರಿನಲ್ಲಿಯೇ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿಯೂ ಕೂಡ ಇವರ ಸಂಖ್ಯೆ ಬಹಳ ದಿವಸಗಳಿಂದ ಹೆಚ್ಚಿರುವುದು ನಮ್ಮ ಮಾನ್ಯ ಸಂಬಧಪಟ್ಟ ಮಂತ್ರಿಗಳು ಕೊಟ್ಟಿರತಕ್ಕಂಥ ಅಂಕಿಅಂಶಗಳಿಂದ ಇದು ಅರ್ಥವಾಗುತ್ತದೆ. ಇದು ಆಡಳಿತ ಯಂತ್ರದ ಬಿಗಿ ಕಡಿಮೆಯಾಗಿರುವುದು ಪರಿಣಾಮವೋ ಅಥವಾ ಸಮಾಜದಲ್ಲಿ ಇಂಥ ದುಷ್ಟ ಶಕ್ತಿಗಳ ಸಂಖ್ಯೆ ಹೆಚ್ಚಾಗುತ್ತಿದೆಯೋ ಗೊತ್ತಿಲ್ಲ. ಒಟ್ಟಾರೆ ಅದು ಏನೇ ಇರಲಿ, ಅದರಲ್ಲೂ ಬೆಂಗಳೂರು ನಗರವನ್ನು ತೆಗೆದುಕೊಂಡರೆ ಬೆಂಗಳೂರು ನಗರ ನಮ್ಮ ರಾಜ್ಯದ ರಾಜಧಾನಿಯಾಗಿದೆ. ಇಂಥ ಒಂದು ರಾಜಧಾನಿಯಲ್ಲಿ ಇಂಥ ಪ್ರಕರಣಗಳು ಹೆಚ್ಚುತ್ತಿರುವುದನ್ನು ನಾವು ಬಹಳವಾಗಿ ಗಮನಿಸಬೇಕಾಗಿದೆ. ಅದರಲ್ಲೂ ಗೃಹ ಇಲಾಖೆಯವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ, ಆದುದ್ದರಿಂದ ದಯವಿಟ್ಟು ಇದನ್ನು ಬಿಗಿಗೊಳಿಸಬೇಕು. ಚುರುಕುಗೊಳಿಸಬೇಕು. ಅದರ ದಕ್ಷತೆಯನ್ನು ಪ್ರಾಮಾಣಿಕತೆಯಿಂದ ಹೆಚ್ಚಿಸಬೇಕು. ಬೆಂಗಳೂರು ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಯುತ್ತಿರತಕ್ಕಂಥ ದರೋಡೆ, ಕಳ್ಳತನ, ಕೊಲೆ, ಲೂಟಿ ಮೊದಲಾದ ಪ್ರಕರಣಗಳು ಏನು ಇವೆ, ಇವನ್ನು ಸಾಧ್ಯವಾದಮಟ್ಟಿಗೆ ತಪ್ಪಿಸಬೇಕಾದರೆ ದಕ್ಷ ಆಡಳಿತಾಧಿಕಾರಿಗಳನ್ನು ನೇಮಿಸತಕ್ಕಂಥ ಒಂದು ಕೆಲಸವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಾರೆಂಬ ಒಂದು ಭರವಸೆಯನ್ನು ಇಟ್ಟುಕೊಂಡಿರುತ್ತೇವೆ. ಇದರ ಬಗ್ಗೆ ಸಾಕಷ್ಟು ಗಮನಹರಿಸುವ ಕೆಲಸವನ್ನು ನಮ್ಮ ಸದಸ್ಯರು ಮಾಡಿದ್ದಾರೆ. ಹಾಗೂ ನಮ್ಮ ಪಕ್ಷದ ವೇದಿಕೆಯ ಮೇಲೆ

ಕೂಡ ಮಾಡಿದ್ದೇವೆ, ಏಕೆಂದರೆ ಕಳ್ಳತನ, ಕೊಲೆ, ಸೂಲಿಗೆ ಲೂಟಿ ಮಾಡಿ ತಪ್ಪಿಸಿಕೊಂಡು ಹೋಗುತ್ತಿರುವವರನ್ನು ನೋಡಿದರೆ, ಸರಿಯಾಗಿ ಸೂಕ್ತ ರೀತಿಯಲ್ಲಿ ವಿಚಾರಣೆಯಾಗುವುದಿಲ್ಲ ಹಾಗೂ ಇಂತಹವರಿಗೆ ಕೊಡುತ್ತಿರುವ ಶಿಕ್ಷೆ ಸಾಕಾಗುತ್ತಿಲ್ಲ ಎನ್ನುವ ಭಾವನೆ ಸಾಮಾನ್ಯ ಜನರಿಗೆ ಉಂಟಾಗಿದೆ. ಆ ಒಂದು ರೀತಿಯ ವಾತಾವರಣ ಬೆಳೆದುಬಂದಿರುತ್ತದೆ. ಇದನ್ನು ಸಂಪೂರ್ಣವಾಗಿ ತೊಡೆದುಹಾಕಲು ಪ್ರಾಮಾಣಿಕವಾದ ಪ್ರಯತ್ನಗಳನ್ನು ನಾವು ಮಾಡಿದರೆ ಸಂಪೂರ್ಣವಾಗಿ ಅಂದರೆ ೧೦೦ಕ್ಕೆ ೧೦೦ ರಷ್ಟು ತೆಗೆದುಹಾಕಲು ಸಾಧ್ಯವಾಗದಿದ್ದರೂ ಇದರ ಪ್ರಮಾಣವನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ, ಸಾಮಾನ್ಯವಾಗಿ ನಮ್ಮ ಸರ್ಕಾರಿ ನೌಕರರ ಮನೋಭಾವ ಏನು ಇದೆ ಹಾಗೂ ಅವರಲ್ಲಿರತಕ್ಕಂಥ ನೈತಿಕ ಶಿಥಿಲತೆಯಿಂದಾಗಿ ನಮ್ಮ ಸಾಮಾನ್ಯ ಆಡಳಿತದಲ್ಲಿ ದಕ್ಷತೆಯು ಕಡಿಮೆಯಾಗುತ್ತಿದೆ. ನಮ್ಮ ಆಡಳಿತವನ್ನು ಸರಿಯಾದ ಮಾರ್ಗದಲ್ಲಿ ನಡೆಸಿಕೊಂಡು ಹೋಗಬೇಕಾದರೆ, ಸಾರ್ವಜನಿಕ ಹಿತದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಸಾಮಾನ್ಯ ಜನರ ಸೇವೆಯನ್ನು ಮಾಡುವಾಗ ಕಾನೂನು ಮತ್ತು ಶಿಸ್ತನ್ನು ಪರಿಪಾಲನೆ ಮಾಡಬೇಕಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ಸರ್ಕಾರಿ ನೌಕರರು ನಿರ್ಲಕ್ಷ್ಯ ಮನೋಭಾವನೆಯನ್ನು ಹಾಗೂ ಉದಾಸೀನ ಮನೋಭಾವನೆಯನ್ನು ತಾಳಬಾರದು. ಆದರೆ ಇತ್ತೀಚೆಗೆ ಇವರಲ್ಲಿ ಕಾರ್ಯತತ್ಪರತೆ ಮತ್ತು ದಕ್ಷತೆ ಕಡಿಮೆ ಆಗುತ್ತಿರುವುದನ್ನು ನಾವು ನೋಡಬಹುದಾಗಿದೆ. ಹಿಂದೆ ಕೂಡ ಈ ರೀತಿ ಇರಲಿಲ್ಲವೆ ಎಂದು ತಾವು ಯಾರಾದರು ಕೇಳಬಹುದು. ಈ ಹಿಂದೆಯೂ ಇವರಲ್ಲಿ ಅಲಕ್ಷ್ಯತನ ದೌರ್ಬಲ್ಯಗಳು ಇದ್ದವು. ಆದರೆ ಇವತ್ತಿನ ದಿವಸ ನಾವು ನೋಡುತ್ತಿರತಕ್ಕದ್ದು ಎಲ್ಲಿಯವರೆಗೆ ಅವರಲ್ಲಿ ನಿರ್ಭೀತಿ, ನಿರ್ಲಜ್ಜೆ ಇದೆ ಅಂದರೆ ಕೆಲವೊಂದು ಮಟ್ಟದಲ್ಲಿ ಅಧಿಕಾರಿಗಳು ತಮ್ಮ ಕರ್ತವ್ಯಪಾಲನೆಯನ್ನು ಬಿಟ್ಟು ಕೇವಲ ಸಹಿ ಹಾಕುವುದರ ಮೂಲಕ ತಮ್ಮ ಹಾಜರಾತಿ ತೋರಿಸಿ ಕಾಫಿಗೆ, ತಮ್ಮ ಖಾಸಗಿ ಕೆಲಸಗಳಿಗೆ ಮನೆಗೆ ಹೋಗಿರುತ್ತಾರೆ. ಅದಲ್ಲೂ ಸಹ ಬೆಂಗಳೂರು ನಗರದಲ್ಲಿ ಕಾರ್ಪೊರೇಷನ್ ಅಧಿಕಾರಿಗಳಾಗಲಿ ಅಥವಾ ವಿವಿಧ ಸಂಸ್ಥೆಗಳ ಅಧಿಕಾರಿಗಳಾಗಲಿ ಸಮಯಕ್ಕೆ ಸರಿಯಾಗಿ ಹಾಜರಾತಿ ಇಲ್ಲದಿರುವುದು ಮತ್ತು ಅವರ ಕರ್ತವ್ಯ ನಿರ್ವಹಣೆಯಲ್ಲಿ ಲೋಪದೋಷಗಳಿರುವುದನ್ನು ನಾವು ಕಾಣಬಹುದಾಗಿದೆ. ಅವರಲ್ಲಿ ಈ ದಕ್ಷತೆಯನ್ನು, ಪ್ರಾಮಾಣಿಕತೆಯನ್ನು ಹೆಚ್ಚಿಸುವಲ್ಲಿ ಪ್ರಜಾಪ್ರತಿನಿಧಿಗಳಾಗಿ ನಮ್ಮ ಕರ್ತವ್ಯ ಮತ್ತು ಸಾರ್ವಜನಿಕರಲ್ಲಿ ಕೂಡ ಎಚ್ಚರಿಕೆಯನ್ನು ಹೆಚ್ಚಿನದಾಗಿ ಬೆಳೆಸಬೇಕಾಗುತ್ತದೆ. ಯಾರಾದರೂ ನಮ್ಮನ್ನು ಕೇಳುವವರಿದ್ದಾರೆ. ನಮ್ಮ ಮೇಲ್ಪಟ್ಟ ಅಧಿಕಾರಿಗಳು ಅಥವಾ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು, ಮತ್ತು ಸಂಬಂಧಪಟ್ಟ ಮಂತ್ರಿಗಳು ಇದ್ದಾರೆಂಬುದು ಅವರ ಮನಸ್ಸಿನಲ್ಲಿದ್ದರೆ ಸ್ವಲ್ಪ ಭಯಭೀತಿಯಿಂದ ಅಥವಾ ತಮ್ಮ ನಿರ್ಲಕ್ಷ್ಯತನವನ್ನು ಕಡಿಮೆ ಮಾಡಿ ಕೆಲಸ ಮಾಡುವುದಕ್ಕೆ ಅವರಿಗೆ ಮನಸ್ಸು ಬರಬಹುದೆಂದು ಕಾಣುತ್ತದೆ. ಈಗ ಯಾವುದೇ ಇಲಾಖೆಯಲ್ಲಾಗಲಿ ಸಂಸ್ಥೆಗಳಲ್ಲಾಗಲಿ ದಕ್ಷತೆಯಿಂದ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಅನೇಕ ಅಧಿಕಾರಿಗಳು ಇದ್ದಾರೆ. ಒಬ್ಬರಿರುವ ಕಡೆ ಹತ್ತಾರು ಜನ ಅಧಿಕಾರಿಗಳಿದ್ದಾರೆ. ಆದರೆ ಕೆಲಸ ಕಾರ್ಯಗಳು ಮಾತ್ರ ಸರಿಯಾಗಿ ಸಾಗುತ್ತಿಲ್ಲ. ಸಾರ್ವಜನಿಕರ ಕೆಲಸ ಅಂದರೆ ನಾಳೆ ಬನ್ನಿ ಎಂಬ ಜವಾಬು. ತಪ್ಪಿದರೆ ಆ ಕೆಲಸ ಮುಂದಕ್ಕೆ ಹೋಗುವುದಿಲ್ಲ, ಸಂಬಂಧಪಟ್ಟ ಕಾಗದ ಪತ್ರಗಳು ಅಲ್ಲೇ ಉಳಿಯುತ್ತವೆ. ಈ ಆಡಳಿತ ಯಂತ್ರವನ್ನು ಚುರುಕುಗೊಳಿಸುವ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಸರ್ಕಾರ ಇದರ ಕಡೆ ಗಮನ ಕೊಟ್ಟು ಸ್ವಲ್ಪ ಅವರಿಗೆ ಕರ್ತವ್ಯ ಪರಿಪಾಲನೆಯನ್ನು ಸರಿಯಾಗಿ ಮಾಡುವ ದಿಕ್ಕಿನಲ್ಲಿ ಶಿಸ್ತು, ನಿರ್ಬಂಧನೆ ಜವಾಬ್ದಾರಿ, ಹೊಣೆಗಾರಿಕೆಯನ್ನು ಹೊರಿಸತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನು ಆಡಳಿತ ಯಂತ್ರ ಸುಧಾರಣೆಗಾಗಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ನಿರ್ದಿಷ್ಟಪಡಿಸುವಲ್ಲಿ ಹಿಂದಿನ ಸರ್ಕಾರದವರು ೫೫ ರಿಂದ ೫೮ ಮಾಡಿದರು. ಇದು ಕೆಲವಟ್ಟಿಗೆ ಅನುಕೂಲವಾಗಿದ್ದರೂ ಸಾಮಾನ್ಯವಾಗಿ ನಮ್ಮ ನಿರುದ್ಯೋಗಿ ಯುವಕರಲ್ಲಿ ವಿದ್ಯಾವಂತ ನಿರುದ್ಯೋಗಿಗಳಲ್ಲಿ ಸಾಕಷ್ಟು ಬೇಸರ, ಸಾಕಷ್ಟು ನಿರಾಶೆಯನ್ನು ತಂದೊಡ್ಡಿದೆ. ಈ ಬಗ್ಗೆ ಅನೇಕ ಹಿರಿಯ ನೌಕರರು ಮಾತನಾಡುವುದನ್ನು ಕೇಳಿದ್ದೇನೆ, ನಮಗೆ ಈ ವೃತ್ತಿ ಖಂಡಿತವಾಗಿ ಸಾಕಾಗಿದೆ, ನಮ್ಮ ಮಕ್ಕಳು ಮರಿಗೆ ಕೆಲಸ ಇಲ್ಲದಂತಾಗಿದೆ ನಮಗೂ ಸಾಕಷ್ಟು ವಯಸ್ಸಾಗಿರುತ್ತದೆ ಎಂಬ ಮಾತನ್ನು ಹೇಳುತ್ತಾರೆ. ಆದುದರಿಂದ ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ಕ್ಕೆ ಇಳಿಸುವುದು ಒಂದು ರೀತಿಯಲ್ಲಿ ಉಚಿತವೆಂದು ನಾನಾದರೂ ಅಂದುಕೊಂಡಿದ್ದೇನೆ. ಇದನ್ನು ಸರ್ಕಾರ ಕಡ್ಡಾಯವಾಗಿ ಜಾರಿಗೆ ತರಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ.—ಮಾನ್ಯ ಸದಸ್ಯೆಯವರು, ಹಿಂದಿನ ಸರ್ಕಾರದವರು ೫೫ ರಿಂದ ೫೮ಕ್ಕೆ ನಿವೃತ್ತಿ ವಯಸ್ಸನ್ನು ಏರಿಸಿದರು ಎಂದರು. ನೀವು ಕೂಡ ಅದಕ್ಕೆ ಕಾರಣಕರ್ತರು.

ಆ ಸಂದರ್ಭದಲ್ಲಿ ನೀವೂ ಕೂಡ ಕ್ಯಾಬಿನೇಟ್ ಸದಸ್ಯರಾಗಿದ್ದುದರಿಂದ ಅದಕ್ಕೆ ನೀವೂ ಸಹ ಹೊಣೆಗಾರರು ಎಂಬುದನ್ನು ಈ ಸದನದ ಗಮನಕ್ಕೆ ತರುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.—೧೯೮೩-೮೪ರ ದಾಖಲಾತಿ ನೋಡಿದರೆ ತಮಗೇ ಗೊತ್ತಾಗುತ್ತದೆ, ಅದಕ್ಕೆ ನಾವು ಸಂಪೂರ್ಣ ವಿರೋಧಿಗಳು. ಆಗ ನಾವು ಆ ಫೈಲನ್ನು ಎತ್ತಿಡಿಸಿದ್ದೆವು ನಂತರ ೧೯೮೫ ರಿಂದೀಚೆಗೆ ಅಧಿಕಾರಕ್ಕೆ ಬಂದ ಸರ್ಕಾರ ಅದನ್ನು ಜಾರಿಗೊಳಿಸಿದೆ.

ನಾವು ಅದಕ್ಕೆ ಅಡ್ಡಿ ಮಾಡಿದ್ದು ನಿಜ ಅದು ಜಾರಿ ಆಗದಹಾಗೆ ಮಾಡಿದ್ದು ನಿಜ. ಆದರೆ ಆ ಮೇಲೆ ಆಗಿದೆ. ಈಗ ಮತ್ತೆ ೫೫ಕ್ಕೆ ಇಳಿಸತಕ್ಕದ್ದು ಬಹಳ ಶ್ಲಾಘನೀಯ. ಇದರಿಂದ ಉದ್ಯೋಗಾವಕಾಶವನ್ನು ಕಿರಿಯರಿಗೆ ಒದಗಿಸಬಹುದು ಇದೊಂದೇ ನಿರುದ್ಯೋಗ ಸಮಸ್ಯೆಗೆ ಪರಿಹಾರ ಎಂದು ನಾನು ಭಾವಿಸಿಲ್ಲ. ನಿರುದ್ಯೋಗ ಸಮಸ್ಯೆಗೆ ಇನ್ನೂ ಅನೇಕ ಪರಿಹಾರ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಹಮ್ಮಿಕೊಳ್ಳಬೇಕಾಗುತ್ತದೆ ಆದ್ದರಿಂದ ಮಾನ್ಯ ಪ್ರತಿಪಕ್ಷದ ಸದಸ್ಯರು ಗಮನಿಸಬೇಕು ಖಂಡಿತವಾಗಿ ನಾವಿದ್ದಾಗ ಇದಾಗುವುದಕ್ಕೆ ಬಿಟ್ಟಿರಲಿಲ್ಲ. ಇನ್ನು ಕೃಷಿಗೆ ನೀಡುವ ಆದ್ಯತೆ ಬಗ್ಗೆ ನಮ್ಮ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳು ಸ್ವಾಗತಾರ್ಹವಾಗಿವೆ. ಮುಖ್ಯವಾಗಿ ರೈತರಿಗೆ ಬೇಕಾದಂಥ ನೀರಾವರಿ ಸೌಲಭ್ಯ. ವಿದ್ಯುಚ್ಛಕ್ತಿ ಸೌಲಭ್ಯ ಹಾಗೂ ಕಂದಾಯ ಇಲಾಖೆಯಲ್ಲಿ ಹಾಗೂ ಕೃಷಿ ಇಲಾಖೆಯಲ್ಲಿ ದೊರಕಬೇಕಾದ ಸೌಲಭ್ಯಗಳು ಒಳ್ಳೆಯ ರೀತಿಯಲ್ಲಿ ದೊರಕತಕ್ಕ ದಿಸೆಯಲ್ಲಿ ಇಂದಿನ ಸರ್ಕಾರ ಹೆಚ್ಚಿನ ಗಮನ ಹರಿಸುವುದಕ್ಕೆ ಪ್ರಯತ್ನ ಮಾಡಿದೆ ನಮ್ಮ ನೀರಾವರಿ ಮಂತ್ರಿಗಳು ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಏನಿದ್ದಾರೆ, ಅವರ ಕಾರ್ಯಜವಾಬ್ದಾರಿ ಇನ್ನೂ ಹೆಚ್ಚಾಗುತ್ತದೆ. ಏಕೆಂದರೆ ಅನೇಕ ವರ್ಷಗಳಿಂದ ನಾವು ನೋಡುತ್ತಿದ್ದೇವೆ. ೪೦-೫೦ ವರ್ಷಗಳ ಹಿಂದೆ ಕೆರೆಕಟ್ಟೆಗಳನ್ನು ಕಟ್ಟಿದ್ದಾರೆ. ಅದಕ್ಕೆ ದುರಸ್ತಿಗಳಾಗಿಲ್ಲ. ಅಲ್ಲಿ ಹೂಳು ತೆಗೆಸುವ ಕೆಲಸ ಮಾಡಿಲ್ಲ. ಇರತಕ್ಕ ನಾಲೆಗಳನ್ನು ದುರಸ್ತಿಪಡಿಸುವ ಕೆಲಸ ನಡೆಸುತ್ತಿಲ್ಲ. ಅವುಗಳ ಮೈಂಟೆನೆನ್ಸ್‌ಗೆ ಹಣಕಾಸು ಒದಗಿಸುವುದಕ್ಕೆ ಸರಿಯಾಗಿ ಆಗುತ್ತಿಲ್ಲ, ಇದನ್ನೆಲ್ಲಾ ಗಮನಿಸಿದರೆ ದೊಡ್ಡ ದೊಡ್ಡ ನೀರಾವರಿ ಮಾತ್ರವಲ್ಲ ಪ್ರಕೃತಿದತ್ತವಾಗಿ ಕೊಟ್ಟಂಥ ನದಿಗಳಿವೆ. ಕಾವೇರಿ, ಕೃಷ್ಣ, ಹೇಮಾವತಿ, ಘಟಪ್ರಭ ಮತ್ತು ಮಲಪ್ರಭ ಇಂಥ ದೊಡ್ಡ ನದಿಗಳಿದ್ದು ಅಲ್ಲಿ ಅಣೆಕಟ್ಟು ಹಾಕಿ ನೀರಾವರಿ ಮಾಡಿ ನಮ್ಮ ರಾಜ್ಯದ ಜನತೆಗೆ ನೀರನ್ನು ಒದಗಿಸಬಹುದು. ಅದರ ಜೊತೆಗೆ ಸಣ್ಣಪುಟ್ಟ ಕೆರೆಕಟ್ಟೆಗಳನ್ನು ದುರಸ್ತಿಪಡಿಸಿ ಅದರ ಚೊಕ್ಕಟತನವನ್ನು ಇಟ್ಟುಕೊಂಡು ಹೋದರೆ ಅದು ನೀರಾವರಿಗೆ ಒಳಪಟ್ಟು ರೈತ ಒಳ್ಳೆಯ ಬೆಲೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಮಾನ್ಯ ಬಿ.ಜೆ.ಪಿ. ನಾಯಕರು ರೈತರ ಪರವಾಗಿ ಯಾವತ್ತೂ ಹೇಳುತ್ತಾ ಇರುತ್ತಾರೆ. ಕೆರೆಕಟ್ಟೆಗಳಲ್ಲಿ ಇತ್ತೀಚೆಗೆ ಹೂಳು ತೆಗೆಸಿದ್ದೇ ನೋಡಿಲ್ಲ. ಸಂಬಂಧಪಟ್ಟ ಇಲಾಖೆ ವತಿಯಿಂದ ಹಣಕಾಸನ್ನು ಒದಗಿಸಿ ಹೂಳು ತೆಗೆಸುವ ಕೆಲಸ ಮಾಡಬೇಕಾಗಿದೆ. ನಮ್ಮ ರೈತರು ಗೋಡನ್ನು ಕೆರೆಕಟ್ಟೆಗಳ ಸುತ್ತ ತೆಗೆದು, ಹೂಳನ್ನು ತೆಗೆದು ಅದನ್ನು ಗೊಬ್ಬರವಾಗಿ ಉಪಯೋಗ ಮಾಡುವ ಸಂದರ್ಭ ಹಿಂದೆ ಇತ್ತು. ಆದರೆ ಇವತ್ತು ನಾವು ಅದನ್ನು ನೋಡುತ್ತಿಲ್ಲ. ಈಗ ಕೆಮಿಕಲ್ ಮೆನ್ಯೂರ್ ಬಂದಮೇಲೆ ಹೂಳು ತೆಗೆಸತಕ್ಕ ಮತ್ತು ಅದನ್ನು ಕಾಂಪೋಸ್ಟ್ ಗೊಬ್ಬರವಾಗಿ ಉಪಯೋಗಿಸತಕ್ಕ ಕೆಲಸ ನಿಂತುಹೋಗಿದೆಯೆಂದು ಹೇಳಬಹುದು. ನಾವು ರೈತರಾಗಿ ಸಾಮಾನ್ಯ ಜನತೆಗೆ ಇದರ ಬಗ್ಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಇದನ್ನು ಉಪಯೋಗ ಮಾಡುವುದರಿಂದ ಎರಡು ರೀತಿಯಿಂದ ಅವರಿಗೆ ಉಪಯೋಗವಾಗುತ್ತದೆ. ಒಂದು ಕೆರೆಕಟ್ಟೆಗಳನ್ನು ಆಳ ಮಾಡುವುದರಿಂದ ಮಳೆಗಾಲದಲ್ಲಿ ಹೆಚ್ಚು ನೀರು ಸಿಕ್ಕಿ ಅದನ್ನು ಕೊಡಿಡುವದಕ್ಕೆ ಸಾಧ್ಯವಾಗುತ್ತದೆ. ಮತ್ತು ಎರಡನೆಯದಾಗಿ ಇದು ಗೊಬ್ಬರವಾಗಿ ಉಪಯೋಗಿಸಬಹುದು ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಹರಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರಿಂದ ಕೃಷಿಕರಿಗೆ ಒಳ್ಳೆಯ ಫಲವತ್ತಾದ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಕೃಷಿ ಇಲಾಖೆ ಕೊಡುವ ಬಿತ್ತನೆ ಬೀಜಗಳು ಒಳ್ಳೆಯ ಗುಣಮಟ್ಟದಾಗಿದ್ದು, ಅದನ್ನು ಸಕಾಲದಲ್ಲಿ ರೈತರಿಗೆ ತಲುಪಿಸುವ ವ್ಯವಸ್ಥೆಯನ್ನು ಸಂಬಂಧಪಟ್ಟ ಇಲಾಖೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಹಿಂದೆ ಹತ್ತಿ ಬೀಜ ಸಿಕ್ಕಿರಲಿಲ್ಲ. ಹೊರಗಡೆ ಒಂದು ಬ್ರಾಂಡ್ ಹಾಕಿ ಕವರ್‌ಗಳಲ್ಲಿ ಕೊಡುತ್ತಿದ್ದರು. ಆ ಬೀಜ ಯಾವುದಕ್ಕೂ ಉಪಯೋಗ ಇಲ್ಲದೆ ಬೆಳೆ ಸರಿಯಾಗಿ ಬಾರದೆ ರೈತರಿಗೆ ನಷ್ಟವಾಗಿರುವುದನ್ನು ನಾವು ಕಂಡಿದ್ದೇವೆ.

ಶ್ರೀ ಶಿವಾನಂದ ಕೌಜಲಗಿ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆದ್ದರಿಂದ ಇದರ ಬಗ್ಗೆ ನಮ್ಮ ಸರ್ಕಾರ ಹೆಚ್ಚಿನ ಗಮನಹರಿಸಬೇಕೆಂದು ಹೇಳುತ್ತಾ, ಬಿತ್ತನೆ ಬೀಜ, ಗೊಬ್ಬರಗಳನ್ನು ಅವರಿಗೆ ಕೊಡುವುದರ ಜೊತೆಗೆ ಅವರು ಬೆಳೆಯತಕ್ಕ ಬೆಳೆಗೂ ಒಳ್ಳೆಯ ಬೆಲೆಯನ್ನು ನಿಗದಿಪಡಿಸುವ ಕೆಲಸವನ್ನು ಅದರಲ್ಲೂ ಮುಖ್ಯವಾಗಿ ವ್ಯಾಪಾರಿ ದೃಷ್ಟಿಯಿಂದ ಬೆಳೆಯು

ತಕ್ಕ ಕೆಲವೊಂದು ಬೆಳೆಗಳು ಏನಿವೆ. ಅದು ತೆಂಗಿನ ಬೆಳೆ ಇರಬಹುದು, ರೇಷ್ಮೆ ಇರಬಹುದು. ಕಬ್ಬಿನ ಬೆಳೆ ಇರಬಹುದು, ಹತ್ತಿ, ಅರಿಶಿಣದ ಬೆಳೆ ಇರಬಹುದು, ಇವುಗಳಿಗೆ ಕೂಡಾ ಸರಿಯಾದ ಬೆಲೆಯನ್ನು ನಿಗದಿ ಮಾಡಿ ಅವರನ್ನು ವ್ಯಾಪಾರಿಗಳ ಮತ್ತು ಮಧ್ಯವರ್ತಿಗಳ ಕಪಿಮುಷ್ಟಿಯಿಂದ ಪಾರುಮಾಡಿ ಅವರು ತೊಂದರೆಗೆ ಒಳಗಾಗುವುದನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಹೇಳ ಬೇಕೆಂದರೆ, ಹೋದವರ್ಷ ಹತ್ತಿ ಬೆಳೆಗೆ ಕೆಲವೊಂದು ಕಡೆ ಒಳ್ಳೆಯ ಬೆಲೆ ಸಿಕ್ಕಿತ್ತು. ಆದರೆ ಕೆಲವು ಕಡೆ ಕನಿಷ್ಟ ಬೆಲೆ ಸಿಕ್ಕಿದ ನಿದರ್ಶನಗಳು ಹೆಚ್ಚು ಇವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಮುಂದೆಬರಬೇಕು. ಅವರಿಗೆ ಸರಿಯಾದಬೆಲೆ ನಿಗದಿ ಮಾಡಿ ಮಧ್ಯ ವರ್ತಿಗಳ ಕೈನಿಂದ ಆಗುತ್ತಿರುವ ರೈತರ ಶೋಷಣೆಯನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇವಕ್ಕೆ ಸಂಬಂಧಪಟ್ಟ ಇಲಾಖೆಗಳು ತಮ್ಮ ಕಾರ್ಯಾಚರಣೆಯನ್ನು ಚುರುಕುಗೊಳಿಸಬೇಕೆಂದು ಹೇಳುತ್ತೇನೆ. ಅಕ್ರಮ ಸಾಗುವಳಿ ಬಗ್ಗೆ ನಮ್ಮ ಸರ್ಕಾರದ ಧೋರಣೆ ಏನು ಇದೆ, ಎಂಬ ಬಗ್ಗೆ ಕಂದಾಯ ಇಲಾಖೆಯ ವತಿಯಿಂದ ಸಂಬಂಧಪಟ್ಟ ಮಂತ್ರಿಗಳು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ಅಕ್ರಮ ಸಾಗುವಳಿ ಮಾಡುತ್ತಿರುವ ಜಮೀನಿನಲ್ಲಿ ಯಾರು ಬಡವರು ಇದ್ದಾರೆ. ಅವರಿಗೆ ಅವನ್ನು ಸಕ್ರಮ ಗೊಳಿಸಬೇಕಾಗುತ್ತದೆ. ರವಿನ್ಯೂ ಲ್ಯಾಂಡ್ ಅಥವಾ ದರ್ಖಾಸ್ತು ಜಾಗದಲ್ಲಿ ಏನು ಆ ಜನ ಬೆಳೆ ಬೆಳೆ ಯುತ್ತಿದ್ದಾರೆ ಅದನ್ನು ಅವರಿಗೆ ಸಕ್ರಮಗೊಳಿಸುವ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡಿದೆ ಅದಷ್ಟು ಜಾಗ್ರತೆ ಇದನ್ನು ಅನುಷ್ಠಾನಕ್ಕೆ ತರುವುದಕ್ಕೋಸ್ಕರ ಕಾನೂನು ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡುತ್ತೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಹಿರಿಯ ಸದಸ್ಯರಾದ ಮಾನ್ಯ ಖರ್ಗೆಯವರು ಒಂದು ಮಾತನ್ನು ಹೇಳಿದರು. ಇವತ್ತು ಲಕ್ಷಾಂತರ ಎಕರೆ ಜಮೀನು ಅಕ್ರಮ ಸಾಗುವಳಿಯಾಗಿದೆ. ಇದನ್ನು ನಾವು ಎರಡು ಅಥವಾ ಮೂರು ಭಾಗಗಳನ್ನಾಗಿ ವಿಂಗಡಣೆ ಮಾಡ ಬಹುದು. ಮೊದಲನೆಯದಾಗಿ ಯಾರು ಕೃಷಿಕರಾಗಿ ಬೇರೆ ಯಾವುದೇ ಆದಾಯದ ಮೂಲ ಇಲ್ಲದೇ ಬಡತನದಿಂದ ಬಳಲಿ ಎಲ್ಲಿ ಒಂದೆರಡು ಎಕರೆ ಭೂಮಿ ಆಕ್ರಮಿಸಿಕೊಂಡು ವ್ಯವಸಾಯ ಮಾಡುತ್ತಿರು ವುದು. ಎರಡನೆಯದು ಎಂದರೆ ಈಗಾಗಲೇ ಜಮೀನು ಹೊಂದಿದ್ದು ಅದರ ಅಕ್ಕಪಕ್ಕದ ಖಾಲಿ ಜಮೀನು ಇದ್ದರೆ ಅದನ್ನು ಒತ್ತುವರಿ ಮಾಡಿಕೊಂಡು ತಮ್ಮ ಫಸಲು ಬೆಳೆಯುತಕ್ಕ ಜಮೀನನ್ನು ಹೆಚ್ಚು ಮಾಡಿಕೊಳ್ಳುವುದು ಮತ್ತೆ ಮೂರನೆಯದಾಗಿ ಬಾಗಾಯಿತು ಅಥವಾ ತೋಟಗಳು. ದೊಡ್ಡ ದೊಡ್ಡ ಎಸ್ಟೇಟ್‌ಗಳು ಇದರಲ್ಲಿ ಬರುತ್ತವೆ. ಕಾಫಿ ಬೆಳೆ, ಟೀ ಬೆಳೆ, ಮೆಣಸು ಬಾಗಾಯಿತು ಸರ್ಕಾರಿ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡತಕ್ಕ ಕೆಲಸ ನಡೆದಿದೆ. ಇದನ್ನು ವರ್ಗೀಕರಣ ಮಾಡು ವಾಗ ಹೆಚ್ಚಿನ ಆದ್ಯತೆಯನ್ನು ಮಾನವೀಯ ದೃಷ್ಟಿಯಿಂದ, ಬಡತನದ ದೃಷ್ಟಿಯಿಂದ ನೋಡಿ ಮಾಡ ಬೇಕಾಗುತ್ತದೆ. ಬೇರೆ ದೃಷ್ಟಿಯಿಂದ ನೋಡದೇ ಯಾರು ಬಡ ರೈತರು ಇದ್ದಾರೆ, ಯಾರು ಹರಿಜನ ಗಿರಿಜನರು ಇದ್ದಾರೆ, ಅಂತಹವರ ಜಮೀನನ್ನು ಸಕ್ರಮಗೊಳಿಸುವ ಕೆಲಸವನ್ನು ಆದಷ್ಟು ಜಾಗ್ರತೆ ಮಾಡುವ ಬಗ್ಗೆ ಸರ್ಕಾರ ಆದೇಶ ಹೊರಡಿಸಬೇಕು. ಅದನ್ನು ಸರ್ಕಾರ ಮಾಡುತ್ತದೆಂದು ನಾನು ಭರವಸೆ ಇಟ್ಟುಕೊಂಡಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಾತನ್ನು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುತ್ತೇನೆ. ಏನು ಭೂಸುಧಾರಣೆ ಕಾನೂನನ್ನು ಕರ್ನಾಟಕ ರಾಜ್ಯದಲ್ಲಿ ತಂದೆವು. ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ನಾವು ಹಿಂದೆ ಅದನ್ನು ದಕ್ಷತೆ ಯಿಂದ ಜಾರಿಗೊಳಿಸಿದೆವು. ಇದರಿಂದ ಅನೇಕ ಲಕ್ಷ ಬಡ ರೈತ ಜನರಿಗೆ ಅನುಕೂಲವಾಗಿ ಒಡೆತನ ಕೂಡಾ ಸಿಕ್ಕಿತು. ಅದರ ಮೂಲ ಉದ್ದೇಶ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದಾಗಿತ್ತು ಯಾವ ರೈತ ವಿದ್ಯೆ ಇಲ್ಲದೇ ರಕ್ಷಣೆ ಇಲ್ಲದೇ ಗೇಣಿದಾರನಾಗಿ ಅನೇಕ ವರ್ಷಗಳಿಂದ ಭೂಮಿಗೆ ದ್ವಾರ ಹಾಕಿಸಿಕೊಂಡ ಪಶುವಿನಂತೆ ದುಡಿಯುತ್ತಿದ್ದ, ಅವನಿಗೆ ಒಡೆತನ ದೊರಕಬೇಕೆನ್ನುವ ದೃಷ್ಟಿಯಿಂದ ಈ ಕಾನೂನನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಿದ್ದರು. ಇದರಿಂದ ಸಹಸ್ರಾರು ಮಂದಿಗೆ ಉಪ ಯೋಗವಾಯಿತು. ಗೇಣಿದಾರನ ಪರವಾಗಿ ಜಮೀನು ಆಗಬೇಕೆಂದು ತೀರ್ಮಾನಗಳು ಆದವು. ಆಗ ಭೂನ್ಯಾಯ ಮಂಡಲಿಗಳು ತಾಲ್ಲೂಕು ಮಟ್ಟದಲ್ಲಿ ಹಾಗೂ ಕ್ಷೇತ್ರಗಳ ಮಟ್ಟದಲ್ಲಿ ರಚನೆ ಆದವು.

೩.೦೦ ಪಿ. ಎಂ.

ಅದರಲ್ಲಿ ಪ್ರಜಾಪ್ರತಿಗಳು ಇರುತ್ತಿದ್ದರು ಸಂಬಂಧಪಟ್ಟ ಶಾಸಕರು ಇರುತ್ತಿದ್ದರು ವಿರೋಧಪಕ್ಷದ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡುತ್ತಿದ್ದರು. ಹಾಗೂ ನಾಯಕರು ಇರುತ್ತಿದ್ದರು ಅಧಿಕಾರಿವರ್ಗದವರನ್ನು ಸೇರಿಸಿ ಈ ಮಂಡಲಿಗಳನ್ನು ರಚನೆ ಮಾಡಿದ್ದನ್ನು ನಾವು ನೋಡಿದ್ದೇವೆ. ಅಲ್ಲಿಂದ ಮುಂದೆ ನ್ಯಾಯ ಒದಗಿಸಲು ಎ. ಸಿ ಕೋರ್ಟುಗಳು ಮತ್ತು ಹೈಕೋರ್ಟ್ ಇತ್ತು ಅಲ್ಲಿಂದ ಮತ್ತೆ ಕೇಸ್‌ಗಳು ತಾಲ್ಲೂಕಿಗೆ ಬರುತ್ತಿದ್ದವು ಆದರೆ ಇವತ್ತು ನಾವು ನೋಡುತ್ತಿದ್ದೇವೆ. ಭಾರತೀಯ ಜನತಾ ಪಕ್ಷದ ನಾಯಕರು ಇಲ್ಲಿ ರೈತರ ಬಗ್ಗೆ ಬಹಳ ಸಹಾನುಭೂತಿಯಿಂದ ರೈತರ ಪರವಾಗಿ ಮಾತ

ನಡೆಯುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಅವರು ಈ ವಿಷಯವನ್ನು ಏತಕ್ಕೆ ಗಮನಕ್ಕೆ ತಗೆದು ಕೊಳ್ಳಲಿಲ್ಲವೋಗುತ್ತಿಲ್ಲ. ರೈತ ಮುಖಂಡರುಗಳು ಹಾಗೂ ವಿರೋಧಪಕ್ಷದ ನಾಯಕರು ಈವೊಂದು ದಿಶೆಯಲ್ಲಿ ಕಾರ್ಯ ತತ್ಪರರಾಗಲಿಲ್ಲ. ರೈತರಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂಬ ಮೂಲಭೂತವಾದ ಧ್ಯೇಯ ಧೋರಣೆಗೆ ತದ್ವಿರುದ್ಧವಾಗಿ ಅಪ್ಪೆಲೇಟ್ ಟ್ರಿಬ್ಯುನಲ್‌ಗಳನ್ನು ಏನು ರಚನೆ ಮಾಡಿದ್ದಾರೆ ಅವು ಭೂ ಅನ್ಯಾಯದ ಮಂಡಳಿಗಳಾಗಿಳಿವೆ ಎಂದರೆ ತಪ್ಪಾಗಲಾರದು. ಸಹಸ್ರಾರು ಕೇಸುಗಳು ಇವತ್ತು ಅಲ್ಲಿಗೆ ಟ್ರಾನ್ಸ್‌ಫರ್ ಆಗಿವೆ. ಬಹಳ ವ್ಯಥೆಯಿಂದ ಮತ್ತು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ, ಇವತ್ತು ಸಹಸ್ರಾರು ಮಂದಿ ಭೂನ್ಯಾಯ ಮಂಡಳಿಗಳಿಂದ ಉಪಯೋಗ ಪಡೆದಿದ್ದರು ಅವರು ಇನತ್ತು ನ್ಯಾಯದಿಂದ ವಂಚಿತರಾಗಿದ್ದಾರೆ. ಒಬ್ಬ ಸಾಮಾನ್ಯ ರೈತ ಅದರಲ್ಲಿ ಒಂದೆರಡು ಎಕರೆ ಭೂಮಿಯನ್ನು ಇಟ್ಟುಕೊಂಡಿರುವವನು ಗೇಣಿದಾರನಾಗಿ ಹಳ್ಳಿಮಟ್ಟದಿಂದ, ಗ್ರಾಮಮಟ್ಟದಿಂದ ತಾಲ್ಲೂಕು ಮಟ್ಟದಿಂದ ಜಿಲ್ಲಾಮಟ್ಟದಿಂದ ನ್ಯಾಯವನ್ನು ಪಡೆಯುವುದಕ್ಕೆ ಸಾಧ್ಯವೆ ? ಅವಕ್ಕೆ ಸಂಬಂಧಪಟ್ಟ ಕಾಗದಗಳು, ದಾಖಲೆಗಳು ಅವನ ಹತ್ತಿರ ಇರುವುದಕ್ಕೆ ಸಾಧ್ಯವೇ ? ನ್ಯಾಯವನ್ನು ಕೋರುವ ಸಂದರ್ಭದಲ್ಲಿ ವಕೀಲರ ಅಥವಾ ಕಾನೂನು ತಜ್ಞರ ಮೊರೆ ಹೋಗಲಿಕ್ಕೆ ಆತನಲ್ಲಿ ಆರ್ಥಿಕ ವ್ಯವಸ್ಥೆ ಇರುತ್ತದೆಯೇ ? ಇದನ್ನು ಕೂಲಂಕುಷವಾಗಿ ಮತ್ತೊಮ್ಮೆ ಈ ಸದನ ಪರಿಶೀಲಿಸಬೇಕೆಂದು ಆಗ್ರಹ ಪೂರ್ವಕವಾಗಿ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಮೊದಲನೆಯದಾಗಿ ಅಪೆಲೇಟ್ ಟ್ರಿಬ್ಯುನಲ್‌ಗಳನ್ನು ರದ್ದು ಮಾಡಬೇಕು. ಮತ್ತೆ ಭೂ ನ್ಯಾಯ ಮಂಡಲಿಗಳನ್ನು ತಾಲ್ಲೂಕು ಮಟ್ಟದಲ್ಲಿ ರಚನೆ ಮಾಡಿ ಎಲ್ಲಾ ಜನರಿಗೂ ಶಾಸಕರಿಗೂ ಹಿಂದುಳಿದ ವರ್ಗದವರಿಗೂ ಹರಿಜನ ಗಿರಿಜನರಿಗೂ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟು ಬಡವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ಸಹಸ್ರಾರು ಕೇಸುಗಳು ಅನ್ಯಾಯಕ್ಕೆ ಒಳಗಾಗಿವೆ ಎಂದು ತಮ್ಮ ಮುಂದೆ ಹೇಳಿದರೆ ತಪ್ಪಾಗುವುದಿಲ್ಲ. ಮೈಸೂರು ಜಿಲ್ಲೆಯಲ್ಲಿಯೇ ಸಹಸ್ರಾರು ಕೇಸುಗಳು ಅಪ್ಪೆಲೇಟ್ ಟ್ರಿಬ್ಯುನಲ್ ಮುಂದಿವೆ. ಸಹಸ್ರಾರು ಕೇಸ್‌ಗಳಲ್ಲಿ ಭೂ ಮಾಲೀಕರ ಪರವಾಗಿ ಈಗಾಗಲೇ ತೀರ್ಮಾನವನ್ನು ಕೊಟ್ಟಿದ್ದಾರೆ. ಇನ್ನು ಕೇವಲ ನೂರಾರು ಕೇಸುಗಳು ಇವೆ ಈ ಜಿಲ್ಲಾ ಮಟ್ಟದಲ್ಲಿ ಟ್ರಿಬ್ಯುನಲ್‌ಗಳನ್ನು ಏನು ಮಾಡಿದ್ದಾರೆ. ಅವುಗಳ ಪೈಕಿ ಈಗಾಗಲೇ ಏಳೆಂಟು ಟ್ರಿಬ್ಯೂನಲ್‌ಗಳನ್ನು ಕೇಸ್‌ಗಳು ಮುಗಿದಿದೆ ಎಂದು ವೈಂಡಪ್ ಮಾಡಿದ್ದಾರೆ ಇನ್ನೂ ಕೆಲವು ಕಡೆಗಳಲ್ಲಿ ಕೇಸುಗಳು ನಡೆಯುತ್ತಿವೆ. ಕೆಲವು ಜಿಲ್ಲೆಗಳಲ್ಲಿ ಕೇಸುಗಳನ್ನು ಆತುರಾತುರವಾಗಿ ವಿಲೇವಾರಿ ಮಾಡುತ್ತಿದ್ದಾರೆ. ಇದನ್ನು ಈ ಸಭೆಯ ಮುಖಾಂತರ ತೀವ್ರವಾಗಿ ಖಂಡಿಸಬೇಕಾಗಿದೆ. ಜನತೆಗೆ ಉಪಕಾರವಾಗಬೇಕು ಎನ್ನುವ ಮೂಲಭೂತವಾದ ಧ್ಯೇಯದೋರಣೆಗಳಿಗೆ ಅಡ್ಡಿಯಾಗಿ, ಯಾವ ಒಂದು ಸಾಮಾಜಿಕ ನ್ಯಾಯವನ್ನು ಬಡ ಗೇಣಿದಾರನಿಗೆ ಕೊಡಬೇಕೆನ್ನುವ ದೃಷ್ಟಿಯಿಂದ ಆ ಕಾನೂನು ತರಲಾಗಿತ್ತು. ಈಗ ಅದಕ್ಕೆ ತದ್ವಿರುದ್ಧವಾಗಿ ತಂದಿರತಕ್ಕ ಈ ಕಾನೂನನ್ನು ಕೂಡಲೇ ರದ್ದು ಪಡಿಸಬೇಕೆಂದು ಸರ್ಕಾರದ ಗಮನಕ್ಕೆ ಮತ್ತು ಕಾನೂನು, ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ಹಾಗೂ ಕಂದಾಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಈ ಕಡೆಗೆ ಗಮನ ಹರಿಸಿ ಆದಷ್ಟು ಬೇಗ ಈ ಅಪೆಲ್ಲೆಟ್ ಟ್ರಿಬ್ಯೂನಲ್‌ಗಳನ್ನು ರದ್ದುಮಾಡಬೇಕೆಂದು ಸಭೆಯ ಮೂಲಕ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ವ್ಯವಸ್ಥೆ ಜಾರಿಗೆ ಬಂದು ಅವು ಈಗ ಅಸ್ತಿತ್ವದಲ್ಲಿದೆ. ಹಿಂದಿನ ಸರ್ಕಾರ ಇದನ್ನು ಜಾರಿಗೆ ತರುವಲ್ಲಿ ಅವರು ಸೂಕ್ಷ್ಮಾ ಸೂಕ್ಷ್ಮತೆಗಳನ್ನು ಪರಿಗಣಿಸಿ ಸಾಕಷ್ಟು ಪರ್ಯಾಲೋಚನೆ ಮಾಡಿ ಸಾಕಷ್ಟು ವಿವಿಧ ಹಂತಗಳಲ್ಲಿ ಈ ಮನೆಯಲ್ಲಿ ಚರ್ಚೆ ಮಾಡಿ ಜಾರಿಗೆ ತಂದಿದ್ದಾರೆಂದು ನನಗೆ ಅನಿಸುವುದಿಲ್ಲ. ಏಕೆಂದರೆ ಕೆಲವಾರು ದಿವಸ ನಾವು ಆ ಸಭೆಗಳಲ್ಲಿ ಭಾಗವಹಿಸಿದ್ದೆವು ಈ ಸ್ಥಳೀಯ ಚುನಾಯಿತ ಸಂಸ್ಥೆಗಳು ಏನಿವೆ, ಇವು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮುಖ್ಯವಾಗಿ ಗ್ರಾಮೀಣ ಮಟ್ಟದಲ್ಲಿ ಸ್ಥಳೀಯ ಜನರಿಂದ ಚುನಾಯಿತರಾದ ಸದಸ್ಯರುಗಳಿಂದ ಕೂಡಿದ ಚುನಾಯಿತ ಸಂಸ್ಥೆಗಳು ಇರಬೇಕಾದುದು ನ್ಯಾಯ ಹಿಂದೆ ಗ್ರೂಪ್ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡ್‌ಗಳು ಇದೇ ರೀತಿ ಇದ್ದವು.

ಆಗ ಕೂಡ ಅಲ್ಲಿ ಚುನಾವಣೆಗಳು ನಡೆದು ಚುನಾಯಿತ ಸದಸ್ಯರು ಅಧಿಕಾರವನ್ನು ನಿರ್ವಹಿಸುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ, ಈ ಪಾರ್ಟಿ ಅಥವಾ ಪಕ್ಷ ಭೇಧ ನೀತಿಯಿಂದ ಆದರೆ ಪಕ್ಷದ ಆಧಾರದ ಮೇಲೆ ಯಾರು ಆಯ್ಕೆಯಾಗಿರುತ್ತಾರೆ ಅವರು ಕೇವಲ ಒಂದು ದೃಷ್ಟಿ ಕೋನದಿಂದ ಕೆಲಸ ಮಾಡುತ್ತಾರೆಯೇ ವಿನಹ ಎಲ್ಲರಿಗೂ ನ್ಯಾಯ ದೊರಕಿಸತಕ್ಕಂಥ ನಿಲುವು ತಳೆಲಿಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಇದರಿಂದಾಗಿ ಗ್ರಾಮೀಣ ಮಟ್ಟದಲ್ಲಿ ಯಾವ ಶಾಂತಿ, ಸುವ್ಯವಸ್ಥೆ, ಏನು ಒಂದು ಪರಸ್ಪರ ಸಹಕಾರ, ನೆಮ್ಮದಿ ಇತ್ತು ಆ ಬಗೆಯ ಜೀವನ ಇಂದು ಕದಡಿಹೋಗಿದೆ. ಎಲ್ಲಿ ನೋಡಿದರೂ ಬೆಳಿಗ್ಗೆ ಎದ್ದಾಗ ಪಂಚಾಯಿತಿಗಳು. ಅವರ ಕಾರ್ಯನಿರ್ವಹಣೆಗಿಂತ ಹೆಚ್ಚಾಗಿ ಹೊಡೆದಾಟ, ಬಡಿದಾಟ

ನಡೆಯುತ್ತದೆ. ಮನಸ್ಸೇಚ್ಛೆಯಾಗಿ ನಿರ್ಣಯಗಳನ್ನು ಮಾಡಿಕೊಂಡು ಹೋಗುತ್ತಾರೆ. ಕೆಲವು ಕಡೆ ತಿಂಗಳುಗಟ್ಟಲೆ ಆದರೂ ಚರ್ಚೆಗೇ ಬರುವುದಿಲ್ಲ, ಮೀಟಿಂಗ್‌ಗಳೂ ನಡೆಯುವುದಿಲ್ಲ. ಇಂತಹ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಅಲ್ಲಿಯ ನೆಮ್ಮದಿಯ ಜೀವನ ಕಲುಷಿತವಾಗಿ ಪರಸ್ಪರ ದ್ವೇಷ, ವೈಷಮ್ಯ, ಸೇಡು ಇಂಥಾದ್ದು ಹೆಚ್ಚು ಆಗುವುದಕ್ಕೆ ಕಾರಣವಾಗಿದೆ. ಇದನ್ನು ಹೇಳುವಾಗ ನಾನು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯಬಯಸುವುದು ಏನೆಂದರೆ, ತಾಲ್ಲೂಕು ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ, ಹಾಗೂ ಜಿಲ್ಲಾ ಮಟ್ಟದಲ್ಲಿ ಮತ್ತು ಈ ರಾಜ್ಯದ ಹೆಚ್ಚಿನ ಪ್ರತಿನಿಧಿಗಳನ್ನು ಒಳಗೊಂಡಿರುವ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಮಟ್ಟದಲ್ಲಿ ಇದರ ಬಗ್ಗೆ ಕೂಲಂಕುಷವಾದ ಚರ್ಚೆಯಾಗಬೇಕು. ಇದರ ಸಾಧ್ಯತೆ, ಬಾಧ್ಯತೆಗಳನ್ನು ಆಗುಹೋಗುಗಳನ್ನು, ಪರವಿರೋಧಗಳನ್ನು, ನ್ಯಾಯ ಅನ್ಯಾಯಗಳನ್ನು ಚರ್ಚಿಸಿ ಇದಕ್ಕೆ ಸುಧಾರಣೆಯನ್ನು ಹಾಗೂ ಬದಲಾವಣೆಗಳನ್ನು ತರಬೇಕಾದಂಥ ಸಂದರ್ಭ ಬಂದರೆ ಖಂಡಿತವಾಗಿ ತರಬೇಕು. ಏಕೆಂದರೆ ಪ್ರಜಾಪ್ರತಿನಿಧಿಗಳನ್ನು ಒಳಗೊಂಡಂಥ ಸಂಘಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಗ್ರಾಮರಾಜ್ಯದ ಕನಸು ಎಂದು ಏನು ಹೇಳುತ್ತಿದ್ದೇವೆ, ಪೂಜ್ಯ ಮಹಾತ್ಮ ಗಾಂಧಿಯವರು ಕಂಡಂಥ ಕನಸಾಗಲೀ ಶ್ರೀ ಜಯಪ್ರಕಾಶ್ ನಾರಾಯಣ ರಂಥ ದೇಶಪ್ರೇಮಿಗಳು ಕಂಡಂಥ ಕನಸಾಗಲೀ ಅದು ಈ ಮೂಲಕ ನನಸಾಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಅವರ ಮೂಲಭೂತ ಧ್ಯೇಯ ಧೋರಣೆಗಳು ಏನಿವೆ, ಗ್ರಾಮಾಂತರದಲ್ಲಿ ಕೆಳಸ್ತರದಲ್ಲಿ ತಮ್ಮ ತಮ್ಮ ಕೆಲಸಗಳನ್ನು ತಮಗೆ ಬೇಕಾದಂಥ ಸೌಲಭ್ಯಗಳನ್ನು ಗ್ರಾಮ ಮಟ್ಟದಲ್ಲಿ ಕುಡಿಯುವ ನೀರಾಗಲೀ, ವಿದ್ಯುಚ್ಛಕ್ತಿಯಾಗಲೀ, ಜಮೀನಿಗೆ ಸಂಬಂಧಪಟ್ಟಿದ್ದಾಗಲೀ, ನಿವೇಶನವಾಗಲೀ, ಮನೆಗಳನ್ನು ಒದಗಿಸಿಕೊಡತಕ್ಕಂಥಾದ್ದೇ ಆಗಲಿ, ಇಂತಹ ಒಂದು ಸಾರ್ವಜನಿಕ ಕೆಲಸವನ್ನು ಮಾಡತಕ್ಕಂಥ ತೀರ್ಮಾನವನ್ನು ಅಲ್ಲಿ ತೆಗೆದುಕೊಂಡು ಕಾರ್ಯ ನಿರ್ವಹಿಸತಕ್ಕಂಥ ಒಂದು ಸ್ಥಳೀಯ ಸಂಸ್ಥೆಗಳು ಏನಿವೆ, ಅವು ಬೇಕಾಗಿವೆ ಆದರೆ ಇದು ಬೇಕಾಗಿರತಕ್ಕಂಥ ಸಂದರ್ಭದಲ್ಲಿ ಇದರ ಮೂಲಕ ಉಪಯೋಗ ಆಗುತ್ತಿದೆಯೋ ಅಥವಾ ಗೊಂದಲ ಉಂಟಾಗುತ್ತಿದೆಯೋ ಜನರಿಗೆ ತೊಂದರೆ ಆಗುತ್ತಿದೆಯೋ ಅಥವಾ ಇಲ್ಲವೋ ಎಂಬುದನ್ನು ಗಮನಿಸಬೇಕಾಗಿದೆ. ಇವತ್ತು ನಾವು ಎಲ್ಲಿ ನೋಡಿದರೂ ಇದು ಒಳ್ಳೆಯ ಪಂಚಾಯತಿ ಬಂತಪ್ಪ, ಎಲ್ಲಾ ಪಂಚಾಯತಿ ಆಗಿಹೋಗಿದೆ, ನಮ್ಮ ಕೆಲಸಗಳೇ ಆಗುತ್ತಿಲ್ಲ ಎಂದು ಜನ ಹೇಳುತ್ತಾರೆ' ಸಾಮಾನ್ಯ ಜನತೆ ಒಂದು ಅರ್ಜಿಯನ್ನು ತೆಗೆದುಕೊಂಡು ಹೋಗಬೇಕಾದರೆ ೨೫ ಕಿಲೋಮೀಟರ್ ದೂರದಲ್ಲಿ ಇರುವ ಪ್ರಧಾನರನ್ನು, ಸೆಕ್ರೆಟರಿಯವರನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಪರಿಹಾರ ಕೂಡ ತಕ್ಷಣ ದೊರೆಯುವುದಿಲ್ಲ. ಇಂತಹ ಸಂದರ್ಭ ಬಂದಿದೆ. ತಮಗೆ ನಾನು ಒಂದು ಉದಾಹರಣೆಯನ್ನು ಕೊಟ್ಟು ಹೇಳಬೇಕೆಂದರೆ, ಜವಾಹರ್‌ರೋಜ್‌ಗಾರ್ ಯೋಜನೆಯನ್ನು ಕೇಂದ್ರ ಸರ್ಕಾರ ಮಂಜೂರಾದ ಹಣದ ಚೌಕಟ್ಟಿನಲ್ಲಿ ನಡೆಯಬೇಕೆಂದು ತೆಗೆದುಕೊಂಡು ಬಂದಿತು. ಅದು ನೇರವಾಗಿ ಮಂಡಲ ಪಂಚಾಯತಿಗೆ ಇರುವ ಅಧಿಕಾರ. ಪ್ರಧಾನರು ಮತ್ತು ಅಲ್ಲಿನ ಕಾರ್ಯದರ್ಶಿ ಮತ್ತು ಸದಸ್ಯರು ಒಳಗೊಂಡಂತೆ ಅವರ ತೀರ್ಮಾನಕ್ಕೆ ಬದ್ಧವಾಗಿ ಉಪಯೋಗ ಮಾಡತಕ್ಕಂಥ ಕೆಲಸ. ಅವರೆ ಏನಾಗುತ್ತಿದೆ ಎಂದರೆ, ನನ್ನ ಪಣಸೂರು ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳಬೇಕಾದರೆ, ೫೬ ಲಕ್ಷದ ೬ ಸಾವಿರ ರೂಪಾಯಿ ಹಣ ಅವರಿಗೆ ಮಂಜೂರಾತಿಯಾಗಿ ಒಂದು ವರ್ಷದಿಂದ ಬಿಡುಗಡೆಯಾಗಿ ಬಂದಿದೆ. ಅವರ ಹತ್ತಿರ ಹಣ ಇದೆ. ಅದನ್ನು ೧೨ ಮಂಡಲ ಪಂಚಾಯತಿಗಳಿಗೆ ೩ಲಕ್ಷ–೪ಲಕ್ಷ–೨½ ಲಕ್ಷ ಎಂದು ಅವರ ಅನುಕೂಲಕ್ಕೆ ತಕ್ಕ ಹಾಗೆ ಹಂಚಿದ್ದಾರೆ ಆದರೆ ಕೆಲಸ ಕಾರ್ಯಗಳು ಎಲ್ಲಿಯವರೆಗೆ ಆಗಿದೆ ಎಂದು ಪರಿಶೀಲನೆ ಮಾಡಿದಾಗ ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಹೋಗಿ ಪುನರ್‌ವಿಮರ್ಶೆ ಮಾಡಿ ನೋಡಿದಾಗ ಬಹಳ ಆಶ್ಚರ್ಯಕರವಾದ ಸಂಗತಿ ಕಾಣಿಸಿದ್ದು ಎಂದರೆ ಹತ್ತಾರು ಲಕ್ಷ ಕೂಡ ಅದರಲ್ಲಿ ಖರ್ಚಾಗಿಲ್ಲ. ಸುಮಾರು ೪೫ ಲಕ್ಷ ರೂಪಾಯಿ ಹಾಗೆಯೇ ಉಳಿದಿದೆ. ಹಣಕಾಸಿನ ಅಧಿಕಾರವನ್ನು ಅವರಿಗೇ ಕೊಟ್ಟಿದೆ, ತೀರ್ಮಾನ ಅವರೇ ತೆಗೆದುಕೊಳ್ಳಬಹುದು. ಎಲ್ಲಿ ಯಾವ ಕೆಲಸ ಆಗಬೇಕೆಂದು ನಿಲುವನ್ನು ಅವರೇ ತೆಗೆದುಕೊಳ್ಳಬಹುದು. ಇಂಥಾದ್ದರಲ್ಲಿಯೂ ಏಕೆ ಈ ರೀತಿ ಹಣದ ಸದುಪಯೋಗ ಆಗುತ್ತಿಲ್ಲ? ಇದಕ್ಕೆ ಕಾರಣ ಅವರಲ್ಲಿ ಪರಸ್ಪರ ಒಡಂಬಡಿಕೆ ಇರುವುದಿಲ್ಲ, ಪರಸ್ಪರ ಸಹಕಾರ ಇರುವುದಿಲ್ಲ, ಒಮ್ಮತ ಇರುವುದಿಲ್ಲ. ಪ್ರಧಾನರು ಸೈನ್ ಹಾಕಿದ ವಿಷಯದಲ್ಲಿ ಸೆಕ್ರೆಟರಿ ಹಾಕಿರುವುದಿಲ್ಲ. ಸೆಕ್ರೆಟರಿ ಸೈನ್ ಹಾಕಿದ ವಿಷಯದಲ್ಲಿ ಸದಸ್ಯರು ಹಾಕಿರುವುದಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬೇಕೆಂದು ಇರುವಾಗ ಇಂಥಾದ್ದೇ ಕೆಲಸ ಆಗಬೇಕು, ೧೨ ರೂಪಾಯಿ ಮಾತ್ರ ದಿನಗೂಲಿ ಕೊಡಬೇಕೆಂದು ನಿಯಮ ಮಾಡಿಕೊಟ್ಟಿದ್ದಾರೆ. ಆ ನಿಯಮಕ್ಕೆ ಒಳಪಟ್ಟು ಕೆಲವುಕಡೆ ನಿರುದ್ಯೋಗಿ ಜನತೆ ಕೆಲಸ ಮಾಡಲು ಮುಂದೆ ಬರುವುದಿಲ್ಲವೆಂದು ನಮಗೆ ಒಂದು ಸಲ ಹೇಳಿದರು. ಮತ್ತೊಂದು ಸಲ ಕೆಲಸಕ್ಕೆ ಜನರು ಮುಂದೆ ಬಂದರೂ ಕೂಡ ಕೆಲಸಗಳು ಸಾಗುವುದಿಲ್ಲವೆಂದು ಇನ್ನೊಂದುಸಾರಿ ಹೇಳುತ್ತಾರೆ. ಹೀಗೆ ನಾನಾ ನ್ಯೂನತೆಗಳು ಇವೆ. ಇವುಗಳನ್ನು ಸರಿಪಡಿಸು

ಮಂಥ ನಿಟ್ಟಿನಲ್ಲಿ ನಾವೆಲ್ಲರೂ ಗಮನಹರಿಸತಕ್ಕ ಒಂದು ಸಂದರ್ಭ ಬಂದಿದೆ. ಎಂದು ನಾನಾದರೂ ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಜಿಲ್ಲಾಪರಿಷತ್ತುಗಳ ವಿಚಾರ. ತಾಲ್ಲೂಕು ಪಂಚಾಯಿತಿಗಳು, ಮಂಡಲ್ ಪಂಚಾಯಿತಿಗಳ ಮಟ್ಟದಲ್ಲಿ ಆದಂಥ ತೀರ್ಮಾನಗಳನ್ನು ಜಿಲ್ಲಾಪರಿಷತ್ ಗಮನಕ್ಕೆ ತರಬೇಕಾಗುತ್ತದೆ. ಜಿಲ್ಲಾಪರಿಷತ್ತುಗಳ ಕಾರ್ಯನಿರ್ವಹಣೆಗಳು ಕೆಲವೊಂದು ಕಾನೂನುಗಳ ಚೌಕಟ್ಟಿನಲ್ಲಿ ನಡೆಯುತ್ತದೆ. ಈ ಜಿಲ್ಲಾಪರಿಷತ್ತುಗಳ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯನ್ನು ತೆಗೆದುಕೊಂಡರೆ, ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಇದ್ದಾರೆ. ಮೇಜರ್ ಇರಿಗೇಷನ್‌ಗೆ ಸಂಬಂಧಪಟ್ಟ ಅಧಿಕಾರಿಗಳೂ ಇದ್ದಾರೆ. ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರುಗಳೂ ಇದ್ದಾರೆ, ಜೂನಿಯರ್ ಇಂಜಿನಿಯರುಗಳು ಇದ್ದಾರೆ. ನಾವು ಯಾವುದೇ ದೂರನ್ನು ಯಾರಿಗೆ ಕೊಡಬೇಕೆಂಬುದೇ ಗೊತ್ತಾಗುವುದಿಲ್ಲ. ಒಂದು ಬೋರ್‌ವೆಲ್ ದುರಸ್ತಿ ಬಗ್ಗೆ ಬರೆದರೆ, ಅದು ಮಂಡಲ್ ಪಂಚಾಯಿತಿ ಸಭೆಯಲ್ಲಿ ತೀರ್ಮಾನವಾಗಿ, ನಂತರ ಜಿಲ್ಲಾಪರಿಷತ್ ಇಂಜಿನಿಯರುಗಳಿಗೆ ಹೋಗುತ್ತದೆ, ಅನಂತರ ಅವರು ಜಿಲ್ಲಾಪರಿಷತ್ತಿಗೆ ಬರೆದು, ಜಿಲ್ಲಾಪರಿಷತ್ತಿನಿಂದ ಆಜ್ಞೆ ಬಂದು ನಾವು ಕೇಳಿಕೊಂಡ ಕೆಲಸ ಜಾರಿಗೆ ಬರಬೇಕಾಗುತ್ತದೆ. ಈ ರೀತಿ ಆಗಬೇಕಾದರೆ, ಒಂದೆರಡು ತಿಂಗಳು ಕಳೆಯುತ್ತವೆ. ಈ ತರಹ ಆಡಳಿತದಲ್ಲಿ ಗೊಂದಲಮಯ ಇದೆ ಎನ್ನುವುದಕ್ಕೆ ಇದೊಂದು ಸಣ್ಣ ಉದಾಹರಣೆ. ಇದನ್ನು ಆದಷ್ಟು ಸರಳೀಕರಣಗೊಳಿಸಿ, ಯಾವ ರೀತಿಯಲ್ಲಿ ನಾಗರೀಕರಿಗೆ ಸೌಲಭ್ಯಗಳು ಸಿಗಬೇಕು, ಸವಲತ್ತುಗಳು ಸಿಗಬೇಕೋ ಆ ರೀತಿಯ ವ್ಯವಸ್ಥೆ ಮಾಡಬೇಕು. ನಾಗರೀಕರ ಸಮಸ್ಯೆಗಳನ್ನು ನಿವಾರಣೆ ಮಾಡದೇ, ಅವರಿಗೆ ಕೊಡಲಿ ಪೆಟ್ಟು ಬೀಳದಂತೆ ಮಾಡಿ ಈಗಿನ ವ್ಯವಸ್ಥೆಯನ್ನು ಉತ್ತಮಪಡಿಸಬೇಕು, ಸರಳೀಕರಣಗೊಳಿಸಬೇಕು. ಒಂದು ಬೋರ್‌ವೆಲ್ ರಿಪೇರಿಗೆ ಒಂದೂವರೆ ತಿಂಗಳ ಕಾಲಾವಕಾಶ ತೆಗೆದುಕೊಂಡರೂ ಆಗುವುದಿಲ್ಲ. ಆದ್ದರಿಂದ ಈ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಪ್ರಯತ್ನಿಸಿದರೆ, ಸಾಧ್ಯವಾಗುತ್ತದೆ, ಇದರ ಬಗ್ಗೆ ಬೇಕಾದರೆ ಕೂಲಂಕುಷವಾಗಿ ಚರ್ಚೆಯಾಗಲೀ. ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಚರ್ಚೆಯಾಗಲಿ ಏಕೆಂದರೆ ಯಾವ ಒಂದು ವ್ಯವಸ್ಥೆಯಿಂದ ಜನಸಾಮಾನ್ಯರಿಗೆ ಉಪಯೋಗವಾಗಬೇಕಾಗಿದೆ. ಆ ಬಗ್ಗೆ ಈಗ ಹಾಲಿ ಇರತಕ್ಕ ಎಡರುತೊಡರುಗಳು ಹಾಗೂ ನಿಬಂಧನೆಗಳನ್ನು ನಾವು ಸರಿಪಡಿಸದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಇನ್ನು ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯದ ನಿಲುವು ಆದರಲ್ಲೂ ಹಿಂದುಳಿದ ವರ್ಗದ ಜನತೆಯ ಬಗ್ಗೆ ನೇಮಕ ಮಾಡಿರುವ ಆಯೋಗದ ಬಗ್ಗೆ ಹೇಳಿದ್ದಾರೆ. ಮಾನ್ಯ ಚಿನ್ನಪ್ಪರೆಡ್ಡಿ ಆಯೋಗವನ್ನು ಸರ್ಕಾರ ಹಿಂದೆ ನೇಮಿಸಿತ್ತು. ಅದರ ವರದಿ ಬಂದಕೂಡಲೇ. ಅದನ್ನು ಜಾರಿಗೊಳಿಸುವುದಾಗಿ ಹೇಳಿದ್ದಾರೆ. ಹಿಂದೆ ಹಿಂದುಳಿದ ವರ್ಗಗಳ ಬಗ್ಗೆ ನೇಮಕ ಮಾಡಿದ್ದ ಹಾವನೂರು ಕಮೀಷನ್ ರಿಪೋರ್ಟ್ ತಯಾರಾಗಿ ಬಂತು. ಅದರ ಪ್ರಕಾರವೂ ಈ ಜನಾಂಗಕ್ಕೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡಬೇಕು. ಹಿಂದುಳಿದ ಜನಾಂಗಕ್ಕೆ ದಲಿತ ವರ್ಗಕ್ಕೆ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ, ಸರ್ವತೋಮುಖವಾಗಿ ಬೆಳವಣಿಗೆಯಾಗಬೇಕು. ಅವರೂ ಮುಂದೆ ಬರಬೇಕೆಂಬ ಮಾರ್ಗಸೂಚಿಯನ್ನು ಈ ಆಯೋಗಗಳು ಹಾಕಿಕೊಟ್ಟಿದ್ದವು. ಆದರೆ ದುರದೃಷ್ಟವಶಾತ್ ಹಿಂದಿನ ಸರ್ಕಾರಗಳು ಈ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ಇದ್ದುದರಿಂದ, ಹಾವನೂರ್ ಆಯೋಗದ ವರದಿ ಸರಿಯಿಲ್ಲವೆಂದು ಸುಪ್ರೀಂ ಕೋರ್ಟಿಗೆ ಹೋಯಿತು. ಆಗ ನಮ್ಮ ರಾಜ್ಯ ಸರ್ಕಾರ ಅಂಡರ್ ಟೇಕಿಂಗ್ ಕೊಟ್ಟು ಮತ್ತೊಮ್ಮೆ ಹೊಸ ಆಯೋಗ ನೇಮಿಸುತ್ತೇವೆಂದು ಹೇಳಿದರು. ನಂತರ ಶ್ರೀಯುತ ವೆಂಕಟಸ್ವಾಮಿ ನೇತೃತ್ವದಲ್ಲಿ ೧೪-೧೫ ಜನರು ಇರುವಂತಹ ಒಂದು ಆಯೋಗವನ್ನು ನೇಮಕ ಮಾಡಿದರು. ೧೯೮೪-೮೫ರಲ್ಲಿ ನಾನೂ ಕೂಡ ಸಮಾಜ ಕಲ್ಯಾಣ ಮಂತ್ರಿಯಾಗಿದ್ದೆನು. ನಾವೆಲ್ಲರೂ ಪರಿಶ್ರಮ ಪಟ್ಟು ಎಲ್ಲಾ ಕ್ಷೇತ್ರಗಳಿಂದ ಸಮೀಕ್ಷೆ ನಡೆಸಲು ಅನುಭವ ಇರತಕ್ಕಂಥವರನ್ನು ಹಾಕಿ ಕಮೀಷನ ರಚನೆ ಮಾಡಿದಾಗ, ಅದರಲ್ಲಿ ನಾವೂ ಭಾಗವಹಿಸಿದ್ದೆವು. ಸುಮಾರು ಮೂರು ವರ್ಷಗಳ ಕಾಲ ಸಾಕಷ್ಟು ಪರಿಶ್ರಮವಹಿಸಿ ಶ್ರೀಮಾನ್ ವೆಂಕಟಸ್ವಾಮಿಯವರ ನೇತೃತ್ವದಲ್ಲಿ ರಚಿಸಿದ ಆಯೋಗದವರು ಕೊಟ್ಟಂಥ ತೀರ್ಪು ಅಥವಾ ಅದರ ಶಿಫಾರಸ್ಸುಗಳ ವರದಿ ಹೊರ ಬರುವುದಕ್ಕೆ ಮೊದಲೇ ಅದರ ಕತ್ತನ್ನು ಹಿಸುಕಿ ಹಾಕಿದರು ಎಂದು ಹೇಳಿದರೆ ತಪ್ಪಾಗಲಾರದು. ಈ ಮಾತನ್ನು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಈ ರಿಪೋರ್ಟ್‌ನ ಬಗ್ಗೆ ಈ ಸಭೆಯ ಸನ್ಮಾನ್ಯ ಸದಸ್ಯರನ್ನು ಯಾರನ್ನಾದರೂ ಕೇಳಿದರೆ ಇಲ್ಲವೇ ಅದನ್ನು ಪೂರ್ತಿ ಸ್ಟಡಿ ಮಾಡಿರುವವರನ್ನು ಇಲ್ಲವೇ ಪೂರ್ತಿ ತಿಳಿದುಕೊಂಡಿರುವವರನ್ನು ಹೇಳಿದರೆ ನಮಗೆ ಅದರಿಂದ ಅನುಕೂಲವಾಗುತ್ತದೆಂದು ಅವರುಗಳು ಹೇಳುತ್ತಾರೆ. ಆ ವರದಿ ಮೇಲೆ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಕ್ಕೆ ಆಗಲೇ ಇಲ್ಲ. ಯಾವುದೇ ಸಾರ್ವಜನಿಕ ವೇದಿಕೆಯಲ್ಲಿ ಈ ವರದಿ ಚರ್ಚೆಯಾಗಲಿಲ್ಲ, ಅದರ ಆಗುಹೋಗುಗಳು ಏನು, ಬಾಧ್ಯತೆಗಳು ಏನು, ಸರಿ ಏನು ತಪ್ಪೇನು, ಅದರಲ್ಲಿ ಜನತೆಯ ಹಿತದೃಷ್ಟಿಯನ್ನು ಏನು ಇಟ್ಟುಕೊಳ್ಳಬೇಕಾಗಿತ್ತು

ಎಂಬ ಬಗ್ಗೆ ಯಾವುದೇ ಒಂದು ನಿಲುವನ್ನು ತಳೆಯದೇ, ಏಕಾಏಕಿ ಆ ವರದಿಯನ್ನು ದೂರೀಕರಿಸಿದರು. ಮೂರು ವರ್ಷ ಪರಿಶ್ರಮ ಪಟ್ಟು ತಯಾರಿಸಿದಂಥ ಆ ವರದಿಯನ್ನು ಕೆಲಸಕ್ಕೆ ಬಾರದ ಒಂದು ಪುಸ್ತಕದ ರೀತಿ ಬಿಸಾಡಿದರು. ಅದರ ಸಾರಾಂಶ ಏನು, ಅದರ ಶಿಫಾರಸುಗಳು ಏನು ಎಂದು ಕೇಳಿದರೆ, ಅದು ಯಾರಿಗೂ ಗೊತ್ತಿಲ್ಲ. ಇದು ಆಗಬಾರದು ಒಂದು ದುರಾದೃಷ್ಟಕರ ಸಂಗತಿ. ಈಗ ಚಿನ್ನಪ್ಪರೆಡ್ಡಿಯವರನ್ನು ನೇಮಿಸಿದ್ದಾರೆ. ಅವರು ಏಕಸದಸ್ಯ ಆಯೋಗದ ಚೇರ್ಮನ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಇದನ್ನು ಪುನರ್ ವಿಮರ್ಶೆ ಮಾಡಿದ ಮೇಲೆ ಯಾವ ರೀತಿಯ ವರದಿ ಬರುತ್ತದೋ ಗೊತ್ತಿಲ್ಲ, ವರದಿ ಇಷ್ಟರಲ್ಲೇ ಬರುತ್ತದೆಂದು ಸರಕಾರದವರು ಹೇಳಿದ್ದಾರೆ. ಇದರಲ್ಲಿ ಜಾತಿ ಮತದ ಪ್ರಶ್ನೆ ಬರುವುದಿಲ್ಲ. ನಮ್ಮ ಧರ್ಮಗಳು ನಮ್ಮ ಜಾತಿಗಳು ಹೀಗೆ ಹಲವಾರು ಭಾಷೆಗಳು ನಮ್ಮ ರಾಜ್ಯದಲ್ಲಿ ಇದ್ದಾವೆ. ಬಹಳ ಮುಖ್ಯವಾಗಿ ಯಾವ ಸಮಾಜದಲ್ಲಿ ಸಹಸ್ರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿ, ಅತೀ ಕೆಳಗಿನ ಸ್ತರದಲ್ಲಿ ಪಶುವಿಗಿಂತ ಕಡೆಯಾಗಿ ಯಾರು ಇದ್ದಾರೆ, ಅವರನ್ನು ಮಾನವೀಯ ಹಿತದೃಷ್ಟಿಯಿಂದ ಮೇಲೆತ್ತುವ ಕೆಲಸವನ್ನು ಈ ನಮ್ಮ ಸಮಾಜ ಮಾಡಬೇಕೆಂಬ ಒಂದು ಮುಖ್ಯ ಗುರಿಯನ್ನು ಇಟ್ಟುಕೊಂಡು ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸುತ್ತಾರೆ. ಅದರಿಂದ ಬಂದ ವರದಿಯನ್ನು ಅಂಗೀಕರಿಸುತ್ತಾರೆ. ಇದಕ್ಕೆ ಅಳತೆಗೋಲು ಏನು ಎಂಬುದರ ಬಗ್ಗೆಯೇ ಸಾಕಷ್ಟು ಚರ್ಚೆ ಆಗಿದೆ, ಈ ಸದನದಲ್ಲಿ ಆಗಿದೆ, ಸಾರ್ವಜನಿಕ ವೇದಿಕೆಗಳಲ್ಲಿ ಆಗಿದೆ. ಈ ಚರ್ಚೆಗಳಿಂದ ಮುಖ್ಯವಾದಂಥ ಒಂದು ಅಂಶ ಪ್ರಕಟವಾಗಿದ್ದು ಏನು ಎಂದರೆ ಹಿಂದುಳಿದಿರುವಿಕೆಗೆ ಅಳತೆಗೋಲು ಏನೆಂದು ಹೇಳಿದರೆ, ಪ್ರಮುಖವಾಗಿ ಗಮನಿಸಬೇಕಾದುದು ಸಾಮಾಜಿಕ ಪರಿಸ್ಥಿತಿ. ಸಮಾಜದಲ್ಲಿ ಅವನ ಸ್ಥಾನ ಮಾನ ಏನು ? ದೀನ ದಲಿತನ. ಹಿಂದುಳಿದವನ ಸಾಮಾಜಿಕ ಪರಿಸ್ಥಿತಿಯನ್ನು ಮೊದಲನೆಯದಾಗಿ ಪರಿಗಣಿಸಬೇಕಾಗುತ್ತದೆ. ನಂತರ ಅವನ ಆರ್ಥಿಕ ಪರಿಸ್ಥಿತಿ ಏನಿದೆ, ಅವನ ಆದಾಯ ಏನಿದೆ, ಅವನ ವರ್ಷವಾರು ಹಣಕಾಸಿನ ಪರಿಸ್ಥಿತಿ ಏನಿದೆ ಎಂಬುದನ್ನು ಪರಿಗಣಿಸಬೇಕಾಗುತ್ತದೆ. ಹೀಗೆಯೇ ಶಿಕ್ಷಣವನ್ನೂ ಗಮನಿಸಬೇಕಾಗುತ್ತದೆ. ಒಂದು ಕುಟುಂಬವನ್ನು ಉದಾಹರಣೆಗೆ ತೆಗೆದುಕೊಂಡರೆ, ಆ ಕುಟುಂಬದಲ್ಲಿ ಒಳ್ಳೆಯ ವಿದ್ಯಾಭ್ಯಾಸ ಪಡೆದವರು ಎಷ್ಟು ಜನ ಇದ್ದಾರೆ, ಎಲ್ಲಿಯವರೆಗೆ ಪಡೆದಿದ್ದಾರೆ, ಎಷ್ಟು ಜನ ಸದಸ್ಯರು ಪ್ರಾಥಮಿಕ ಶಾಲೆಯನ್ನು ದಾಟಿದ್ದಾರೆ, ಎಷ್ಟು ಜನ ಪ್ರೌಢಶಾಲೆಯನ್ನು ದಾಟಿದ್ದಾರೆ, ಎಷ್ಟು ಜನ ಕಾಲೇಜು ಶಿಕ್ಷಣ ಪಡೆದಿದ್ದಾರೆ ಎನ್ನುವಂತಹ ದಾಖಲೆಗಳನ್ನು ತೆಗೆದುಕೊಂಡರೆ ಯಾವ ಒಂದು ಮನೆಯಲ್ಲಿ ಹೆಚ್ಚು ಅನಕ್ಷರಸ್ಥರು ಇದ್ದಾರೆ, ಅವಿದ್ಯಾವಂತರು ಇದ್ದಾರೆ, ಶಿಕ್ಷಣದಲ್ಲಿ ಬಹಳ ಹಿಂದುಳಿದವರು ಇರುತ್ತಾರೆ. ಅವರ ಮಕ್ಕಳು ಶಾಲೆಗಳ ಮುಖವನ್ನೇ ಕಂಡಿಲ್ಲ, ಆ ಒಂದು ಕುಟುಂಬಗಳಿಗೆ ಹೆಚ್ಚಿನ ಸೌಕರ್ಯಗಳನ್ನು ಸೌಲಭ್ಯಗಳನ್ನು ನೀಡಿ ಶಿಕ್ಷಣ ಕೊಡಿಸತಕ್ಕ ಕೆಲಸ ಮಾಡಬೇಕು ಮಂತ್ರಿ ಶಿಕ್ಷಣ ಸಂಸ್ಥೆಗಳಲ್ಲಿ. ಶಿಕ್ಷಣ ರಂಗದಲ್ಲಿ ಅವರಿಗೆ ಮೀಸಲಾತಿಯನ್ನು ಕೊಡಬೇಕು. ಗುಣಮಟ್ಟವನ್ನು ಕಾಪಾಡಿಕೊಳ್ಳದೇ ಮೀಸಲಾತಿಯನ್ನು ಕೊಡಬೇಕೆ ಎಂಬುದು ಒಂದು ದೊಡ್ಡ ಚರ್ಚೆಯ ಅಂಶವಾಗಿದೆ. ನಾನಾದರೂ ವೈಯಕ್ತಿಕವಾಗಿ ಹೇಳುತ್ತೇನೆ, ಗುಣಮಟ್ಟವನ್ನು ಕಾಪಾಡಿಕೊಳ್ಳದೆ ಈ ಒಂದು ರಿಸರ್ವೇಷನ್ ಪಾಲಿಸಿ ಬೇಕಾಗಿಲ್ಲ. ರಿಸರ್ವೇಷನ್ ಪಾಲಿಸಿ ಇಟ್ಟುಕೊಳ್ಳುವಾಗ, ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಸಹ ಸಾಧ್ಯ ಇದೆ. ಉದಾಹರಣೆಗೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ನಮ್ಮ ಸಂವಿಧಾನ ಮಾಡಿಕೊಟ್ಟಿದೆ. ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಉದ್ಯೋಗ ಕ್ಷೇತ್ರದಲ್ಲಿ ಶೇಕಡಾ ೧೮ ಭಾಗ ಮೀಸಲಾತಿ ಕೊಡಬೇಕು. ಅದರಲ್ಲಿ ಉತ್ತಮವಾಗಿರತಕ್ಕವರು ಉತ್ತಮ ಅಂಕಗಳನ್ನು ಪಡೆದವರು, ಉತ್ತಮ ತರಬೇತಿ ಪಡೆದವರು, ಉತ್ತಮ ಫಲಿತಾಂಶಗಳನ್ನು ತಂದಿರತಕ್ಕಂಥವರಿಗೆ ಆದ್ಯತೆ ಕೊಡಬೇಕೇ ಹೊರತು. ತೀರಾ ಕಳಪೆಯಾದವರನ್ನು ಆರಿಸಬೇಕೆಂಬ ಉದ್ದೇಶ ಇಲ್ಲ. ಇದು ಸರಿ ಹೋಗುವುದಿಲ್ಲ. ವೈದ್ಯಕೀಯ ಕ್ಷೇತ್ರ ಇರಬಹುದು, ಎಂಜಿನಿಯರಿಂಗ್ ಸಂಸ್ಥೆಗಳು ಇರಬಹುದು, ಅದರಲ್ಲೂ ಕೂಡಾ ಗುಣಮಟ್ಟ ಕಾಪಾಡಿಕೊಂಡು ಬರುವುದಕ್ಕೆ ಸಾಧ್ಯ ಇದೆ. ಈ ಒಂದು ದೃಷ್ಟಿಯಿಂದ ಶಿಕ್ಷಣವನ್ನು ಮೀಸಲಾತಿ ಪದ್ಧತಿಯ ಮೂಲಕ ಇವರಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆ. ಅದರಲ್ಲೂ ಹಿಂದುಳಿದವರ್ಗದವರು, ದಲಿತರು, ಬಡವರು ಇವರಿಗೆ ಶಿಕ್ಷಣವನ್ನು ಕಡ್ಡಾಯ ಮಾಡಿದರೂ ತಪ್ಪಾಗಲಾರದು ಎಂಬುದು ನನ್ನ ಅಭಿಪ್ರಾಯ. ಇವರಿಗೆ ಪ್ರೌಢಶಾಲೆಯವರೆಗೆ ಉಚಿತವಾಗಿ ಶಿಕ್ಷಣವನ್ನು ಒದಗಿಸಿಕೊಡುವುದಕ್ಕೆ ಸರಕಾರಕ್ಕೆ ಆರ್ಥಿಕ ಅಡಚಣೆಗಳು ಇರಬಹುದು, ಆದರೂ ಇದನ್ನು ಮಾಡುವುದರಿಂದ, ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಟ್ಟ ಹಾಗೆ ಆಗುತ್ತದೆ. ಹಳ್ಳಿಗಳಲ್ಲಿ ವಾಸಮಾಡುವ ಹಿಂದುಳಿದವರ ಮಕ್ಕಳಿಗೆ, ರೈತಬಾಂಧವರ ಮಕ್ಕಳಿಗೆ ಬಡವರ ಮಕ್ಕಳಿಗೆ ಹೆಚ್ಚು ಅನುಕೂಲವಾಗುತ್ತದೆ, ಅವರನ್ನು ಅಕ್ಷರಸ್ಥರನ್ನಾಗಿ ಮಾಡುವ ದಿಸೆಯಲ್ಲಿ ನಾವು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದೆಂದು ನನಗನ್ನಿಸುತ್ತದೆ.

ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಹ ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೀಸಲಾತಿ ಇದೆ. ಈಗಿನ ಪ್ರಜಾಪ್ರಭುತ್ವ ನೀತಿಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಶೇಕಡ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿದ್ದಾರೆ ಮತ್ತು ಹಿಂದುಳಿದ ವರ್ಗಗಳಿಗೂ ಮೀಸಲಾತಿ ಇದೆ. ನಮ್ಮ ಮಹಿಳೆಯರಿಗೂ ಶೇಕಡ ೩೦ ಪರ್ಸೆಂಟ್ ಮೀಸಲಾತಿಯನ್ನು ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ನಗರಸಭೆ ಚುನಾವಣೆಗಳಲ್ಲಿ ಕೊಟ್ಟಿದ್ದಾರೆ. ಆದರೆ ದುರಾದೃಷ್ಟವಶಾತ್ ಈ ಸಭೆಯಲ್ಲಿ ಈ ಸದನದಲ್ಲಿ ಪ್ರತಿಪಕ್ಷಗಳ ಕಡೆಯಿಂದ ಕೇವಲ ಒಬ್ಬ ಮಹಿಳೆ ಕೂಡ ಆಯ್ಕೆ ಆಗಿ ಬರದಂತಹ ಪ್ರಸಂಗ ಬಂದಿದೆ. ಅದಕ್ಕಾಗಿ ನಾವು ವಿಷಾದ ಪಡಬೇಕಾಗಿದೆ. ಇವತ್ತಿನ ದಿವಸ ಈ ಸದನದಲ್ಲಿ ಉಪಾಧ್ಯಕ್ಷರ ಸ್ಥಾನವನ್ನು ಒಬ್ಬ ಮಹಿಳೆ ಅಲಂಕರಿಸಿದ್ದು ನಮಗೆಲ್ಲಾ ಹೆಮ್ಮೆ ತರುವಂತಹ ವಿಷಯ. ಅವರಿಗೆ ಆ ಸ್ಥಾನ ಸಿಕ್ಕಿದ್ದು ಈ ಸದನಕ್ಕೆ ಮತ್ತು ಪ್ರತಿಪಕ್ಷಗಳಿಗೆ ಶೋಭೆ ತರುವಂತಹ ವಿಷಯವೆಂದು ನಾನು ತಿಳಿದುಕೊಂಡಿದ್ದೇನೆ. ದುರ್ಬಲ ವರ್ಗಗಳಲ್ಲಿ ಮತ್ತು ಹಿಂದುಳಿದ ವರ್ಗಗಳಲ್ಲಿ ಮಹಿಳೆಯರು ಏನು ಇದ್ದಾರೆ. ಅವರ ಸಂಖ್ಯೆ ಕೂಡ ಇವತ್ತು ಶೇಕಡ ೪೦-೫೦ ಪರ್ಸೆಂಟ್ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಶೇಕಡ ೫೧ ಪರ್ಸೆಂಟ್ ಮಹಿಳೆಯರು ಇದ್ದಾರೆ. ಆದರೆ ಜನಸಂಖ್ಯೆ ಜಾಸ್ತಿ ಆದರೆ ಮಾತ್ರ ಸಾಲದು. ಅವರ ದುರ್ಬಲತೆ, ಅವರು ಇರುವ ಸಾಮಾಜಿಕ ಪರಿಸರ, ಅವರು ಸಾಮಾಜಿಕ ಹಿನ್ನಲೆ ಅವರ ಆರ್ಥಿಕ ಹಿನ್ನಲೆ ಇವೆಲ್ಲವನ್ನು ಪರಿಗಣಿಸಿ, ಅವರಿಗೂ ಸಹ ಎಲ್ಲಾ ರಂಗಗಳಲ್ಲಿ ಸಮಾನವಾದ ಅವಕಾಶವನ್ನು ಒದಗಿಸಿಕೊಡಬೇಕು, ಅವರಿಗೂ ಒಳ್ಳೆಯ ಗೌರವ ಅವರು ಸಹ ಒಳ್ಳೆಯ ರೀತಿಯಿಂದ ಜೀವನ ನಡೆಸತಕ್ಕಂಥಾದ್ದಕ್ಕೆ ಒಳ್ಳೆಯ ಪರಿಸರ ನಿರ್ಮಾಣ ಆಗುವ ದೃಷ್ಟಿಯಿಂದ ಈ ಮೀಸಲಾತಿ ಪದ್ಧತಿಯನ್ನು ಕೆಲವು ವರ್ಷಗಳ ವರೆಗೆ ಜಾರಿಗೆ ತರುವುದು ಅಗತ್ಯವೆಂದು ನನ್ನ ವೈಯುಕ್ತಿಕ ಅಭಿಪ್ರಾಯ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಸಮಾಜದಲ್ಲಿ ಮಹಿಳೆ ಆರೋಗ್ಯವಾಗಿದ್ದರೆ ಅವರ ಕುಟುಂಬ ಆರೋಗ್ಯವಾಗಿರುತ್ತದೆ. ಮುಖ್ಯವಾಗಿ ಅವರ ಕುಟುಂಬದ ಸದಸ್ಯರ ಆರೋಗ್ಯವನ್ನು ನೋಡಿಕೊಳ್ಳುತ್ತಾರೆ. ಅವರ ದೈಹಿಕ ಆರೋಗ್ಯ ಮಾತ್ರವಲ್ಲದೆ ಅವರ ಮಾನಸಿಕ ಆರೋಗ್ಯ ಕೂಡ ಚೆನ್ನಾಗಿರ ಬೇಕಾಗುತ್ತದೆ. ಸರ್ವತೋಮುಖವಾಗಿ ಒಂದು ಕುಟುಂಬ ಬೆಳೆಯಬೇಕಾದರೆ ಆ ಕುಟುಂಬದ ಸದಸ್ಯರು ಆರೋಗ್ಯವಂತರಾಗಿರಬೇಕಾದರೆ ಆ ಮನೆಯಲ್ಲಿರತಕ್ಕಂಥ ಯಾವ ಸ್ತ್ರೀ ಇದ್ದಾಳೆ, ಆಕೆಯೇ ನಮಗೆ ತಾಯಿ, ಗೃಹಿಣಿ ಮತ್ತು/ಪತ್ನಿ. ಆಕೆ ತನ್ನ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಂಡಿದ್ದರೆ ತನ್ನ ಮಕ್ಕಳನ್ನು ಚೆನ್ನಾಗಿ ಬೆಳೆಸುತ್ತಾಳೆ. ಆಗ ಮನೆಯಲ್ಲಿ ಹರ್ಷ ಸಂತೋಷ ಎಲ್ಲಾ ಇರುತ್ತದೆ. ಆಗ ನಾವು ಉತ್ತಮ ಪ್ರಜೆಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆ ಮನೆಯಲ್ಲಿ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಆ ಮನೆಯ ಸದಸ್ಯರು ಸಿಕ್ಕಿಹಾಕಿಕೊಂಡು ಇರಬೇಕಾಗುತ್ತದೆ. ನಾನು ನನ್ನ ಸ್ವಂತ ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಈ ಎಲ್ಲಾ ದೃಷ್ಟಿಯಿಂದಲೂ ಕೂಡ ಈ ಸಾರಿ ಹೆಚ್ಚಿನ ಹೆಲ್ತ್ ಯೂನಿಟ್ಸ್‌ನ್ನು ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಇದರ ಜೊತೆಯಲ್ಲಿ ಇರತಕ್ಕಂಥ ಲೋಪದೋಷಗಳನ್ನು ಸರಿ ಮಾಡಿಕೊಳ್ಳಬೇಕಾಗುತ್ತದೆ. ಕೆಲವು ಕಡೆ ಸರಿಯಾದ ಸಿಬ್ಬಂದಿ ಇಲ್ಲ. ಡಾಕ್ಟರ್ಸ್ ಇಲ್ಲ ಕೆಲವು ಕಡೆ ಔಷಧಿಗಳ ಕೊರತೆ ಇದೆ. ಈ ಕಡೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಮತ್ತು ವ್ಯಾಪಾರಿ ಮನೋಭಾವನೆಯಿಂದ ಏನು ಈ ವಿದ್ಯಾ ಶುಲ್ಕ ವಸೂಲಿ ಮಾಡುತ್ತಿದ್ದಾರೆ. ಅದರಲ್ಲೂ ಇವತ್ತು ನಮ್ಮ ಆರೋಗ್ಯ ಸಂಸ್ಥೆಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಏನು ವಸೂಲಿ ಮಾಡುತ್ತಿದ್ದಾರೆ, ಅದನ್ನು ದಯಮಾಡಿ ತಪ್ಪಿಸಬೇಕಾಗುತ್ತದೆ. ಈ ಕೆಲಸ ಸರ್ಕಾರ ಒಂದೇ ಮಾಡುವುದಕ್ಕೆ ಆಗುವುದಿಲ್ಲ, ನಾವು ನೀವು ಸಾರ್ವಜನಿಕರೆಲ್ಲರೂ ಈ ದಿಶೆಯಲ್ಲಿ ದಿಟ್ಟ ಹೆಜ್ಜೆ ಇಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಒಬ್ಬ ವಿದ್ಯಾರ್ಥಿ ಆಗಲಿ ವಿದ್ಯಾರ್ಥಿನೀ ಆಗಲಿ ಪ್ರಾರಂಭದಲ್ಲಿ ತಾನು ಶಿಕ್ಷಣ ಪಡೆಯುವುದಕ್ಕೆ ಮೊದಲೇ ವ್ಯಾಪಾರ ಮಾಡಿ ೫ ಲಕ್ಷವೋ ೪ ಲಕ್ಷವೋ ಸೀಟಿಗೆ ಕೊಟ್ಟು ಪಡೆದಿದ್ದೇನೆ ಎನ್ನುವ ಮನೋಭಾವನೆ ಅವರಲ್ಲಿ ಬಂದರೆ ಅವರ ಮನಸ್ಸಿನ ಮೇಲೆ ಮಾನಸಿಕವಾದ ಪರಿಣಾಮ ಬೀರುತ್ತದೆ. ಮುಂದೆ ಅವರಲ್ಲಿ ಎಷ್ಟರ ಮಟ್ಟಿಗೆ ದಕ್ಷತೆ ಮತ್ತು ಪ್ರಾಮಾಣಿಕತೆ ಬರುತ್ತದೆ ಎಂಬುವನ್ನು ನೋಡಬೇಕಾಗುತ್ತದೆ. ಡಾಕ್ಟರ್ ಆಗಬೇಕೆಂದು ಮುಂದೆ ಬರುವವರ ಮೇಲೆ ಇದು ಏನು ಪರಿಣಾಮ ಬೀರುತ್ತದೆ ಎನ್ನುವದನ್ನು ಸಹ ನಾವು ಆಲೋಚನೆ ಮಾಡಬೇಕಾಗುತ್ತದೆ. ನಾನು ಒಂದು ಹೇಳುತ್ತೇನೆ. ಆ ವಿದ್ಯಾರ್ಥಿ ಮೆಡಿಕಲ್ ಸೀಟಿಗೆ ಕೊಟ್ಟ ೫ ಲಕ್ಷ ರೂಪಾಯಿಗಳನ್ನು ಮತ್ತೆ ಯಾವ ರೀತಿಯಲ್ಲಿ ಸಂಪಾದನೆ ಮಾಡಬೇಕೆನ್ನುವುದನ್ನು ಯೋಚನೆ ಮಾಡುತ್ತಾನೆಯೇ ವಿನಹಃ ನಿಜವಾಗಿ ಸಾಮಾಜಿಕ ಸೇವೆ ಮತ್ತು ಜನರ ಆರೋಗ್ಯದ ಸೇವೆ ಮಾಡುವ ಬಗ್ಗೆ ಆಸಕ್ತಿ ಆತನಿಗೆ ಕಡಿಮೆ ಆಗುತ್ತದೆ. ಆದ್ದರಿಂದ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಅದರಲ್ಲೂ ಆರೋಗ್ಯ ಶಿಕ್ಷಣ ಸಂಸ್ಥೆಗಳಲ್ಲಿ ನಾವು ಪ್ರತಿ ವರ್ಷ ಇಷ್ಟು ಶುಲ್ಕ ಕೊಡುವಂತೆ ನಿಗದಿಮಾಡಬೇಕೆಂದು ನಾನು ಹೇಳುತ್ತೇನೆ ಆ ರೀತಿ ಮಾಡಿದರೆ ಒಳ್ಳೆಯದಾಗುತ್ತದೆ. ಅಡ್ಮಿಶನ್‌ಗೆ ಮೊದಲೇ ಕ್ಯಾಪಿಟೇಶನ್ ಶುಲ್ಕ ಎಂದು ಹೇಳಿ ಏನು ಹಣ ತೆಗೆದುಕೊಳ್ಳುತ್ತಾರೆ. ಅದು ಅಧಿಕೃತವಾಗಿಯೋ ಅಥವಾ ಅನಧಿಕೃತವಾಗಿಯೋ ಬೇರೆ ಬೇರೆ ರೀತಿಯಲ್ಲಿ ತೆಗೆದುಕೊಳ್ಳುತ್ತಾರೆ, ಇದು

ಸರ್ವಥಾಃ ಕೂಡದು ಎನ್ನುವ ಮಾತನ್ನು ನಾನು ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳುತ್ತಿದ್ದೇನೆ. ಈ ಆರೋಗ್ಯ ಶಿಕ್ಷಣ ಸಂಸ್ಥೆಗಳು ನಮ್ಮ ರಾಜ್ಯದಲ್ಲಿರುವಷ್ಟು ಬೇರೆ ರಾಜ್ಯಗಳಲ್ಲಿ ಇಲ್ಲ.

ಡಾ. ಎನ್.ಬಿ. ನಂಜಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂತಹ ಶ್ರೀಮತಿ ಚಂದ್ರ ಪ್ರಭಾ ಅರಸ್‌ರವರು ಮಾತನಾಡುತ್ತಾ ಈ ರಿಜರ್‌ವೇಶನ್ ಬಗ್ಗೆ, ಎಜುಕೇಶನ್ ಪಾಲಿಸಿ ಬಗ್ಗೆ ಕೆಲವು ಮಾತುಗಳನ್ನು ಹೇಳಿದರು. ನಾನು ಅವರಲ್ಲಿ ಒಂದು ಕ್ಲಾರಿಫಿಕೇಶನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮಗೆ ಸ್ವಾತಂತ್ರ್ಯ ಬಂದ ಮೇಲೆ ಈ ಆಯೋಗಗಳು ಬಹಳಷ್ಟು ಬಂದಿವೆ. ಬಂದ ಆಯೋಗಗಳೆಲ್ಲವೂ ಕೂಡ ಕೇವಲ ಜಾತಿಯ ಆಧಾರವನ್ನು ಇಟ್ಟುಕೊಂಡು ಸರಿಯಾದ ಮಾಹಿತಿಗಳನ್ನು ಪಡೆದುಕೊಳ್ಳದೆ ವರದಿಗಳನ್ನು ಸಲ್ಲಿಸಿವೆ. ಮಾನ್ಯ ವೆಂಕಟಸ್ವಾಮಿ ಆಯೋಗದ ವಿಷಯವೂ ಹೀಗೆ ಆಯಿತು. ಮುಂದೆ ಬರುವ ಮಾನ್ಯ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಯೂ ಅದೇ ರೀತಿಯಾಗುತ್ತದೆ. ಸಮಾಜದಲ್ಲಿ ರತಕ್ಕಂಥ ಬಡ ಜನರ ಮಾಹಿತಿಗಳನ್ನು ಪಡೆಯದೆ ಈ ಆಯೋಗಗಳೆಲ್ಲಾ ಕೆಲಸ ಮಾಡಿವೆ. ನಮ್ಮ ಕಾನ್ಸ್ಟಿಟ್ಯೂಷನ್‌ನಲ್ಲಿರುವಂತಹ ವಿಧಾನವನ್ನು ಅನುಸರಿಸಿಕೊಂಡು ಸೋಶಿಯಲ್ ಸ್ಟೇಟಸ್ ಮೇಲೆ ರಿಸರ್ವೇಷನ್ ಮಾಡಬೇಕು. ಎಂದು ದಿವಂಗತ ನೆಹರೂರವರು ಇದ್ದ ಕಾಲದಲ್ಲಿ ಇದರ ಬಗ್ಗೆ ಹೆಚ್ಚಿನ ಒಂದು ಗಮನವನ್ನು ಸೆಳೆಯಲಾಗಿತ್ತು. ಇಂಥಾ ಆಯೋಗಗಳನ್ನು ಏನು ಮಾಡುತ್ತಾರೆ, ಆ ಆಯೋಗ ದವರು ಇದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಸರಿಯಾಗಿ ಪರಿಶೀಲನೆ ಮಾಡದೆ ವರದಿ ಕೊಟ್ಟಿದ್ದರಿಂದಲೇ ವೆಂಕಟಸ್ವಾಮಿ ಕಮಿಷನ್, ಮಂಡಲ್ ಕಮಿಷನ್ ವರದಿಗಳನ್ನು ಕೈ ಬಿಡಲಾಯಿತು. ಈ ಆಯೋಗಗಳವರು ಕೇವಲ ಜಾತಿ ಆಧಾರದ ಮೇಲೆ ರಿಸರ್ವೇಷನ್ ಮಾಡಿದ್ದಾರೆಯೇ ವಿನಃ ಸೋಶಿ ಯಲ್ ಸ್ಟೇಟಸ್‌ನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳದೆ ವರದಿಯನ್ನು ತಯಾರು ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಕೊಡಲಾಗಿದ್ದ ರಿಸರ್ವೇಷನ್‌ನ್ನು ಮತ್ತೆ ೪ನೇ ಸಾರಿ ಅದನ್ನು ಮುಂದುವರಿಸಿದ್ದೇವೆ. ಪರಿಶಿಷ್ಟ ಜಾತಿ ವರ್ಗದವರ ಜನಗಳಿಗೂ ಮತ್ತು ಬೇರೆ ವರ್ಗದ ಜನಗಳಿಗೂ ಕಂಪೇರ್ ಮಾಡಿ ನೋಡಿದರೆ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರುಗಳಿಗಿಂತಲೂ ಕಡಿಮೆ ಮಟ್ಟದಲ್ಲಿ ವಾಸಿಸುವಂಥ ಮತ್ತು ಆರ್ಥಿಕ ದುಸ್ಥಿತಿಯಲ್ಲಿರತಕ್ಕ ಉದಾಹರಣೆಗಳು ಕಾಣುತ್ತವೆ. ಫಾರ್ವರ್ಡ್ ಕಮ್ಯುನಿಟಿ ಎಂದು ಬ್ರಾಹ್ಮಣರನ್ನು ಏನು ಕರೆಯುತ್ತೇವೆ, ಈ ಜಾತಿಯಲ್ಲಿ ಪರಿಶಿಷ್ಟ ಜಾತಿಯ ಜನ ಗಳಿಗಿಂತ ಕಡು ಬಡತನದಲ್ಲಿ ಜೀವನ ಮಾಡತಕ್ಕ ಜನರು ಇದ್ದಾರೆ. ಆದ್ದರಿಂದ, ರಿಸರ್ವೇಷನ್ ಪಾಲಿಸಿ ಯನ್ನು ಜಾತಿ ಆಧಾರದ ಮೇಲೆ ಮಾಡುವುದಕ್ಕಿಂತ ಕಾನ್ಸ್ಟಿಟ್ಯೂಷನ್‌ನಲ್ಲಿ ಹೇಳಿರುವಂತೆ ಸೋಶಿಯಲ್ ಸ್ಟೇಟಸ್‌ನ್ನು ಮುಖ್ಯವಾಗಿ ಗಮನಕ್ಕೆ ತೆಗೆದುಕೊಂಡು ಪ್ರತಿ ಜಾತಿಯಲ್ಲಿರತಕ್ಕಂಥ ಬಡವರನ್ನು ಗುರುತು ಮಾಡಿ ಅವರ ಉದ್ಧಾರಕ್ಕೆ ಶ್ರಮಿಸಿದಾಗ ಮಾತ್ರ ನಮ್ಮ ದೇಶ ಮುಂದುವರಿಯುತ್ತದೆ. ಹಾಗೆ ಮಾಡದೇ ಜಾತಿವಾರು ರಿಸರ್ವೇಷನ್‌ನ್ನು ಮಾಡಿಕೊಂಡು ಬಂದರೆ ಯಾವ ಆಯೋಗ ತನ್ನ ವರದಿಯನ್ನು ಕೊಟ್ಟರೂ ಏನು ಪ್ರಯೋಜನವಾಗುವುದಿಲ್ಲ. ಬ್ರಾಹ್ಮಣರೆಂದು ಕರೆಯುವ ಫಾರ್ವರ್ಡ್ ಕಮ್ಯುನಿಟಿಯಲ್ಲಿ ಎಷ್ಟು ಜನ ನಿರ್ಗತಿಕರಿಲ್ಲ ? ಅವನು ಬ್ರಾಹ್ಮಣನಾಗಿ ಹುಟ್ಟಿದ ಎಂದ ತಕ್ಷಣ ಅವನು ಎಷ್ಟೇ ಬಡವನಾಗಿದ್ದರೂ ಅವನು ಮುಂದುವರಿದವನೆಂದು ಹೇಳುವುದು ಸರಿಯಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗದ ಜನರುಗಳಲ್ಲಿ ಬಹಳಷ್ಟು ಜನ ವಿದ್ಯಾವಂತರಿದ್ದಾರೆ, ಐಶ್ವರ್ಯವಂತರಿದ್ದಾರೆ. ಒಳ್ಳೊಳ್ಳೆಯ ಪೊಸಿಷನ್‌ನಲ್ಲಿರತಕ್ಕವರಿದ್ದಾರೆ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಅನುಕೂಲಗಳನ್ನು ಕೊಡಬಾರದೆಂದು ನಾನು ಹೇಳುತ್ತಿಲ್ಲ. ಪರಿಶಿಷ್ಟ ಜಾತಿ ಮತ್ತು ವರ್ಗಗಳವರಿಗೆ ಕೊಡಬೇಕಾದ ಸವ ಲತ್ತುಗಳನ್ನು ಕೊಡುವುದು ದೇಶದ ಕರ್ತವ್ಯ. ಅದನ್ನು ಕೊಡಲಿ. ಅದನ್ನು ಒಪ್ಪಿಕೊಳ್ಳೋಣ ಅದೇ ರೀತಿಯಾಗಿ ಬೇರೆ ಜಾತಿಯಲ್ಲೂ ಅವರಿಗಿಂತ ಹೆಚ್ಚಿನ ನಿರ್ಗತಿಕರಿದ್ದರೆ ಅವರ ಬಗ್ಗೆ ೪೦ ವರ್ಷಗಳಲ್ಲಿ ನಾವು ಏನು ಚಿಂತನೆ ಮಾಡುತ್ತಿದ್ದೇವೆ ಎಂಬುದನ್ನು ಯೋಚನೆ ಮಾಡಿದರೆ ಅದು ಒಂದು ದೊಡ್ಡ ಸೊನ್ನೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದೆಯಾದರೂ ಈ ಜನರ ಬಗ್ಗೆ ಸರ್ಕಾರ ಚಿಂತನೆ ಮಾಡಿ ಅವರ ಅಭಿವೃದ್ಧಿಗೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈಗ ಮಾನ್ಯ ಚಿನ್ನಪ್ಪರೆಡ್ಡಿಯವರು ಆಯೋಗದ ವರದಿಯನ್ನು ತಯಾರು ಮಾಡುತ್ತಿದ್ದಾರೆ. ಇನ್ನೊಂದು ವಾರ ದಲ್ಲಿ ಅಥವಾ ಇನ್ನು ಕೆಲವು ವಾರಗಳಲ್ಲಿ ಮಾನ್ಯ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿ ಬರುತ್ತದೆ. ಆ ವರದಿಯಲ್ಲಿ ಜಾತಿವಾರು ರಿಸರ್ವೇಷನ್ ಮಾಡಿದರೆ ಹಿಂದಿನ ಕಮಿಷನ್ ವರದಿಗೆ ಆದ ಕೆಲಸವೇ ಇದಕ್ಕೂ ಆಗುತ್ತದೆ. ಬಡವರ ಬಗ್ಗೆ ನಾವು ಚಿಂತನೆ ಮಾಡಬೇಕು. ಯಾವುದೇ ಕೋಮಿನಲ್ಲಿ ಬಡವರು ಇರಲಿ ಅವರು ನಿರ್ಗತಿಕರಾಗಿದ್ದರೆ ಅವರ ಅಭಿವೃದ್ಧಿಗೆ ಎಲ್ಲಾ ರೀತಿಯಿಂದ ಸಹಾಯ ಮಾಡಬೇಕು. ಇದು ನಮ್ಮ ರಾಜ್ಯಕ್ಕೆ ಮಾತ್ರ ನಾನು ಹೇಳುತ್ತಿದ್ದೇನೆಂದು ಅಲ್ಲ. ಯಾವುದೇ ರಾಜ್ಯವಾಗಲೀ ಬಡವರ ಬಗ್ಗೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಿಂದೆ ಬಂದ ಮಾನ್ಯ ವೆಂಕಟಸ್ವಾಮಿ

ಆಯೋಗದ ವರದಿಯಲ್ಲಿ ಇದೇ ತರಹ ಅನೇಕ ತಪ್ಪುಗಳು ಇದ್ದಿದ್ದರಿಂದ ಅದು ಹೊರಗೆ ಬರುವುದಕ್ಕೇ ಆಗಲಿಲ್ಲ. ವೆಂಕಟಸ್ವಾಮಿ ಆಯೋಗದ ವರದಿಯ ಅಂಶಗಳು ಜನಗಳಿಗೆ ಸರಿಹೋಗಲಿಲ್ಲವಾದ್ದರಿಂದ ಅದಕ್ಕೆ ಪ್ರತಿಭಟನೆ ಬಂತು. ಪ್ರತಿಭಟನೆ ಬಂದ ಮೇಲೆ ಸರ್ಕಾರ ಆ ವರದಿಯನ್ನು ತಡೆಹಿಡಿಯಿತು. ಈ ಚಿನ್ನಪ್ಪರೆಡ್ಡಿಯವರ ಆಯೋಗದ ವರದಿಗೂ ಅದೇ ರೀತಿ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ, ನಮ್ಮ ಕಾನ್ಸ್ಟಿಟ್ಯೂಷನ್‌ನಲ್ಲಿ ಎಂಬೆಡ್ ಆಗಿರುವ ರೀತಿಯಲ್ಲಿ ಯಾರು ಎಕನಾಮಿಕಲ್ ಆಗಿ ಹಿಂದುಳಿದಿದ್ದಾರೆ ಯಾರು ಸೋಶಿಯಲ್ ಸ್ಟೇಟಸ್‌ನಲ್ಲಿ ಹಿಂದುಳಿದಿದ್ದಾರೆ ಅವರುಗಳನ್ನು ಆಧಾರವಾಗಿ ಇಟ್ಟುಕೊಂಡು ವರದಿಯನ್ನು ತಯಾರು ಮಾಡಬೇಕು. ಪ್ರತಿಯೊಂದು ಜಾತಿ ಮತ್ತು ಪ್ರತಿಯೊಂದು ಗ್ರಾಮಕ್ಕು ಹೋಗಿ ಇದರ ಬಗ್ಗೆ ಅಂಕಿ ಅಂಶಗಳನ್ನು ಕಲೆಕ್ಟ್ ಮಾಡಿ ವರದಿ ತಯಾರು ಮಾಡಿದರೆ ಮಾತ್ರ ಅದು ಉತ್ತಮ ರೀತಿಯ ವರದಿಯಾಗುತ್ತದೆಂದು ನನ್ನ ಅಭಿಪ್ರಾಯ......

ಶ್ರೀ ಜೆ.ಸಿ. ಮಾದುಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈಗ ಇವರು ಭಾಷಣ ಮಾಡುತ್ತಿದ್ದಾರೋ ಅವರು ಭಾಷಣ ಮಾಡುತ್ತಿದ್ದಾರೋ ಎಂದು ನಮಗೆ ಮೊದಲು ಗೊತ್ತಾಗಬೇಕು. ಭಾಷಣದ ಮಧ್ಯೆ ಕ್ಲಾರಿಫಿಕೇಷನ್ ಹೇಳುವುದಕ್ಕೆ ಮಾತ್ರ ಅವಕಾಶ ಇರುತ್ತದೆ. ಆದರೆ ಈಗ ಇವರೇ......

೩.೩೦ ಪಿ. ಎಂ

ಡಾ. ಎನ್.ಬಿ. ಸಂಜಪ್ಪ.—ಸೋಶಿಯಲ್ ಸ್ಟೇಟಸ್ ಎಂದರೆ ಏನು ? ಉದಾಹರಣೆಗೆ ಈಗ ನಾನು ಡಾಕ್ಟರ್ ಆಗಿದ್ದೇನೆ. ಅದೇ ನನ್ನ ಸಹೋದರ ಹಳ್ಳಿಯಲ್ಲಿ ಹೊಲ ಉಳುತ್ತಾ ತನ್ನ ಜೀವನವನ್ನು ನಡೆಸುತ್ತಿದ್ದಾನೆ ಎಂದು ಇಟ್ಟುಕೊಂಡರೆ ಅವನ ಸೋಶಿಯಲ್ ಸ್ಟೇಟಸ್ ಏನು ? ಅವನನ್ನು ಯಾವ ವರ್ಗಕ್ಕೆ ಸೇರಿಸಬೇಕೆಂದು ಯೋಚನೆ ಮಾಡಿದರೆ, ಈ ಒಂದು ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಅದನ್ನು ಬಿಟ್ಟು ಜಾತಿಯ ಆಧಾರದ ಮೇಲೆ ನಾವು ಎಷ್ಟು ಕಮೀಶನ್‌ಗಳನ್ನು ಮಾಡಿದರೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಏನೂ ಲಾಭವಾಗುವುದಿಲ್ಲ. ಇಂಥ ನೂರಾರು ಕಮೀಶನ್‌ಗಳು ಬಂದರೂ ಸಹ ಇದೇ ಪರಿಸ್ಥಿತಿಯು ಮುಂದುವರಿಯುತ್ತದೆ. ಇಂಥ ವಿಚಾರಗಳಲ್ಲಿ ಜಾತಿ, ಮತ, ಪಂಥಗಳ ಆಧಾರದ ಮೇಲೆ ಎಂದಿನವರೆಗೆ ಈ ಪದ್ಧತಿಯನ್ನು ಮುಂದುವರಿಸುತ್ತಾರೋ ಅಂದಿನವರೆಗೆ ಈ ಕೆಲಸವನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಸೋಶಿಯಲ್ ಸ್ಟೇಟಸ್ ಅಂದರೆ ಏನು ಎಂಬ ಬಗ್ಗೆ ಉದಾಹರಣೆಗೆ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಸ್ಟೇಟಸ್‌ನ್ನು ತೆಗೆದುಕೊಳ್ಳಿ. Ramkrishna Hegde's social status is entirely different from that of some subbarao in our village. He may be a Brahmin. What is the social status of T.N. Narasimha murthy or that of Rachaiah ? ಅದೇ ನಮ್ಮ ಊರಿನ ದೇವಸ್ಥಾನದಲ್ಲಿ ಪೂಜೆ ಮಾಡತಕ್ಕಂಥ ಒಬ್ಬ ಬಡ ಬ್ರಾಹ್ಮಣರ ಸ್ಟೇಟಸ್‌ನ್ನು ತೆಗೆದುಕೊಳ್ಳಿ. ಎರಡೂ ಒಂದೇ ಸಮನಾಗಿ ಇರುತ್ತದೆಯೇ ? ಅದೇ ರೀತಿಯಲ್ಲಿ ನಮ್ಮ ಟಿ.ಎನ್. ನರಸಿಂಹಮೂರ್ತಿಯವರನ್ನು ತೆಗೆದುಕೊಳ್ಳಿ, ಅದೇ ನಮ್ಮ ಊರಿನ ರಾಚಯ್ಯನವರ ಸ್ಟೇಟಸ್ ತೆಗೆದುಕೊಳ್ಳಿ ಒಂದೇ ಸಮನಾಗಿ ಇರುವುದು ಸಾಧ್ಯವೇ ? ಸೋಶಿಯಲ್ ಸ್ಟೇಟಸ್ ಬಗ್ಗೆ ನಮ್ಮ ಸಂವಿಧಾನದಲ್ಲಿ ಇದೆ. ಆ ಒಂದು ಬೇಸಿಸ್ ಮೇಲೆ ಈ ಆಯೋಗಗಳು ಆಗಬೇಕಾಗಿದೆಯೇ ವಿನಹ ಈಗ ನಾವುಗಳು ಅನುಸರಿಸುತ್ತಿರುವಂತೆ ಆಯೋಗಗಳನ್ನು ಮಾಡಿದರೆ ನಿಜವಾಗಿಯೂ ಯಾರು ಹಿಂದುಳಿದಿದ್ದಾರೆ, ಯಾರು ಬಡವರಿದ್ದಾರೆ, ಯಾರು ತುಳಿತಕ್ಕೊಳಗಾಗಿದ್ದಾರೆ ಅವರಿಗೆ ಅನ್ಯಾಯವಾಗುತ್ತದೆ, ಸೌಲಭ್ಯಗಳು ಸಿಗಬೇಕಾದವರಿಗೆ ಸಿಗುವುದಿಲ್ಲ ಎಂದು ಹೇಳ ಬಯಸುತ್ತೇನೆ. ಹಾಗೆಯೇ ವಿದ್ಯಾಭ್ಯಾಸದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಚಂದ್ರಪ್ರಭಾ ಅರಸ್‌ರವರು ಮೆಡಿಕಲ್ ಇಂಜಿನೀಯರಿಂಗ್ ಸೀಟುಗಳನ್ನು ೨–೩–೪–೫ಲಕ್ಷ ರೂಪಾಯಿಗಳನ್ನು ಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಅನೇಕ ಖಾಸಗಿ ಮೆಡಿಕಲ್ ಕಾಲೇಜುಗಳು ಬಂದಿವೆ ಉದಾಹರಣೆಗೆ ಮಂಗಳೂರು ಮೆಡಿಕಲ್ ಕಾಲೇಜು, ಬಾಪೂಜಿ ಎಜುಕೇಷನಲ್ ಸೊಸೈಟಿ ದಾವಣಗೆರೆ ಮುಂತಾಗಿ ದೊಡ್ಡ ದೊಡ್ಡ ವಿದ್ಯಾಸಂಸ್ಥೆಗಳು ಇವೆ. ಅವುಗಳಲ್ಲಿ ಯಾರು ಹಣವಂತರು, ಐಶ್ವರ್ಯವಂತರು ಇದ್ದಾರೆ ಅವರು ಕೊಟ್ಟು ತಮಗೆ ಬೇಕಾದ ಪ್ರವೇಶವನ್ನು ಪಡೆದಿದ್ದಾರೆ. ಈ ಕಾಲೇಜುಗಳಿಗೆ ಪ್ರವೇಶಾರ್ಹತೆ ಪಡೆಯಲು ಸರಕಾರದವರು ನಿಗದಿ ಪಡಿಸಿದ ಕನಿಷ್ಠ ಅಂಕಗಳನ್ನು ಅವರು ಪಡೆದಿರುತ್ತಾರೆ. ಈಗ ಹಳ್ಳಿಯಲ್ಲಿರತಕ್ಕಂಥ ಒಬ್ಬ ರೈತರ ಮಗ ಕನಿಷ್ಠ ೫೦ ಅಂಕಗಳನ್ನು ಪಡೆದವನು ಮೆಡಿಕಲ್ ಕಾಲೇಜಿಗೆ ಹೋಗ ಬೇಕೆಂದರೆ ಅವನಿಗೆ ಅವಕಾಶ ಬೇಡವೇ ? ಅವನು ಹಳ್ಳಿಯಲ್ಲಿ ಓದಿ ಹೆಚ್ಚು ಮೆರಿಟ್ ಪಡೆಯದೇ ಇದ್ದವನು ಏನು ಮಾಡಬೇಕು ? ರೈತ ತನ್ನ ಮಗನನ್ನು

ಡಾಕ್ಟರ್ ಮಾಡಬೇಕೆಂದು ತನ್ನ ಹೊಲದಲ್ಲಿ ಒಂದಿಷ್ಟನ್ನು ಮಾರಿಯಾದರೂ ಹಣ ಕೊಟ್ಟು ಕಲಿಸುವ ನಿರ್ಧಾರಕ್ಕೆ ಬರುತ್ತಾನೆ. In this country, everybody has got individual right to become something. you cannot say somebody cannot become Doctor or an Engineer merely because he has secured 50% marks. ಹೀಗೆ ೫೦ ಪರ್‌ಸೆಂಟ್ ಮಾರ್ಕ್ಸ್ ಪಡೆದು ಇಂಜಿನೀಯರಿಂಗ್ ಮೆಡಿಕಲ್ ಕಾಲೇಜುಗಳಿಗೆ ಡೊನೇಶನ್ ಕೊಟ್ಟು ಸೇರಿದವರು ಪಿ ಜಿ ಕೋರ್ಸ್‌ಗಳನ್ನು ಮೆರಿಟ್‌ನಲ್ಲಿ ಪಾಸ್ ಮಾಡಿಕೊಂಡವರು ಸಾವಿರಾರು ಜನರಿದ್ದಾರೆ. ಆ ರೈತರ ಮಕ್ಕಳಲ್ಲಿ ರೆಕಾರ್ಡ್ ಸ್ಥಾಪಿಸಿದವರು ಸಾಕಷ್ಟು ಜನರಿದ್ದಾರೆ. ಹೀಗೆ ಡೊನೇಶನ್ ಕೊಟ್ಟು ಸೀಟು ಪಡೆದುಕೊಳ್ಳುವುದು ಬೇಡ ಎಂದರೆ ಆ ಜನರಿಗಿರುವ ಒಂದು ಹಕ್ಕನ್ನು ಮೊಟಕು ಮಾಡಿದ ಹಾಗೆ ಆಗುತ್ತದೆ. ಹಳ್ಳಿಗಳಲ್ಲಿ ಓದಿ ಮೆರಿಟ್ ಇಲ್ಲದವರಿಗೆ ಓದುವ ಇಚ್ಛೆ ಇದ್ದರೂ ಅವರಿಗೆ ಡೊನೇಶನ್ ಸೀಟ್ ಇಲ್ಲದಿದ್ದರೆ ಅನಾನುಕೂಲವಾಗುತ್ತವೆ. ಅಂಥವರ ಇಂಡಿವಿಜುಲ್ ರೈಟನ್ನು ಕಿತ್ತು ಮೊಟಕು ಮಾಡಿದ ಹಾಗೆ ಆಗುತ್ತದೆ. ಅಂತೆಯೇ ಪರೀಕ್ಷೆಗಳಲ್ಲಿ ಮೆರಿಟ್ ಪಡೆಯುವುದಕ್ಕೋಸ್ಕರ ಇನ್‌ಪ್ಲುಯೇನ್ಸ್ ಮಾಡುತ್ತಾರೆ ಮತ್ತು ಪ್ರೊಫೆಸರ್‌ಗಳ ಲೆಕ್ಚರರ್‌ಗಳ ಮಕ್ಕಳು ಮಾತ್ರ ಹೆಚ್ಚು ಅಂಕಗಳನ್ನು ಪಡೆದು ಮೆರಿಟ್ ಸೀಟನ್ನು ಪಡೆಯುವಂತಾಗುತ್ತದೆ. ಆಗ ಹಳ್ಳಿಯವರು ಹಾಗೆಯೇ ಉಳಿಯಬೇಕಾಗುತ್ತದೆ ಆದುದರಿಂದ ಈ ಇಂಡಿವಿಜ್ಯುವಲ್ ರೈಟ್ಸ್‌ನ್ನು ಕಿತ್ತು ಹಾಕುವುದು ಸರಿಯಲ್ಲ. ಹಣ ಇದ್ದವರು ಕೊಡುತ್ತಾರೆ. ಹಣ ಇಲ್ಲದವರು ಕೊಡುವುದಿಲ್ಲ. ಮುಖ್ಯವಾಗಿ ಇವೂತ್ತಿನ ಎಜುಕೇಶನ್ ಪಾಲಿಸಿ ನೋಡಿದರೆ ನನಗಾದರೂ ಅನ್ನಿಸುವುದು ಏನೆಂದರೆ, ಪ್ರೈವೇಟ್ ಎಜುಕೇಷನ್ ಸಿಸ್ಟಮ್ ನಮ್ಮ ದೇಶದಲ್ಲಿ ಜಾರಿಗೆ ಬಂದರೆ ಒಳ್ಳೆಯದು ಎಂದು.

ಛೇರ್‌ಮನ್.—ಅವರ ಭಾಷಣ ಮುಗಿಯಲಿ ನಂತರ ತಾವು ಮಾತನಾಡಿ.

ಶ್ರೀಮತಿ ಚಂದ್ರಪ್ರಭಾ ಅರಸ್.—ಮಾನ್ಯ ಸಭಾಧ್ಯಕ್ಷರೇ, ನನ್ನ ಮಾನ್ಯ ಸಹೋದ್ಯೋಗಿಗಳು ಇಲ್ಲಿ ಹೇಳುತ್ತಿರುವುದು ಪರಿಭಾಷೆಯಲ್ಲಿ ಸ್ವಲ್ಪ ಬದಲಾವಣೆ ಇದೆ. ಆದರೆ ಗುರಿಯೆಲ್ಲ ಒಂದೇ. ಈಗ ಆರೋಗ್ಯ ಶಿಕ್ಷಣ ಸಂಸ್ಥೆಗಳಲ್ಲಿ ನಾಲ್ಕು ಲಕ್ಷ ೫ ಲಕ್ಷ ಅಂತ ವ್ಯಾಪಾರಿ ಮನೋಭಾವದಿಂದ ಸೀಟು ಶುಲ್ಕಗಳನ್ನು ಕೊಡುವುದು ಏನಿದೆ, ಅದರ ಅಗತ್ಯವಿಲ್ಲವೆಂದು ನಾನು ಹೇಳಿದೆ. ಗ್ರಾಮೀಣಮಟ್ಟದಿಂದ ಒಬ್ಬ ರೈತನ ಮಗ ಅವನು ಬೆಳೆದ ಪರಿಸರ, ಬೆಳೆದ ಸನ್ನಿವೇಶದಲ್ಲಿ ೮೦, ೯೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುವುದಿಲ್ಲವೆಂಬುದು ನಿಜ. ಆದಕ್ಕಾಗಿ ರೈತರ ಮಕ್ಕಳಿಗೆ ಮೀಸಲಾತಿ ಇಟ್ಟಲ್ಲಿ ಅದ್ದರಿಂದ ಉಪಯೋಗವಾಗಬಹುದು. ಅದಕ್ಕೆ ನಾವು ಬದ್ಧರಾಗಿರೋಣ. ಹಿಂದಿನ ಸರ್ಕಾರದವರು ವೈದ್ಯಕೀಯ ಕಾಲೇಜುಗಳನ್ನು ಹೊಸದಾಗಿ ಕೊಡುವುದಿಲ್ಲವೆಂದು ಹೇಳಿದರು. ಆದರೂ ಪ್ರತಿ ಜಿಲ್ಲೆಗೆ ಕೊನೆಗೆ ಪ್ರತಿ ತಾಲ್ಲೂಕುಗಳಲ್ಲಿ ಈ ವ್ಯಾಪಾರಿ ಸಂಸ್ಥೆಗಳನ್ನು ತೆರೆಯಲು ಅನುಮತಿ ಮಂಜೂರು ಮಾಡುತ್ತಾ ಹೋದರು. ಅವುಗಳಲ್ಲಿ ಓದಿದ ಲಕ್ಷಾಂತರ ಯುವಜನಾಂಗದವರು ನಿರುದ್ಯೋಗಿಗಳಾಗಿ ಬೀದಿಗಳಲ್ಲಿ ಅಲೆಯುವ ಸ್ಥಿತಿ ಇಂದು ಉಂಟಾಗಿದೆ. ನಾನೂ ಕೂಡ ಹಳ್ಳಿಗಾಡಿನಿಂದಲೇ ಓದು ಮುಗಿಸಿ ಬಂದಿರುವುದು ಪಟ್ಟಣಗಳಲ್ಲಿ ನಾನು ಹೆಚ್ಚು ಓದಲಿಲ್ಲ. ಈ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ ಈ ವ್ಯಾಪಾರಿ ಮನೋಭಾವ ವಿದ್ಯಾರ್ಥಿದೆಸೆಯಿಂದಲೇ ಪ್ರಾರಂಭ ಆಗಬಾರದು. ಅದು ವೈದ್ಯಕೀಯ ಶಿಕ್ಷಣ ಇರಲಿ, ಅಥವಾ ಇಂಜಿನಿಯರಿಂಗ್ ಶಿಕ್ಷಣ ಇರಲಿ ಅಥವಾ ಬೇರೆ ತಾಂತ್ರಿಕ ಶಿಕ್ಷಣ ಇರಲಿ. ಆರ್ಥಿಕ ದುರ್ಬಲರಾಗಿರುವವರಿಗೆ ಇಂತಹ ಕಡೆ ಮೀಸಲಾತಿ ಕೊಟ್ಟು ಅವರನ್ನು ಮುಂದೆ ತರುವ ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳೋಣ. ಹಳ್ಳಿಗಾಡಿನಿಂದ ಬರುವ ಮಕ್ಕಳಿಗೆ ಇಷ್ಟು ರಿಸರ್ವೇಷನ್ ಕೊಡಲೇಬೇಕೆಂದು ರಿಸರ್‌ವೇಷನ್ ಪಾಲಿಸಿ ತೆಗೆದುಕೊಂಡು ಬನ್ನಿ. ಇಲ್ಲದಿದ್ದರೆ ಹಳ್ಳಿಗಾಡಿನಿಂದ ಬರುವವರು ತಮ್ಮಲ್ಲಿ ಇರಬಹುದಾದ ೫–೬ ಎಕರೆ ಜಮೀನು ಮಾರಿಕೊಂಡು ವಿದ್ಯಾಭ್ಯಾಸ ಮುಗಿಸುವುದಕ್ಕೆ ೧೦ ವರ್ಷವಾಗುತ್ತದೆ ನಂತರ ಅವರಿಗೆ ಖರ್ಚು ಮಾಡಿರುವ ಹಣ ಹೇಗೆ ಸಂಪಾದನೆ ಮಾಡುವುದು ಎಂಬ ಭಾವನೆ ಬರುತ್ತದೆ. ಇದು ಆಗಬಾರದೆಂಬುದು ನನ್ನ ಅಭಿಪ್ರಾಯ ಹಾಗೂ ನನ್ನ ಕಳಕಳಿ. ಇನ್ನು ಹಿಂದುಳಿದ ವರ್ಗಗಳ ಆಯೋಗದ ಬಗ್ಗೆ ಹೇಳಿದರು. ಈ ಬಗ್ಗೆ ನಾವೇನೂ ತಜ್ಞರಲ್ಲದಿದ್ದರೂ ಸಹ ನಾನು ತಿಳಿದುಕೊಂಡ ಮಟ್ಟಿಗೆ ಈ ಸಮಾಜದಲ್ಲಿ ಸೋಶಿಯಲ್ ಬ್ಯಾಕ್‌ವರ್ಡ್‌ನೆಸ್ ಏನಿದೆ, ಇದರ ಪರಿಭಾಷೆಯ ಬಗ್ಗೆ ನಮಗೂ ನಿಮಗೂ ವ್ಯತ್ಯಾಸ ಇದೆ. ಏನೆಂದರೆ ಸಮಾಜದಲ್ಲಿ ಶೋಷಣೆಗೆ ಒಳಗಾದವರು, ಇಲ್ಲವೇ ತುಳಿತಕ್ಕೆ ಒಳಗಾದವರು ಎಂದರೆ ಕೇವಲ ವ್ಯವಸಾಯ ಮಾಡಿಕೊಂಡು ಬಂದಿರುವವರೇ ಅಲ್ಲ. ಒಂದು ಸಮಾಜದಲ್ಲಿ ಸಹಸ್ರಾರು ವರ್ಷಗಳಿಂದ ಶೋಷಣೆಗೊಳಗಾಗಿಟ್ಟು ಕೆಲವು ಸಲ ಅಸ್ಪೃಶ್ಯರ ರೀತಿಯಲ್ಲಿ ಯಾರು ನಮ್ಮ ಸಮಾಜದಲ್ಲಿ ಜೀವನ ಮಾಡಿಕೊಂಡು ಬಂದಿದ್ದಾರೋ ಅವರ ಏಳಿಗೆ ಆಗಲು ಹತ್ತಾರು ಡಿಕೇಡ್ಸ್ ಬೇಕಾಗುತ್ತದೆ. ಕೇವಲ ಒಂದೆರಡು ವರ್ಷಗಳಲ್ಲಿ ಆಗುವುದಿಲ್ಲ. ಆದ್ದರಿಂದ ಈ ಪರಿಭಾಷೆಯನ್ನು ಕಲ್ಪಿಸಿಕೊಳ್ಳುವಾಗ

ಪ್ರಥಮತಃ ಅವರ ಸಾಮಾಜಿಕ ಸ್ಥಿತಿಗತಿಗಳು ಏನು ಎಂದು ನಾವು ತಿಳಿದುಕೊಳ್ಳಬೇಕು. ನಂತರ ಅವರ ವಾರ್ಷಿಕ ಆದಾಯ ಏನಿದೆ, ಏನಿಲ್ಲ, ತಲಾವಾರು ಎಷ್ಟು ಆದಾಯ ಇದೆಯೆಂದು ಪರಿಗಣಿಸಬೇಕಾಗುತ್ತದೆ. ಮತ್ತು ಅದೇ ರೀತಿ ಶಿಕ್ಷಣ ಅವರಿಗೆ ಎಷ್ಟರ ಮಟ್ಟಿಗೆ ಸಿಕ್ಕಿದೆ ಎಂದು ನೋಡಬೇಕು. ಬ್ರಾಹ್ಮಣ ಸಮಾಜದಲ್ಲಿ ಬಡವರಿಲ್ಲವೇ ಎಂದು ತಾವು ಕೇಳಿದಿರಿ. ಅದಕ್ಕಾಗಿಯೇ ಹಿಂದೆ ಅವರಿಗಾಗಿ ಸ್ಪೆಷಲ್ ಗ್ರೂಪ್ ಅಂತ ೧೫ ಪರ್ಸೆಂಟ್ ಇಟ್ಟಿದ್ದರು. ಬ್ರಾಹ್ಮಣರಲ್ಲಿ ಎಷ್ಟೋ ಜನ ವಾರಾನ್ನ ಮಾಡಿಕೊಂಡು ಮುಂದೆ ಬಂದಿದ್ದಾರೆ. ಕಷ್ಟಪಟ್ಟು ಒಳ್ಳೆಯ ಸ್ಥಾನಗಳಿಗೆ ಬಂದಿದ್ದಾರೆ. ಆದರೆ ಸಮಾಜದಲ್ಲಿ ಅವರಿಗಿರುವ ಸಾಮಾಜಿಕ ಸ್ಥಾನಮಾನ ಗೌರವಗಳೇನಿದ್ದವು, ಅವುಗಳಿಂದಲೂ ವಂಚಿತರಾದಂತಹ ಅನೇಕ ಜನರಿದ್ದಾರೆ. ಅದರಲ್ಲೂ ಹಳ್ಳಿಗಾಡುಗಳಲ್ಲಿ ಇಂತಹ ಬೇಕಾದಷ್ಟು ಜನರಿದ್ದಾರೆ. ಸಣ್ಣ ಉದಾಹರಣೆ ಹೇಳುತ್ತೇನೆ. ೧೫೦ ಮನೆ ಇರುವ ಹಳ್ಳಿಯನ್ನು ತೆಗೆದುಕೊಳ್ಳೋಣ. ಅಲ್ಲಿ ಪರಿಶಿಷ್ಟ ವರ್ಗದವರ ಒಂದು ಕೇರಿ ಇದೆ. ಮುಂದು ವರಿದ ವರ್ಗಗಳ ಒಂದು ಕೇರಿ ಇದೆ ಅದರಲ್ಲಿ ಸುಮಾರು ನೂರು ಮನೆಗಳನ್ನು ಪರಿಶೀಲನೆಗೆ ಒಳಪಡಿಸಿ ಅವುಗಳಲ್ಲಿ ಎಷ್ಟು ಮನೆಗಳಿಗೆ ಗಾರೆ ಇದೆ ಎಷ್ಟು ಮನೆಗಳಿಗೆ ಇಟ್ಟಿಗೆ ಗೋಡೆ ಇದೆ, ಚಾವಣಿ ಎಷ್ಟಕ್ಕಿದೆ, ಎಷ್ಟು ಮನೆಗಳಿಗೆ ಸುಣ್ಣಬಣ್ಣವಾಗಿದೆ ಜೊತೆಗೆ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಆ ಗ್ರಾಮದ ಹಬ್ಬ ಹರಿದಿನಗಳಲ್ಲಿ ಹಾಗೂ ಮದುವೆ ಮುಂಜಿಗಳಾದಾಗ ಅವರ ಸ್ಥಾನಮಾನ ಏನಿದೆ ಎಂಬುದನ್ನೆಲ್ಲಾ ಕೂಲಂಕಷವಾಗಿ ಗಮನಿಸಿದಾಗ ಸಹಸ್ರಾರು ವರ್ಷಗಳಿಂದ ಯಾವ ಜನರು ಶೋಷಣೆಗೊಳಗಾಗಿದ್ದಾರೆ, ಅವರ ಸಾಮಾಜಿಕ ಪರಿಸರ ಏನಿದೆ ಎಂಬುದನ್ನು ಗಮನಿಸಿ, ಅಂತಹ ಜನರನ್ನು ಮುಂದೆ ತರಲು ಪ್ರಯತ್ನ ಪಡಬೇಕಾಗುತ್ತದೆ. ಈ ಒಂದು ಆಧಾರದಮೇಲೆ ರಿಸರ್ವೇಷನ್ ಪಾಲಿಸಿಯನ್ನು ತರಬೇಕು ಎನ್ನುವ ಉದ್ದೇಶವನ್ನು ಸರ್ಕಾರ ಹೊಂದಿತ್ತು. ಆ ಒಂದು ದಿಸೆಯಲ್ಲಿ ಹೆಜ್ಜೆಯನ್ನು ಕೂಡಾ ಇಟ್ಟಿತ್ತು. ಆದರೆ ಇವತ್ತು ಆ ಮೂಲ ಉದ್ದೇಶ ಏನಿತ್ತು, ಅದು ಚರ್ಚೆಗೆ ಬರಲೇ ಇಲ್ಲ. ವೆಂಕಟಸ್ವಾಮಿ ಆಯೋಗದ ವರದಿ ಚರ್ಚೆಗೆ ಎಲ್ಲಿಯೂ ಬರಲಿಲ್ಲ. ಅದರಲ್ಲಿ ತಪ್ಪುಗಳಿದ್ದರೆ ಅಥವಾ ಕೆಲವೊಂದು ದೋಷಗಳಿದ್ದರೆ ಅದನ್ನು ಸರಿಪಡಿಸಬಹುದಿತ್ತು. ಅದನ್ನು ಬಿಟ್ಟು ಪೂರ್ತಿಯಾಗಿ ದೂರೀಕರಿಸಿದರು. ಇನ್ನೂ ಮುಂದೆಯೂ ಅದೇ ರೀತಿ ಮಾಡುತ್ತಾರೆ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ, ಅದು ಆಗಬಾರದು ಎಂದು ಆಗ್ರಹಪೂರ್ವಕವಾಗಿ ಆಗ್ರಹಪಡಿಸುತ್ತಿದ್ದೇನೆ. ಏತಕ್ಕೆಂದು ಹೇಳಿದರೆ, ಆರ್ಥಿಕ ಮತ್ತು ಇನ್ನಿತರ ಶಿಕ್ಷಣಮಟ್ಟ ಏನು ಬರುತ್ತದೆ, ಎಂಬುದು ಅನಂತರ. ಆದರೆ ಸಾಮಾಜಿಕ ಮಟ್ಟ ಏನು ಇದೆ, ಅದರಿಂದ ಅವರಿಗೆ ಮುಕ್ತಿ ದೊರಕಬೇಕಾದರೆ ಅವರೂ ಕೂಡಾ ಎಲ್ಲರಂತೆ ಗೌರವಯುತವಾಗಿ ಸಮಾಜದಲ್ಲಿ ತಲೆಯೆತ್ತಿ ಬಾಳಬೇಕಾದರೆ ಅವರಿಗೆ ಮೀಸಲಾತಿಗಳನ್ನು ಕಲ್ಪಿಸಿ ಕೊಡಬೇಕಾಗುತ್ತದೆ. ಎಲ್ಲಿಯವರೆಗೆ ಕೊಡಬೇಕು ಎಂದು ತಾವು ಕೇಳಬಹುದು. ಕೆಲವಾರು ವರ್ಷ ಗಳವರೆಗೆ ಆದರೂ ಮಾಡಬೇಕಾಗುತ್ತದೆ, ಸಹಸ್ರಾರು ವರ್ಷಗಳಿಂದ ಶೋಷಣೆಗೆ ಒಳಪಟ್ಟವರಿಗೆ ಹತ್ತಾರು ವರ್ಷಗಳು ಮೀಸಲಾತಿ ಬೇಕಾಗುತ್ತದೆ. ಆದುದರಿಂದ ಈ ಒಂದು ದಿಸೆಯಲ್ಲಿ ದಿಟ್ಟ ಧೈರ್ಯ ವನ್ನು ತೋರಬೇಕಾಗುತ್ತದೆ. ಧ್ವನಿ ಇದ್ದವರು ಕೂಗಾಡಿದರು. ಕೆಲವರಂತೂ ಉಪವಾಸ ಮುಷ್ಕರವನ್ನು ಮಾಡಿದರು. ಆ ರೀತಿ ಏತಕ್ಕೆ ಮಾಡಿದರೋ ನನಗಂತೂ ಗೊತ್ತಾಗಲಿಲ್ಲ. ನನಗಂತೂ ಇದರ ಬಗ್ಗೆ ಬಹಳ ವಿಷಾದವೆನಿಸುತ್ತದೆ. ಇದರಲ್ಲಿ ಉಪವಾಸ ಮಾಡುವಂಥದ್ದು ಏನೂ ಇರಲಿಲ್ಲ. ರಿಸರ್ವೇಷನ್ ಪಾಲಿಸಿಯನ್ನು ತರಬೇಕಾದರೆ ಯಾರಿಗೆ ಅದು ಹೇಗೆ ಎನ್ನುವುದರ ಬಗ್ಗೆ ನ್ಯೂನತೆಗಳು ಇದ್ದರೆ ಸರಿಪಡಿಸ ಬಹುದಿತ್ತು, ಲೋಪದೋಷಗಳು ಇದ್ದರೆ ಸರಿಪಡಿಸಬಹುದಿತ್ತು. ಯಾವ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು, ಯಾವುದು ಇಲ್ಲ ಎನ್ನುವ ಬಗ್ಗೆ ಅದಕ್ಕೆ ಚರ್ಚೆಯಾಗುವುದಕ್ಕೆ ಅವಕಾಶವನ್ನು ಕೊಡದೆ ಹಿಂದುಳಿದ ವರ್ಗಗಳು ಮತ್ತೂ ಹಿಂದುಳಿಯುವಂಥ ಒಂದು ಸನ್ನಿವೇಶಕ್ಕೆ ಕೊಂಡೊಯ್ಯುತ್ತಿಕ್ಕಂಥ ಧೋರಣೆ ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದಾದರೂ ಕೂಡಾ ವರದಿ ಬಂದಮೇಲೆ ಅದನ್ನು ಕೂಲಂಕುಷವಾಗಿ, ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಎಲ್ಲಾ ರೀತಿಯಲ್ಲೂ ಚರ್ಚೆಯಾಗಬೇಕು. ಅದನ್ನು ಜಾರಿಗೆ ಕೊಡುವಲ್ಲಿ ಸರ್ಕಾರ ಧೈರ್ಯವಹಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ದೇಶದ ಯಾವುದೇ ಪಂಚವಾರ್ಷಿಕ ಯೋಜನೆಗಳು ಮುಗಿದರೂ ಕೂಡಾ ನಮ್ಮಲ್ಲಿ ಏತಕ್ಕೆ ಇನ್ನು ಸುಧಾರಣೆಯಾಗಿಲ್ಲ, ಎಲ್ಲಾ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳು ಏತಕ್ಕೆ ಕುಂಠಿತಗೊಳ್ಳುತ್ತಿವೆ ಎಂದರೆ ಈ ಜನಸಂಖ್ಯೆಯ ದೃಷ್ಟಿಯಿಂದ ಮತ್ತು ಕುಟುಂಬ ಕಲ್ಯಾಣ, ಮಕ್ಕಳು ಮತ್ತು ಮಹಿಳಾ ಆರೋಗ್ಯದ ದೃಷ್ಟಿಯಿಂದ ಹೇಳುವುದಾದರೆ, ಸಾಕಷ್ಟು ಸಂಖ್ಯೆಯಲ್ಲಿ ನಮ್ಮಲ್ಲಿ ಏನು ಪಾಪ್ಯುಲೇಷನ್ ಗ್ರೋಥ್ ನಡೆಯುತ್ತಿದೆ, ಅದನ್ನು ಕಡಿಮೆ ಗೊಳಿಸಬೇಕಾಗುತ್ತದೆ. ಕುಟುಂಬ ಕಲ್ಯಾಣ ಇಲಾಖೆಯನ್ನು ಹೆಚ್ಚಿನದಾಗಿ ಚುರುಕುಗೊಳಿಸ ಬೇಕಾಗುತ್ತದೆ. ಅವರಿಗೆ ಇನ್‌ಸೆಂಟೀವ್ಸ್ ಎಂದು ಏನು ಹೇಳುತ್ತೇವೆ. ಕುಟುಂಬ ಕಲ್ಯಾಣ ಯೋಜನೆಗೆ ಒಳಪಟ್ಟಂಥವರಿಗೆ ಈಗ ೧೦೦–೧೫೦ ರೂಪಾಯಿ ಹೆಣ್ಣುಮಕ್ಕಳಿಗೆ ಏನು ಕೊಡುತ್ತಿದ್ದೀರಿ, ಅದನ್ನು

ಇನ್ನೂ ಹೆಚ್ಚಿಸಬೇಕಾಗುತ್ತದೆ. ಸುಮಾರು ೩೦೦ ರಿಂದ ೫೦೦ ರೂಪಾಯಿ ಕೊಟ್ಟರೂ ತಪ್ಪಾಗಲಾರದು ಎಂದು ನನ್ನ ವೈಯಕ್ತಿಕ ಭಾವನೆ. ಈ ಒಂದು ಇನ್‌ಸೆಂಟೀವ್ಸನ್ನು ಕೊಡುವುದರ ಮೂಲಕ ಅವರಿಗೆ ಇನ್ನೂ ಹೆಚ್ಚಿನ ಉತ್ತೇಜನ ಕೊಡಬೇಕು. ಈ ಪಾಪ್ಯುಲೇಷನ್ ಕಂಟ್ರೋಲ್ ಜನಸಂಖ್ಯೆಯ ನಿಯಂತ್ರಣವನ್ನು ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇನ್ನು ಹೆಚ್ಚಿನ ರೀತಿಯಲ್ಲಿ ಇದನ್ನು ಜಾರಿಗೊಳಿಸಬೇಕಾಗುತ್ತದೆ. ಇತ್ತೀಚೆಗೆ ಇದರ ಪರಿಣಾಮ ಕಡಿಮೆಯಾಗುತ್ತಿದೆ ಎಂದು ನನಗನ್ನಿಸುತ್ತಿದೆ. ಅದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರ ಕೈಗೆತ್ತಿಕೊಳ್ಳಬೇಕಾಗುತ್ತದೆ. ಹಾಗೆಯೇ ಗ್ರಾಮ ನೈರ್ಮಲ್ಯದ ಬಗ್ಗೆ ಒಂದು ನಿರ್ಮಲ ಯೋಜನೆಯನ್ನು ನಮ್ಮ ಸರ್ಕಾರದವರು ಹಾಕಿಕೊಂಡಿದ್ದಾರೆ. ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಗ್ರಾಮ ನೈರ್ಮಲ್ಯೀಕರಣ ಅವರಿಗೆ ಉಚಿತವಾಗಿ ಕಕ್ಕಸ್ಸುಗಳನ್ನು ಕಟ್ಟಿಸಿಕೊಡತಕ್ಕಂಥದ್ದು. ಅದಕ್ಕೆ ಮಾನ್ಯ ಹಿರಿಯ ಸದಸ್ಯರೊಬ್ಬರು ಹೇಳಿದರು, ಅದಕ್ಕೆ ನಿಗದಿಪಡಿಸಿರತಕ್ಕಂಥ ಹಣಕಾಸಾಗಲೀ, ಕೊಡತಕ್ಕಂತಹ ಸಾಮಗ್ರಿಗಳು ಸಾಲದು ಎಂದು ಹೇಳಿದ್ದಾರೆ. ಅದನ್ನು ಬೇಕಾದರೆ ಹೆಚ್ಚು ಪಡಿಸಲಿ ಎಂದು ಹೇಳುತ್ತೇನೆ. ಆದರೆ ನೈರ್ಮಲ್ಯಗಳ ಕಡೆ ಗಮನವನ್ನು ಕೊಡುತ್ತಾ ಗ್ರಾಮಮಟ್ಟದಲ್ಲಿ ಮತ್ತು ಸರಿಯಾದ ರೀತಿಯಲ್ಲಿ ರಸ್ತೆಗಳ ನಿರ್ಮಾಣ ಚರಂಡಿ ವ್ಯವಸ್ಥೆ ಆಗಬೇಕಾಗಿದೆ. ಶೌಚಾಲಯಗಳು ಪಟ್ಟಣಗಳಲ್ಲಿ ಕೆಲವು ಕಡೆ ಇದೆ, ಅಲ್ಲಿಯೂ ನೀರಿನ ಸೌಕರ್ಯ ಎಲ್ಲಾ ಕಡೆಯಲ್ಲಿಯೂ ಇಲ್ಲ. ಅದು ನಿಜ. ಆದರೆ ಕಾಂಪೋಸ್ಟ್ ಗೊಬ್ಬರದಂತೆ ಉಪಯೋಗಿಸುವ ರೀತಿಯಲ್ಲಿ ಒಂದು ಗುಂಡಿಯನ್ನು ತೋಡಿಕೊಳ್ಳುವುದಕ್ಕೆ ಬೇಕಾದ ಸಾಮಗ್ರಿಗಳನ್ನು ಮತ್ತು ಎರಡು ಮೂಟೆ ಸಿಮೆಂಟ್‌ನ್ನು ಕೊಡತಕ್ಕಂಥ ಒಂದು ಸೌಕರ್ಯವನ್ನು ಸರ್ಕಾರ ಈಗ ಒದಗಿಸಿ ಕೊಡುತ್ತಿದೆ. ಇದು ಇನ್ನೂ ಹೆಚ್ಚಿನ ವ್ಯಾಪ್ತಿಯಲ್ಲಿ ನಡೆಯಬೇಕು, ಇನ್ನೂ ಹೆಚ್ಚಿನ ಹಳ್ಳಿಗಳಿಗೆ, ಗ್ರಾಮಗಳಿಗೆ ಈ ಒಂದು ಸೌಲಭ್ಯ ದೊರಕಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅನೇಕ ವಿಷಯಗಳು ಹೇಳುವುದಿತ್ತು. ಇನ್ನೂ ಮಾತನಾಡುವ ಸನ್ಮಾನ್ಯ ಸದಸ್ಯರುಗಳು ಇದ್ದಾರೆ. ಸಮಯಾವಕಾಶ ಕಡಿಮೆ ಇದೆ. ಆದ್ದರಿಂದ ಮತ್ತೊಂದು ಸಂದರ್ಭದಲ್ಲಿ ಎಲ್ಲಾ ವಿಷಯವನ್ನು ಹೇಳುತ್ತೇನೆ ಎಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಂಡಿಸಿದ್ದು, ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಅದನ್ನು ಅನುಮೋದಿಸಿದ್ದಾರೆ. ಈ ಸಾರಿಯ ರಾಜ್ಯಪಾಲರ ಭಾಷಣ ಒಂದು ವಿಶೇಷವಾದ ಪರಿಸ್ಥಿತಿಯಲ್ಲಿ ಬಂದಂತಹ ಭಾಷಣ. ಮೂರು ತಿಂಗಳಲ್ಲಿ ಎರಡು ಸಾರಿ ರಾಜ್ಯಪಾಲರ ಭಾಷಣ ಮಾಡಿದ್ದು ನಮ್ಮ ವಿಧಾನ ಮಂಡಲದ ಇತಿಹಾಸದಲ್ಲಿ ಒಂದು ದಾಖಲೆ ಎಂದು ಹೇಳಬಹುದು. ರಾಜ್ಯಾಂಗದ ನಿಯಮಾವಳಿ ಪ್ರಕಾರ ಈ ಒಂದು ಭಾಷಣ ಅನಿವಾರ್ಯ ಮತ್ತು ಅಗತ್ಯವೂ ಹೌದು. ಆದರೆ ನನಗೆ ಎರಡು ಭಾಷಣಗಳ ಅವಶ್ಯಕತೆ ಇತ್ತೇ ಎಂದು ನಾನು ಇಲ್ಲಿ ಕುಳಿತು ವಿಚಾರ ಮಾಡಿದೆ. ಮೊದಲಿನ ಭಾಷಣಕ್ಕೂ ಮತ್ತು ಈಗಿನ ಭಾಷಣಕ್ಕೂ ಒಂದು ವ್ಯತ್ಯಾಸ ಅಂದರೆ ರಾಜ್ಯಪಾಲರುಗಳು ಬದಲಾವಣೆ ಆಗಿದ್ದಾರೆ, ಭಾಷಣದ ಭಾಷೆ ಅದೇ, ಸರ್ಕಾರ ಸಹ ಅದೇ. ಈ ಪ್ರಶ್ನೆ ಹಾಕಿಕೊಳ್ಳುವಾಗ ಬೇರೆ ಬೇರೆ ರಾಜ್ಯಗಳಲ್ಲಿ ಈ ಕೆಲಸ ನಡೆದಿಲ್ಲವೇ, ಕೇಂದ್ರ ಸರ್ಕಾರ ರಾಷ್ಟ್ರಪತಿಗಳ ಭಾಷಣವನ್ನು ಎರಡು ಸಾರಿ ಮಾಡಿಲ್ಲವೇ ಎಂಬ ಪ್ರಶ್ನೆ ಬರಬಹುದು. ಕೇಂದ್ರ ಸರ್ಕಾರದಲ್ಲಿ ರಾಷ್ಟ್ರಪತಿಗಳ ಭಾಷಣ ಇರಲಿಲ್ಲವೇ, ಬೇರೆ ರಾಜ್ಯಗಳಲ್ಲಿ ರಾಜ್ಯಪಾಲರುಗಳ ಭಾಷಣ ಇರಲಿಲ್ಲವೇ ಎಂದು ಕೇಳಬಹುದು. ಅಲ್ಲಿ ಒಂದು ವಿಶೇಷ ಏನಿತ್ತು ಅಂದರೆ ಅಲ್ಲಿ ಆಯ್ಕೆ ಆಗಿರತಕ್ಕಂಥ ಶಾಸನಸಭೆಗಳ ಸದಸ್ಯರುಗಳ ಸಂಖ್ಯೆ ಮತ್ತು ನಾಯಕನುಗಳಿಗೆ ಸಂಬಂಧಪಟ್ಟ ರಾಷ್ಟ್ರಪತಿ ಅವರು ಮತ್ತು ಸಂಬಂಧಪಟ್ಟ ರಾಜ್ಯಪಾಲರು ನಿಮ್ಮ ಬಹುಮತವನ್ನು ಸಾಬೀತು ಪಡಿಸಿ ಎಂದು ಆದೇಶ ಕೊಟ್ಟ ಕಾರಣ ಅಲ್ಲಿ ಸದನಗಳನ್ನು ಅಂದರೆ ಜಂಟಿ ಅಧಿವೇಶನಗಳನ್ನು ಕರೆದು ರಾಜ್ಯಪಾಲರ ಭಾಷಣವನ್ನು, ರಾಷ್ಟ್ರಪತಿಗಳ ಭಾಷಣವನ್ನು ಮಾಡಿದ್ದು ಸರಿ. ಆದರೆ ಇಲ್ಲಿ ೧೭೭ ಜನ ಶಾಸಕರು ಇದ್ದಾಗ್ಯೂ, ಈಗ ೧೭೮ ಜನ ಶಾಸಕರು ಆಯ್ಕೆ ಆಗಿದ್ದ ಕಾಲದಲ್ಲಿ ನಿಮ್ಮ ಬಹುಮತವನ್ನು ಪ್ರದರ್ಶನ ಮಾಡಿ ಎಂದು ಯಾರೂ ಕೇಳಿರಲಿಲ್ಲ. ಈ ಪ್ರಶ್ನೆ ನಮ್ಮ ಮುಂದೆ ಇರಲಿಲ್ಲ. ಆದರೂ ರಾಜ್ಯಪಾಲರ ಭಾಷಣವನ್ನು ಮಾಡುವ ಅವಶ್ಯಕತೆ ಇತ್ತೇ ಎಂದು ಸರ್ಕಾರ ಹೇಳಬೇಕು. ಜನವರಿ ಕರೆದ ಅಧಿವೇಶನದಲ್ಲಿಯೇ ಈ ಎರಡೂ ಭಾಷಣಗಳನ್ನು ಸೇರಿಸಿದ್ದರೆ, ಎರಡಕ್ಕೂ ಒಂದೇ ಸಲ ನಾವು ಮಾತನಾಡಬಹುದಾಗಿತ್ತು. ನಂತರ ಸರ್ಕಾರದಿಂದ ಉತ್ತರ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಜೊತೆಗೆ ಈ ರಾಜ್ಯಪಾಲರ ಭಾಷಣದಲ್ಲಿ ನಾವು ಎಲ್ಲಾ ನಿಯಮಗಳನ್ನೂ ಮೀರಿ ನಡೆದುಕೊಂಡಿದ್ದೇವೆ. ಮೊದಲನೆಯದಾಗಿ ಎರಡು ಸಲ ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಿದ್ದು. ಎರಡನೆಯದಕ್ಕೆ ಸದನದಲ್ಲಿ ರಾಜ್ಯಪಾಲರ ಭಾಷಣಕ್ಕೆ ಪ್ರಾಶಸ್ತ್ಯ ಪ್ರಾಧಾನ್ಯತೆ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ಇದು,

ಗೌರವವನ್ನು ಸೂಚಿಸತಕ್ಕಂಥ ಕೆಲಸವನ್ನು ಮೊದಲು ಮಾಡಬೇಕಾಗಿತ್ತು. ಏಕೆಂದರೆ It is a Policy enuciating Document. ಈ ಕೆಲಸ ಮಾಡುವುದು ಬಿಟ್ಟು, ನಾವು ಈ ಪಾಲಿಸಿ ಡಾಕ್ಯುಮೆಂಟ್‌ನಲ್ಲಿ ಏನು ಹೇಳಿದ್ದಾರೆ ಅದನ್ನು ಅಭಿವ್ಯಕ್ತ ಗೊಳಿಸತಕ್ಕಂಥ ಮತ್ತು ಅದನ್ನು ಅನುಷ್ಠಾನದಲ್ಲಿ ತರತಕ್ಕಂಥ ಆಯವ್ಯಯವನ್ನು ಚರ್ಚೆ ಮಾಡಿದ್ದೇವೆ. ಆದ್ದರಿಂದ ಈ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಒಂದು ಸಾಂಪ್ರದಾಯಿಕ ಚರ್ಚೆಯಾಗಿ ಉಳಿದಿದೆ. ಸಾಂಪ್ರದಾಯಿಕ ಭಾಷಣ ಸಾಂಪ್ರದಾಯಿಕ ಚರ್ಚೆ ಇದು ಎರಡನೆಯ ಡೀವಿಯೇಷನ್. ಮೂರನೆಯದು ಇಲ್ಲಿ ಸಂಪ್ರದಾಯಕ್ಕೆ ವಿರುದ್ಧವಾದ ಕೆಲಸ ಇಲ್ಲಿ ನಡೆಯಿತು. ಯಾರು ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಮಂಡನೆ ಮಾಡುತ್ತಾರೆ, ಅದು ಆದ ಮೇಲೆ ಆ ಪಕ್ಷದಸದಸ್ಯರು ಆ ನಿರ್ಣಯವನ್ನು ಅನುಮೋದಿಸತಕ್ಕದು ಒಂದು ಸಂಪ್ರದಾಯ. ಆದರೆ ಆ ಸಂಪ್ರದಾಯವನ್ನು ಅನುಮೋದನೆ ಮಾಡತಕ್ಕಂಥ ಕೆಲಸವನ್ನು ಈಗತಾನೆ ಶ್ರೀಮತಿ ಚಂದ್ರಪ್ರಭಾ ಅರಸ್ ಅವರು ಮಾಡಿದ್ದಾರೆ. ಅದರ ಮಧ್ಯ ಅನೇಕರ ಭಾಷಣಗಳು ನಡೆದು ಹೋಗಿವೆ. ಇಂತಹ ಎಲ್ಲ ಸಂಪ್ರದಾಯವನ್ನು ಮೀರಿ ಈ ರೀತಿ ನಡೆದುಕೊಂಡು ಕ್ರಮವನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಈ ಸದನದ ದೃಷ್ಟಿಯಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಇಲ್ಲಿ ಕೆಲಸ ಮಾಡತಕ್ಕ ಚುನಾಯಿತ ಪ್ರತಿನಿಧಿಗಳ ಹಿತದೃಷ್ಟಿ ಯಿಂದ ಸಮಂಜಸ ಆಗುತ್ತದೆ ಎಂದು ನಾನು ಹೇಳುತ್ತಿದ್ದೇನೆ. ಈ ಸರ್ಕಾರದ ಅಧಿಕಾರ ಸುಮಾರು ೧೦೦ ದಿವಸಗಳು ಕಳೆದ ಮೇಲೆ ಇದರ ಬಗ್ಗೆ ಅನೇಕ ವಿಮರ್ಶೆಗಳು ಬಂದವು. ಅದು ಆದಮೇಲೆ ಹತ್ತಿರ ಹತ್ತಿರ ಒಂದು ತಿಂಗಳು ಕಳೆದಿದೆ.

ಅಂದರೆ ೧೩೦ ದಿವಸಗಳು ಸಂದಿ ಹೋಗಿವೆ. ಇಷ್ಟು ದಿವಸಗಳ ವ್ಯವಹಾರದಲ್ಲಿ ನಾನು ಮುಖ್ಯ ವಾಗಿ ಗಮನಿಸಿದ್ದು, ಈ ಸರ್ಕಾರ ತೀರ್ಮಾನ ಮಾಡಿ ಆಲೋಚನೆ ಮಾಡುತ್ತದೆ, ಆಲೋಚನೆ ಮಾಡಿ ಯಾವುದನ್ನೂ ತೀರ್ಮಾನ ಮಾಡುವುದಿಲ್ಲ ಎನ್ನುವುದು ಇದಕ್ಕೆ ಅನೇಕ ಉದಾಹರಣೆಗಳನ್ನು ನಾನು ಹೇಳಬಹುದು. ಆಲೋಚನೆ ಮಾಡಿ ತೀರ್ಮಾನ ಮಾಡುವುದಕ್ಕೆ ಇರತಕ್ಕಂಥ ತೊಂದರೆ ಗಳನ್ನು ನಾನು ಬಲ್ಲೆ. ಪೂರ್ಣ ಪ್ರಮಾಣದ ಮಂತ್ರಿ ಮಂಡಲ ಇಲ್ಲ. ಆ ಪಕ್ಷದಲ್ಲಿ ಸಾಮರಸ್ಯ ಇಲ್ಲ ನಾಯಕರ ಮೇಲೆ ವಿಶ್ವಾಸ ಇದೆಯೋ ? ಇಲ್ಲವೋ ಗೊತ್ತಿಲ್ಲ, ಇದು ಅವರಿಗೆ ಸಂಬಂಧಪಟ್ಟ ವಿಚಾರ, ನಾನು ಅದರ ಬಗ್ಗೆ ಪ್ರಸ್ತಾಪ ಹೆಚ್ಚು ಮಾಡುವುದಿಲ್ಲ. ಆದರೆ ಎಷ್ಟು ಇಂತಹವು, ಮೊದಲನೆಯ ಉದಾಹರಣೆ ರಾಜ್ಯಪಾಲರು ಭಾಷಣ ಎರಡು ಸಾರಿ ಮಾಡಿದ್ದು, ಇದು ಆಲೋಚನೆ ಮಾಡದೆ ತೀರ್ಮಾನ ಮಾಡಿದ್ದರೆ ಒಂದು ಫಲ ಮೊದಲು ಮಂತ್ರಿಮಂಡಲದ ಸಭೆ ಸೇರಿತು. ಈ ಮಂತ್ರಿಮಂಡಲದ ಸಭೆಯಲ್ಲಿ ಒಂದು ನಿರ್ಣಯವಾಯಿತು. ಏನು ನಿರ್ಣಯ ಅಂದರೆ ಜಿಲ್ಲಾ ಪರಿಷತ್ತುಗಳಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿರತಕ್ಕಂಥದ್ದನ್ನು ರದ್ದು ಮಾಡಿದ್ದೇವೆ ಎಂದು, ಇದು ನಿರ್ಣಯ ಎಂದು ನಮಗೆ ಗೊತ್ತಾದದ್ದು..........

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ............

ಶ್ರೀ ಡಿ. ಬಿ. ಚಂದ್ರೇಗೌಡ. —ನಾನು ಪೂರ್ಣವಾಗಿ ಹೇಳಿಬಿಡುತ್ತೇನೆ, ಆಮೇಲೆ ಉತ್ತರ ಹೇಳಿ. ತಾವು ನಿರ್ಣಯ....

ಶ್ರೀ ಎಂ. ವೀರಪ್ಪಮೊಯ್ಲಿ.—ಯಾವ ನಿರ್ಣಯ.

ಶ್ರೀ. ಡಿ. ಬಿ. ಚಂದ್ರೇಗೌಡ.—ಬರೀ ಪ್ರತಿಕೆಯವರು ಬರೆದಿದ್ದಲ್ಲ. ತಾವು ಅವರನ್ನು ಕರೆಸಿ, ಪತ್ರಿಕಾ ಸಂದರ್ಶನ ಮಾಡಿ, ತಾವು ಇನ್‌ಫರ್ಮೇಷನ್ ಮಂತ್ರಿಯಾಗಿ ಹೇಳಿದ್ದೀರಿ ಎಂದು ಪತ್ರಿಕೆಯಲ್ಲಿ ಬಂದ ಮಾತು.

ಶ್ರೀ ಎಂ. ವೀರಪ್ಪಮೊಯ್ಲಿ.—ಜಿಲ್ಲಾ ಪರಿಷತ್ತು ಉಪಾಧ್ಯಕ್ಷರ ಸ್ಥಾನ ರದ್ದು ಮಾಡಿದ್ದೇವೆ ಎಂದು ನಾವು ಹೇಳಿದ್ದೇವೆಯೇ

ಶ್ರೀ ಡಿ. ಬಿ. ಚಂದ್ರೇಗೌಡ.—ಉಪಾಧ್ಯಾಯ ಸ್ಥಾನ.

ಶ್ರೀ ಎಂ. ವೀರಪ್ಪಮೊಯಿಲಿ.—ಉಪಾಧ್ಯಾಯರಾ, ಸಾರಿ.

ಶ್ರೀ ಡಿ. ಬಿ. ಚಂದ್ರೇಗೌಡ. —ಹೋಗಲಿ ಶಿಕ್ಷಕರು ಎಂದು ಹೇಳೋಣ, ಶಿಕ್ಷಕರ ನೇಮಕವನ್ನು ವಜಾ ಮಾಡಿದ್ದೇವೆ ಎಂದು ಹೇಳಿದರು ಆಮೇಲೆ ಗೊತ್ತಾಯಿತು ಇವರಿಗೆ, ವಜಾ ಮಾಡುವುದಕ್ಕೆ ಅಧಿಕಾರ ಇಲ್ಲವೆಂದು. ಮತ್ತೆ ಆಲೋಚನೆ ಮಾಡುವುದಕ್ಕೆ ಶುರು ಮಾಡಿದರು. ಇವರಿಗೆ ಅಧಿಕಾರವಿಲ್ಲವೆಂದು ಗೊತ್ತಾದ ಮೇಲೆ ಆಲೋಚನೆ ಶುರುವಾಯಿತು, ಈ ಆಲೋಚನೆಯ ಫಲ ಏನು ಮತ್ತು ಪರಿಣಾಮವೇನು ಅಂದರೆ, ಉಪಾಧ್ಯಾಯರುಗಳನ್ನು ನೇಮಕ ಮಾಡಿರತಕ್ಕಂಥದ್ದು ಶಾಸನ ಬದ್ಧವಾಗಿಲ್ಲ ಎಂಬುದಕ್ಕೆ ಅನೇಕ ಕಾರಣಗಳನ್ನು ಹೇಳಿದರು. ಇದು ಎರಡನೆಯದು. ಆಮೇಲೆ

ಜಿಲ್ಲಾ ಪರಿಷತ್ತುಗಳ ಅಧಿಕಾರದ ಪ್ರಶ್ನೆ ಪ್ರಾರಂಭವಾಯಿತು. ನಮಗೆ ಅಧಿಕಾರ ಇದೆಯೋ ಇಲ್ಲವೋ ಅಧ್ಯಕ್ಷರುಗಳು ಉಪಾಧ್ಯಕ್ಷರುಗಳು ನಡೆದುಕೊಳ್ಳತಕ್ಕಂಥ ರೀತಿ ಸರಿಯಿಲ್ಲ ಎಂದು ಹೇಳುವುದಕ್ಕೆ ಅದು ಆದಮೇಲೆ ಗೊತ್ತಾಯಿತು. ಸಂಬಂಧಪಟ್ಟ ಮಂತ್ರಿಗಳಿಗೆ ಜಿಲ್ಲಾಪರಿಷತ್ತಿಗೆ ಅಧಿಕಾರ ಇರತಕ್ಕಂಥಾದ್ದನ್ನು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು, ಆಮೇಲೆ ಮತ್ತೆ ಆಲೋಚನೆ ಶುರುವಾಯಿತು. ಈ ಆಲೋಚನೆಗೆ ತಮ್ಮದು ಸಾಲದು ಎಂದು ನಮ್ಮನ್ನು ಕರೆಸಿ ಚರ್ಚೆ ಮಾಡಿವರು ಮತ್ತೊಂದು ಸಲ ಆಲೋಚನೆ ಮಾಡದೆ ಮಾಡಿದಂಥ ಕೆಲಸ ಇದು. ಈಗ ನಾನು ಮೊದಲು ಪಟ್ಟಿ ಮಾಡಿ ಬಿಡುತ್ತೇನೆ. ಆಮೇಲೆ ವಿವರಕ್ಕೆ ಹೋಗುತ್ತೇನೆ. ಚುನಾವಣೆ ರದ್ದು ಮಾಡಿದ್ದೇವೆ ಎಂದು ಫೆಬ್ರುವರಿ ೧೫ ನೇ ತಾರೀಖು ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಮಂತ್ರಿಗಳು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಜಂಟಿಯಾಗಿ ಹೇಳಿದ ಮಾತು ಚುನಾವಣೆ ರದ್ದಾಗಿದೆಯೆಂದು. ಇದನ್ನು ಹೇಳಿದ ಮೇಲೆ ಗೊತ್ತಾಯಿತು ಅವರಿಗೆ. ಶಾಸನ ಬದ್ಧವಾಗಿ ಅಧಿಕಾರ ನಮಗೆ ಇಲ್ಲ ಎಂದು. ಚುನಾವಣೆಯನ್ನು ರದ್ದು ಮಾಡತಕ್ಕ ಅಧಿಕಾರ ಇಲ್ಲ ಎಂದು ಆಮೇಲೆ ಅವರಿಗೆ ಗೊತ್ತಾಯಿತು. ಆಮೇಲೆ ಮತ್ತೆ ಆಲೋಚನೆ ಶುರುವಾಯಿತು. ಏನು ಮಾಡುವುದು ಈಗ ಎಂದು. ಒಂದು ಅಧ್ಯಾದೇಶವನ್ನು ಹೊರಡಿಸೋಣ ಎಂದು ಆಲೋಚನೆ ಇಟ್ಟುಕೊಂಡು ರಾಜ್ಯಪಾಲರನ್ನು ಭೇಟಿ ಮಾಡಿದರು. ಶಾಸನ ಸಭೆ ಇನ್ನೂ ಅಧಿವೇಶನದಲ್ಲಿದೆ, ಆದುದರಿಂದ ಅಧ್ಯಾದೇಶವನ್ನು ಹೊರಡಿಸು ವುದಕ್ಕೆ ಆಗುವುದಿಲ್ಲ ಎಂದು ಗೊತ್ತಾಯಿತು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ ನನ್ನದು ಒಂದು ಖಾಸಗಿ ನಿರ್ಣಯ ಇದೆ. ಅದು ಇವತ್ತು ಬಂದಿದೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ. ಅದಕ್ಕೆ ಎರಡೂವರೆ ಗಂಟೆ ಕಾಲಾವಕಾಶ ಇದೆ.

ಛೇರ್ಮನ್.—ಅವರದ್ದು ಮುಗಿದ ಕೂಡಲೇ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್.—ಅದಕ್ಕೆ ಎರಡೂವರೆ ಗಂಟೆ ಕಾಲಾವಕಾಶ ಇದೆ. ಈಗಾಗಲೇ ೪ ಗಂಟೆಯಾಗುತ್ತಿದೆ.

ಛೇರ್ಮನ್.—ಅವರದು ಮುಗಿದ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್.—ಕೊನೆಗೆ ೫ ಗಂಟೆಗೆ ಎದ್ದು ಹೋದರೆ ಆ ನಿರ್ಣಯ ಸತ್ತು ಹೋಗುತ್ತದೆ, ಮತ್ತೆ ಅದನ್ನು ಬದುಕಿಸಬೇಕಾದರೆ ಮತ್ತೆ ೫ ವರ್ಷ ಬಿಟ್ಟುಕೊಂಡು ನಾವು ಇಲ್ಲಿ ಬರಬೇಕು.

ಛೇರ್ಮನ್.—ಹಾಗೆ ಏನೂ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅದಕ್ಕೆ ಎರಡೂವರೆ ಗಂಟೆ ಕಾಲಾವಕಾಶ ಇದೆ. ಈಗ ೪ ಗಂಟೆಯಾಯಿತು.

ಛೇರ್ಮನ್.—ಅವರದ್ದು ಮುಗಿಯಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ............

ಶ್ರೀ ವಾಟಾಳ್ ನಾಗರಾಜ್.—ಒಂದು ನಿಮಿಷ ತಮ್ಮ ಮಧ್ಯೆ ಬರಬೇಕು ಎಂಬ ಉದ್ದೇಶ ನನಗೆ ಇಲ್ಲ. ಅದಕ್ಕೆ ಎರಡೂವರೆ ಗಂಟೆ ಕಾಲಾವಕಾಶ ಕೊಟ್ಟಿರುವುದು. ಈಗ ೪ ಗಂಟೆಯಾಯಿತು. ತಾವು ಏಳೂವರೆ, ಎಂಟು ಗಂಟೆವರೆಗೆ ಕುಳಿತುಕೊಳ್ಳುತ್ತೇವೆ ಎಂದು ತೀರ್ಮಾನ ಮಾಡುವುದಾದರೆ ನಮ್ಮ ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ತಾವು ಅವಕಾಶ ಕೊಡಬಹುದು. ಅದಕೆ ಎರಡೂವರೆ ಗಂಟೆ ಕಾಲಾವಕಾಶ ಇದೆ. ಕೊನೆಯಲ್ಲಿ ಏಳುವ ಟೈಮಿನಲ್ಲಿ ಅವಕಾಶ ಕೊಟ್ಟಿದ್ದೇವೆಂದ್ ಹೇಳಿ ಅದರ ಕಥೆ ಮುಗಿಸುವುದು.ಬೇಡ ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಛೇರ್ಮನ್.—ಹಾಗೆ ಏನೂ ಆಗುವುದಿಲ್ಲ.

SRI M. V. VENKATAPPA.—Under residuary powers of the Chair, the matter can be postponed to a later date.

ಶ್ರೀ ವಾಟಾಳ್ ನಾಗರಾಜ್.—ಇದು ಗಹನವಾದ ವಿಚಾರ. ಆದ್ದರಿಂದ ನಾನು ಶುರು ಮಾಡಿದ ಮೇಲೆ ಮತ್ತೆ ಇದನ್ನು ತೆಗೆದುಕೊಳ್ಳಬಹುದು.

ಛೇರ್ಮನ್.—ಅವರದ್ದು ಮುಗಿಯಲಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಚುನಾವಣೆ ರದ್ದು ಮಾಡಿದ್ದೇವೆಂದು ಹೇಳಿ, ಆಮೇಲೆ ಆಲೋಚನೆ ಶುರು ಮಾಡಿದರು. ರದ್ದು ಮಾಡುವುದಕ್ಕೆ ಅಧಿಕಾರ ಇಲ್ಲ ಎಂದು ಗೊತ್ತಾದ ಮೇಲೆ ರಾಜ್ಯಪಾಲರನ್ನು ಬಳಸಿಕೊಂಡು, ಅಧ್ಯಾದೇಶವನ್ನು ಹೊರಡಿಸತಕ್ಕ ಆಲೋಚನೆ ಆಗ ಶುರುವಾಯಿತು ಶಾಸನಸಭೆ ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ತಾಂತ್ರಿಕವಾಗಿ ಆರ್ಡಿನೆನ್ಸ್ ಹೊರಡಿಸುವುದಕ್ಕೆ ಆಗುವುದಿಲ್ಲ ಎಂದು ಗೊತ್ತಾದ ಮೇಲೆ ಫೆಬ್ರವರಿ ೧೬ನೇ ತಾರೀಖು ಮತ್ತೆ ಶಾಸನ ಸಭೆಯನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳಿ ಅದಕ್ಕೆ ಬೇಕಾಗಿರತಕ್ಕ ಆದೇಶವನ್ನು ಹೊರಡಿಸಿದರು. ಮೂರು ದಿವಸ ಕಳೆದಮೇಲೆ ಚುನಾವಣೆ ರದ್ದಾಗಿಲ್ಲ, ಮುಂದೆ ಹಾಕಿದ್ದೇವೆಂದು ಹೇಳಿದರು. ಮತ್ತೆ ಆಲೋಚನೆ ಶುರುವಾಯಿತು. ಮತ್ತೆ ಯಾವಾಗ ಚುನಾವಣೆ ಮಾಡುವುದು ಎಂಬ ಆಲೋಚನೆ ಶುರು ಆಯಿತು. ತಾರೀಖಿನ ಬಗ್ಗೆಯಂತೂ ಶಾಸನಸಭೆಯಲ್ಲಿ ೨೯ ಅಂತ ಹೇಳಿದರು. ಅದಕ್ಕೆ ಮೊದಲು ಏಪ್ರಿಲ್ ೨೨ ಎಂದು ನಿರ್ಣಯ ಆಗಿದ್ದು ಪತ್ರಿಕೆಗಳಲ್ಲಿ ಬಂತು. ಇದಾದ ಮೇಲೆ ಮುಸಲ್ಮಾನ್ ಬಾಂಧವರಿಗೆ ಹಬ್ಬ ಇದೆ ಎಂದು ಅದು ೨೯ಕ್ಕೆ ಮುಂದುವರೆಯಿತು. ಇದಾದಮೇಲೆ ಬಸವಜಯಂತಿ ಇದೆ, ಅದಕ್ಕೆ ಮತ್ತೆ ಮುಂದಕ್ಕೆ ಹಾಕಿ ಎಂದು ಕೇಳುತ್ತಿದ್ದಾರೆ ಮಂತ್ರಿಮಂಡಲದಲ್ಲಿ ಇಂಥ ವಿಚಾರಗಳನ್ನು ಚರ್ಚೆ ಮಾಡದೆ ಹೇಳಿಕೆ ಕೊಡುವುದು ಸರಿಯೇ ? ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ, ಅಜೀಜ್ ಸೇಟ್‌ರವರಿಗೆ ರಂಜಾನ್ ಯಾವತ್ತು ಎನ್ನುವುದು ಗೊತ್ತಿರಲಿಲ್ಲವೆ. ? ಇಂಥ ದಿವಸ ಹಬ್ಬ ಇದೆ. ಇದರಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆಂದು ಸಾರ್ವಜನಿಕರಿಗೆ ಹೇಳಬೇಕು. ಮಂತ್ರಿಮಂಡಲ ಏನು ಕೆಲಸ ಮಾಡುತ್ತದೆ ? ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ನೇಮಕ ಮಾಡುತ್ತೇವೆಂದು ಹೇಳಿದರು. ಫೆಬ್ರವರಿ ೨೬ನೇ ತಾರೀಖಿಗೆ ಅವಧಿ ಮುಗಿದ ಕಾರಣ ನೀವು ಮಾಡುವುದನ್ನು ಬೇಡ ಎಂದು ನಾವು ಹೇಳುವುದಿಲ್ಲ. ಆದರೆ ಹಲ್ದಂಕರ್‌ರವರನ್ನು ಡಿ.ಜಿ.ಪಿ. ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಮುಖ್ಯಮಂತ್ರಿಗಳು ಹೇಳಿದ ಮೇಲೆ ಆಲೋಚನೆ ಶುರುವಾಯಿತು. ಆಲೋಚನೆ ಮಾಡುವುದಕ್ಕೆ ಶುರುವಾದ ಮೇಲೆ ಅವರು ಅಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರನ್ನು ಅಲ್ಲಿಂದ ಬಿಡಿಸಿ ಕರೆದುಕೊಂಡು ಬರುವುದು ಹೇಗೆ ? ನಂತರ ಅದು ಆಗಲಿಲ್ಲ. ಮತ್ತೆ ಇಲ್ಲಿರತಕ್ಕ ಅಧಿಕಾರಿಗಳನ್ನು ನೇಮಕ ಮಾಡಿದರು. ಇದರ ಪರಿಣಾಮ ಏನು ಎನ್ನುವುದನ್ನು ಆಲೋಚನೆ ಮಾಡದೆ ಇಂಥ ದೊಡ್ಡ ಹುದ್ದೆಗಳ ಬಗ್ಗೆ ಪ್ರಸಿದ್ಧಿ ಮಾಡುವುದರ ಪರಿಣಾಮ ಆಡಳಿತದ ಮೇಲೆ ಏನಾಗುತ್ತದೆ ? ಆದ್ದರಿಂದ ಆಲೋಚನೆ ಮಾಡಿ ತೀರ್ಮಾನ ಮಾಡಿ. ನಂತರ ಮಂತ್ರಿಮಂಡಲದ ವಿಸ್ತರಣೆ ವಿಚಾರ ಹೇಳಿದರು ಇದು ಅವರಿಗೆ ಸಂಬಂಧಪಟ್ಟ ವಿಚಾರ. ಪತ್ರಿಕೆಗಳಲ್ಲಿ ಹೇಳಿದ್ದಾರೆ. ಇದು ಸಾರ್ವಜನಿಕರಿಗೆ ತಿಳಿಯುತ್ತೆ. 'ಈ ಅಧಿವೇಶನ ಸೇರುವುದಕ್ಕೆ ಮುಂಚೆ ಮಂತ್ರಿಮಂಡಲ ವಿಸ್ತರಣೆ ಮಾಡುತ್ತೇವೆ. ಆಮೇಲೆ ಮತ್ತೆ ಆಲೋಚನೆ ಮಾಡಿದರು, ಈಗ ವಿಸ್ತರಣೆ ಮಾಡಿದರೆ ರಾಜ್ಯಸಭಾ ಚುನಾವಣೆ ಇದೆ. ಇದರಿಂದ ತೊಂದರೆ ಆಗಬಹುದು, 'ತಕ್ಷಣ ಬಿರುಕು ಉಂಟಾಗಬಹುದು, ಇದರಿಂದ ತನ್ನ ನಾಯಕತ್ವಕ್ಕೆ ಧಕ್ಕೆ ಆಗಬಹುದೆಂಬ ಬಗ್ಗೆ ಆಲೋಚನೆ ಶುರುವಾಯಿತು. ಮರು ಆಲೋಚನೆ ಮಾಡಿದ ಮೇಲೆ ಹೊರಗಡೆ ಬಂದು ಹೇಳಿದರು. ಏನೆಂದರೆ ಮಂತ್ರಿಮಂಡಲವನ್ನು ರಾಜ್ಯಸಭೆ ಚುನಾವಣೆಯಾದ ಮೇಲೆ ಮಾಡುತ್ತೇವೆ ನಮ್ಮ ಹೈಕಮಾಂಡ್ ರಾಷ್ಟ್ರೀಯ ಸಮಸ್ಯೆಗಳಲ್ಲಿ ಮುಳುಗಿಹೋಗಿದೆ. ರಾಷ್ಟ್ರೀಯ ಸಮಸ್ಯೆಗಳನ್ನು ಹಚ್ಚಿಕೊಳ್ಳಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಹೇಳುವುದಕ್ಕೆ ಮುಂಚೆ ಏತಕ್ಕೆ ಆಲೋಚನೆ ಮಾಡುವುದಿಲ್ಲ. ಹೇಳಿದ ಮೇಲೆ ಏಕೆ ಆಲೋಚನೆ ಮಾಡುತ್ತೀರಿ ? ಈಗ ರಾಜ್ಯ ಸಭೆ ಚುನಾವಣೆ ಆಯಿತು, ಮುಂದೆ ಯಾವಾಗ ಮಂತ್ರಿಮಂಡಲ ವಿಸ್ತರಣೆ ಮಾಡುತ್ತೀರಿ ? ಚುನಾವಣೆಯಾದ ಮೇಲೆ ಶಾಸನ ಸಭೆ ಸೇರುವುದಕ್ಕೆ ಮುಂಚೆ ಯಾವುದಾದರೂ ನಿರ್ದಿಷ್ಟವಾದ ನಿಖರವಾದ ತಾರೀಖನ್ನು ಹೇಳಿ. ಹೇಳಿಬಿಟ್ಟು ಆಲೋಚನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಡಿ.

೪-೦೦ ಪಿ. ಎಂ.

ಮತ್ತೊಂದು ಮಾತನ್ನು ಹೇಳಿದರು ಇಲ್ಲಿ ಅಭಿಯಂತರುಗಳು ಇದ್ದಾರೆ. ಇವರಿಗೆ ಸಾಕಷ್ಟು ಅಧಿಕಾರಗಳು ಇಲ್ಲ ಇವರಿಗೆ ಮ್ಯಾಜಿಸ್ಟ್ರೇರಿಯಲ್ ಪವರ್ ಇಲ್ಲ. ವಿಶೇಷವಾಗಿ ಇವರು ನೀರಾವರಿಯಲ್ಲಿ ಕೆಲಸ ಮಾಡುವುದರಿಂದ ಇವರಿಗೆ ಮ್ಯಾಜಿಸ್ಟ್ರೇರಿಯಲ್ ಕೊಡಬೇಕೆಂದು ನೀರಾವರಿ ಮಂತ್ರಿಗಳು ಅನೌನ್ಸ್ ಮಾಡಿದ್ದರು ಹೇಳುವುದು ಹೇಳಿದ ನಂತರ ಮತ್ತೆ ಆಲೋಚನೆ ಶುರುವಾಯಿತು. ೨೪ ಗಂಟೆಯೊಳಗೆ ಮ್ಯಾಜಿಸ್ಟ್ರೇರಿಯಲ್ ಪವರ್ ಕೊಡುವುದಕ್ಕೆ ತಮಗೆ ಹಕ್ಕಿಲ್ಲವೆಂದು ಗೊತ್ತಾಯಿತು. ೨೪ ಗಂಟೆಯೊಳಗೆ ಅದನ್ನು ವಾಪಸ್ಸು ತೆಗೆದುಕೊಂಡರು. ಮತ್ತೆ ೧೩ ಸಲಹಾ ಸಮಿತಿಗಳನ್ನು ನೇಮಕ ಮಾಡಬೇಕೆಂದು ಪತ್ರಿಕೆಗಳಲ್ಲಿ ಬಂತು ಆ ಪಟ್ಟಿ ಪ್ರಕಟವಾಗುವುದಕ್ಕೆ ಮುಂಚೆ, ಗೆಜೆಟ್ ಆಗುವುದಕ್ಕೆ ಮುಂಚೆ ಸರ್ಕಾರದ ಗಮನಕ್ಕೆ ತಂದು ನಂತರ ಪತ್ರಿಕೆಗಳಲ್ಲಿ ಬರಬೇಕು. ಆದರೆ ಪತ್ರಿಕೆ

ಯಲ್ಲಿ ಮೊದಲು ಬಂತು. ಆದರೆ ಪತ್ರಿಕೆಯಲ್ಲಿ ಬಂದ ೨ ಗಂಟೆಯೊಳಗೆ ಇದು ನಾವು ಮಾಡಿದ್ದಲ್ಲ, ಹಿಂದೆ ರಾಜ್ಯಪಾಲರ ಸರ್ಕಾರವಿದ್ದಾಗ ಮಾಡಿದ್ದು ಆದ್ದರಿಂದ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದರು ಪತ್ರಿಕೆಗಳಲ್ಲಿ ಬಂದಮೇಲೆ ಇವರು ಆಲೋಚನೆಯನ್ನು ಶುರುಮಾಡಿದರು. ಹೀಗೆ ಸಾರ್ವಜನಿಕರು ಇವರಿಗೆ ಹೇಳಿದ ಮೇಲೆ ಎಚ್ಚರಿಕೆ ಆಗುತ್ತದೆ ಇದು ಇಷ್ಟಕ್ಕೆ ನಿಲ್ಲಲಿಲ್ಲ ಈ ಪಟ್ಟಿ ಬಹಳ ದೀರ್ಘವಾದ ಪಟ್ಟಿ ಹಿಂದಿನ ಶಾಸನಸಭೆ ಮುಗಿಯುವ ದಿವಸ ರೈತರ ಸಾಲ ವಸೂಲಿ ಮುಂದಕ್ಕೆ ಹಾಕಿದ್ದೇವೆಂದು ಹೇಳಿದರು ಆಮೇಲೆ ನಬಾರ್ಡ್‌ನವರು ಏನು ಮಾಡುತ್ತಾರೋ ಕೇಂದ್ರ ಸರ್ಕಾರದವರು ಏನು ಮಾಡುತ್ತಾರೋ ಎಂಬ ಆಲೋಚನೆ ಶುರುವಾಯಿತು ನಿಮ್ಮ ನಿಲುವು ಏನಿದೆ ಎಂದು ಕೇಳಿದಾಗ ಸಧ್ಯಕ್ಕೆ ಮುಂದೂಡಿದ್ದೇವೆಂದು ಹೇಳಿದ್ದರು ಒಂದು ವಾರದಲ್ಲಿ ಮತ್ತೆ ಆಲೋಚನೆ ನಡೆಸಿ. ಮತ್ತೆ ವಸೂಲಾತಿ ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ ಸರ್ಕಾರಿ ನೌಕರರ ಮುಷ್ಕರ ೮ನೇ ತಾರೀಖು ಪ್ರಾರಂಭವೆಂದು ನೋಟೀಸ್ ಕೊಡುತ್ತಾರೆ ಕ್ರೊನಲಾಜಿಕಲ್ ಆರ್ಡರ್ ಹೇಳುತ್ತದೆ ಇವರು ಒಂದು ಸರ್ಕಾರ ನಡೆಸುವುದಕ್ಕೆ ಕೆಲವು ನೀತಿ ನಿಯಮಗಳು ಇರಬೇಕು ಸಮರ್ಥವಾದಂಥ ಮಂತ್ರಿ ಮಂಡಲದಲ್ಲಿ ಈ ಬಗ್ಗೆ ಚರ್ಚೆ ಮಾಡಿ ರಾಜ್ಯಕ್ಕೆ ಇಂತಹ ವಿಚಾರಗಳ ನಿರ್ಣಯದ ಮೇಲೆ ಆಗತಕ್ಕ ಪರಿಣಾಮಗಳೇನು ಪ್ರತಿಕೂಲಗಳೇನು ಎಂಬುದನ್ನು ಆಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳತಕ್ಕ ಸ್ವಭಾವ ಇವರಿಗೆ ಇಲ್ಲ ನಾನು ಮುಷ್ಕರ ಹೇಗೆ ನಡೆಯಿತೆಂದು ವಿವರವಾಗಿ ಹೇಳುತ್ತೇನೆ. ಹೀಗೆ ಹಲವು ಹತ್ತು ವಿಚಾರಗಳಲ್ಲಿ ಈ ಸರ್ಕಾರ ಆಲೋಚನೆ ಮಾಡದೆ ತೀರ್ಮಾನ ತೆಗೆದುಕೊಳ್ಳತಕ್ಕ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಹೀಗೆ ಏಕೆ ಆಗುತ್ತದೆಂದು ನನ್ನ ಮನಸ್ಸಿಗೆ ಅನ್ನಿಸುವುದೇನೆಂದರೆ. ಬಹಳ ಮುಖ್ಯವಾಗಿ ಇಂತಹ ಒಂದು ಸರ್ಕಾರ ಕ್ಯಾಜ್ಯುಯಲ್ ವೇ ನಲ್ಲಿ ಏತಕ್ಕೆ ಹೋಗುತ್ತದೆ ಅಂದರೆ ಸರ್ಕಾರ ಬಹುಶಃ ನಿನ್ನೆ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ೧೭೮ ಜನರ ಸಂಖ್ಯೆ ಈ ಸಂಖ್ಯೆಗೆ ರಾಜ್ಯಾಂಗದ ವಿಧಿ ವಿಧಾನಗಳನ್ನು ಮೀರಿ ನಡೆದು ಕೊಳ್ಳುವ ಅಧಿಕಾರ ಇಲ್ಲ. ನಾವು ನಿರ್ಮಿಸಿದಂತಹ ಶಾಸನಗಳ ವ್ಯಾಪ್ತಿಯೊಳಗೆ ನಿಯಮಗಳಿಗೆ ಒಳಪಟ್ಟು ಕೆಲಸ ಮಾಡಬೇಕಂಥ ಮತ್ತು ನಾವೇ ನಿರ್ಮಿಸಿರುವ ಕೆಲವು ಚೌಕಟ್ಟಿನೊಳಗೆ ಕೆಲಸ ಮಾಡತಕ್ಕಂಥ ಒಂದು ಪದ್ಧತಿಯ ಹೊರಗಡೆ ಹೋಗಿ ಕೆಲಸ ಮಾಡುವಂತಹ ಅಧಿಕಾರ ಈ ಸರ್ಕಾರಕ್ಕೆ ಬರುವುದಿಲ್ಲ. ಆದ್ದರಿಂದ ನಿಮಗೆ ಸಂಖ್ಯೆ ಇದೆ ಎಂದು ಹೇಳಿ ಏನಕೇನ ಪ್ರಕಾರೇಣ ಈ ನಿರ್ಣಯವನ್ನು ಮಾಡಬೇಡಿ ಈ ಮಂತ್ರಿಮಂಡಲ ಮಾಡತಕ್ಕಂಥ ಪ್ರತಿಯೊಂದು ನಿರ್ಣಯ ಇಡೀ ಕನ್ನಡದ ೪ ಕೋಟಿ ಜನರ ಮೇಲೆ ಪರಿಣಾಮ ಬೀಳುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಮತ್ತೆ ಸ್ಥಳೀಯ ಸಂಸ್ಥೆಗಳಿಗೆ ಮತ್ತು ನಗರಸಭೆಗಳಿಗೆ ಚುನಾವಣೆ ಮಾಡುತ್ತೇವೆಂದು ಘೋಷಣೆ ಮಾಡಿದ್ದು ೨೫-೨-೧೯೯೦ಕ್ಕೆ ಚುನಾವಣೆ ನಡೆಯಬೇಕಾದ ತಾರೀಖು ೨೫-೨-೧೯೯೦ಕ್ಕೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾದುದು ಒಂದನೇ ತಾರೀಖು ನಾವು ಪತ್ರ ಹಾಕುವುದರಿಂದ ಪ್ರಾರಂಭವಾಯಿತು. ಎರಡನೆಯ ತಾರೀಖು ಸ್ಕ್ರೂಟಿನಿ. ೫ನೇ ತಾರೀಖು ಲಾಸ್ಟ್ ಡೇಟ್ ಫಾರ್ ವಿತ್‌ಡ್ರಾಯಲ್ ಇವೆಲ್ಲಾ ಮುಗಿದಿತ್ತು. ಸರ್ಕಾರಿ ನೌಕರರ ಮುಷ್ಕರ ೧೫ನೇ ತಾರೀಖು ಪ್ರಾರಂಭವಾಗುತ್ತದೆ ಎನ್ನತಕ್ಕದ್ದು ಸರ್ಕಾರಕ್ಕೂ ತಿಳಿದಿತ್ತು, ಏಕೆಂದರೆ ಅವರು ೮ನೆಯ ತಾರೀಖು ಕೊನೆಯ ಕಾಲ್ ಕೊಟ್ಟರು. ೯ನೆಯ ತಾರೀಖು ಸರ್ಕಾರ ನೀವು ಮುಷ್ಕರಕ್ಕೆ ಹೋಗಬೇಡಿ ಎನ್ನತಕ್ಕಂಥ ಒಂದು ಅಪೀಲು ೧೨ನೆಯ ತಾರೀಖಿಗೆ ಇಲ್ಲ ನಾವು ಮುಷ್ಕರ ಮಾಡುವುದೇ ಸಿದ್ಧ ಎಂದು ಸರ್ಕಾರಿ ನೌಕರರು ಹೇಳಿದರು ೧೫ನೇ ತಾರೀಖು ಸರ್ಕಾರ ಮತ್ತು ಸರ್ಕಾರಿ ನೌಕರರು ಕುಳಿತು ಮಾತುಕತೆ ಮಾಡಿ ಒಂದು ಏನಾದರೂ ಒಂದು ನಿರ್ಣಯಕ್ಕೆ ಬರಬಹುದು ಎಂದು ಹೇಳಿ ನಾವೆಲ್ಲಾ ಕಾದಿದ್ದೆವು ಸಾಯಂಕಾಲ ನಿರ್ಣಯ ಏನು ಬಂತು ಈ ಒಂದು ಸ್ಟ್ರೈಕ್ ಇಲ್ಲೀಗಲ್ ಕಾನೂನುಬಾಹಿರ ಎಂದು ಸರ್ಕಾರದವರು ಘೋಷಣೆ ಮಾಡಿದರು. ಪರವಾಯಿಲ್ಲ, ಕಾನೂನುಬಾಹಿರ ಎಂದು ಘೋಷಣೆ ಮಾಡಿದ್ದಾರೆ. ಆದ್ದರಿಂದ ಚುನಾವಣೆ ಪ್ರಕ್ರಿಯೆ ನಡೆಯುತ್ತದೆ. ನಡೆಸಿಕೊಂಡು ಹೋಗುತ್ತಾರೆಂದು ನಮ್ಮ ವಿಶ್ವಾಸವಾಗಿತ್ತು ೧೫ನೇ ತಾರೀಖಿಗೆ ಮುಷ್ಕರ ಪ್ರಾರಂಭವಾಯಿತು. ಚುನಾವಣಾ ಕಮಿಷನರ್‌ರವರು ಈ ಚುನಾವಣೆ ಮಾಡಬೇಕು. ಚುನಾವಣೆ ಮಾಡತಕ್ಕದ್ದು ಸರ್ಕಾರ ಅಲ್ಲ, ತಾವು ಎರಡೂ ಸೆಕ್ಷನ್ ನೋಡಿ. ಕರ್ನಾಟಕ ಮುನಿಸಿಪಲ್ ಅಂಡ್ ಕಾರ್ಪೊರೇಷನ್ ಆಕ್ಟ್‌ಗೆ ಸೆಕ್ಷನ್ ೫೫ಕ್ಕೆ ತಿದ್ದುಪಡಿ ತಂದರು, 'ತಿದ್ದುಪಡಿ ಏತಕ್ಕೆ ತಂದರು'. ೧೫ನೇ ತಾರೀಖು ಸರ್ಕಾರಿ ನೌಕರರು ಮುಷ್ಕರ ಹೂಡಿದ ಮೇಲೆ ಆ ತಕ್ಷಣದ ಪ್ರತಿಕ್ರಿಯೆ ಮುಖ್ಯ ಮಂತ್ರಿಗಳದ್ದು ಸರ್ಕಾರಿ ನೌಕರರು ಮುಷ್ಕರ ಹೂಡಿದ್ದಾರೆ, ಆದ್ದರಿಂದ, ಚುನಾವಣೆಯನ್ನು ಮುಂದೂಡಿದ್ದೇನೆ ಅಂತ ಅಲ್ಲ, ಚುನಾವಣೆಯನ್ನು ರದ್ದು ಮಾಡಿದ್ದೇನೆ ಅಂತ ಹೇಳಿದರು. ಇದನ್ನು ಹೇಳಲಿಕ್ಕೆ ಯಾರು ಇವರಿಗೆ ಕೊಟ್ಟರು ಅಧಿಕಾರ. ಯಾವ ಶಾಸನದಲ್ಲಿ ಇವರಿಗೆ ಅಧಿಕಾರ ಇದೆ, ಸರ್ಕಾರ ಅಂದರೆ. ಮುಖ್ಯಮಂತ್ರಿ ಅಂದರೆ, ಸಂಖ್ಯೆ ೧೭೮ ಇದ್ದಕೂಡಲೇ ತಾವು ಹೇಳಿದ್ದೇ ಶಾಸನವೇ, ಹಾಗಾದರೆ ಶಾಸನಸಭೆಗಳು ಏತಕ್ಕೆ

ಇರಬೇಕು. ಶಾಸನಗಳು ಏತಕ್ಕೆ ಇರಬೇಕು. ಇದನ್ನು ಯಾರೋ ಹೇಳಿದ್ದು ಅಲ್ಲ, ಮಾನ್ಯ ಮುಖ್ಯ ಮಂತ್ರಿಗಳು, ಸಂಬಂಧಪಟ್ಟ ಇಲಾಖಾ ಮಂತ್ರಿಗಳು ರದ್ದು ಮಾಡಿದ್ದೇವೆಂದು ಹೇಳಿದ್ದಾರೆ. ನಾವು ಗಳೆಲ್ಲಾ ಚುನಾವಣೆಯಾಗುತ್ತದೆಂದು ಹೇಳಿ,ನಗರಗಳಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಮಾತನಾಡುತ್ತಿದ್ದೇವೆ. ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ಇಡೀ ಒಂದು ರಾಜ್ಯದ ಆಗುಹೋಗುಗಳನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡತಕ್ಕಂಥ ಕಾಲದಲ್ಲಿ ಕನಿಷ್ಟ ಅವರ ಸಲುವಾಗಿ ಅವರ ಒಳಿತಿನ ಸಲುವಾಗಿ ಸರ್ಕಾರವನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಸಲುವಾಗಿ ಕನಿಷ್ಟಪಕ್ಷ ಪ್ರತಿಪಕ್ಷವನ್ನು ಕರೆದು ಇಂತಹ ಪರಿಸ್ಥಿತಿ ಉದ್ಭವವಾಗಿದೆ, ಏನು ಮಾಡೋಣ ಎಂದು ಕೇಳುವುದು ಬೇಡವೆ. ಇದೇನು ನಿಮ್ಮ ಆಸ್ತಿಯೋ ಚುನಾವಣೆ ಬೇಕಾದಾಗ ಹೇಳುವುದು. ಬೇಕಿಲ್ಲದಾಗ ಚುನಾವಣೆ ಮುಂದಕ್ಕೆ ಹಾಕಿದ್ದೇವೆ ಎಂದು ಹೇಳುವುದು ಇದಕ್ಕೆ ಇವರಿಗೆ ಯಾವ ಅಧಿಕಾರ ಇತ್ತು. ಅವರು ಹೇಳಿದ್ದರ ಪರಿಣಾಮವಾಗಿ ಚುನಾವಣೆ ಸ್ಥಗಿತವಾಗುತ್ತದೆ. ಇನ್ನು ಎರಡನೆಯ ಪ್ರಶ್ನೆ ಕೇಳುತ್ತೇನೆ. ಮುಷ್ಕರ ಹೂಡತಕ್ಕ ನೌಕರರ ಜೊತೆಗೆ ಅವರ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವುದರ ಜೊತೆಗೆ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ. ತೀರಾ ಇತ್ತೀಚೆಗೆ, ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ನಡೆಸಿದ ಮುಷ್ಕರದ ವಿಷಾದನೀಯ ಘಟನೆಯನ್ನು ನಾವು ನೋಡಿದೆವು. ಸರ್ಕಾರಿ ನೌಕರರಿಗೆ ನಿಜವಾದ ಕುಂದುಕೊರತೆಗಳಿರಬಹುದಾದರೂ ಅಂದರೆ ಇದೆ ಎನ್ನುವುದನ್ನು ಇಲ್ಲಿ ಒಪ್ಪುತ್ತೀರಿ. ಅಂಥ ಕುಂದು ಕೊರತೆಗಳನ್ನು ರಾಜ್ಯದ ಅಭಿವೃದ್ಧಿ ಕಾರ್ಯತಂತ್ರದ ಸಮಗ್ರ ಚೌಕಟ್ಟಿನೊಳಗೆ ಮಾತ್ರವೇ ಪರಿಹರಿಸಿಕೊಳ್ಳಬಹುದಾಗಿದೆ. ನನ್ನ ಸರ್ಕಾರವು, ತನ್ನ ನೌಕರರ ನಿಜವಾದ ಕುಂದುಕೊರತೆಗಳನ್ನು ಪರಿಶೀಲಿಸಲು ಸಿದ್ಧವಿದೆ. ಇದನ್ನು ಯಾವೊತ್ತು ಹೇಳುತ್ತೀರಿ, ಮಾರ್ಚಿ ೧೫, ೧೯೭೦ರ ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತೀರಿ. ತನ್ನ ನೌಕರರೊಂದಿಗೆ ಯಾವಾಗಲೂ ಹೊಂದಿದ್ದ ಸೌಹಾರ್ದಯುತ ಸಂಬಂಧವು ಇತ್ತೀಚೆಗೆ ಅಹಿತಕರ ಘಟನೆ ನಡೆದಿದ್ದರೂ ಮುಂದುವರಿಯುತ್ತದೆಂಬುದು ನನ್ನ ಸರ್ಕಾರದ ದೃಢನಂಬಿಕೆಯಾಗಿದೆ. ಎಂದು ಹೇಳಿದ್ದೀರಿ ಇಷ್ಟು ದೃಢವಾಗಿ ನಂಬಿದ್ದ ನೀವು ಒಂದು ತಿಂಗಳ ಹಿಂದೆ ಸರ್ಕಾರಿ ನೌಕರರನ್ನು ಸೌಜನ್ಯವಾಗಿ ಕರೆದು ಯಾವ ಬೇಡಿಕೆಯನ್ನು ನೀವು ಒಪ್ಪಬಹುದಾಗಿತ್ತು ಅಂದರೆ, ಯಾವುದಕ್ಕೆ ಆರ್ಥಿಕವಾದಂಥ ಹೊರೆ ಬೀಳುವುದಿಲ್ಲ ಅದನ್ನು ನೋಡಿ ಒಪ್ಪಬಹುದಾಗಿತ್ತು.

೧೦ ರಿಂದ ೫–೩೦ ಗಂಟೆ ಅಥವಾ ೧೧ ರಿಂದ ೫ ಗಂಟೆ ಈ ಅರ್ಧ ಗಂಟೆ ಮುಂಚೆ ಬರುವುದು ಹೋಗುವುದು ಏನು ಇದೆ ಇದಕ್ಕೆ ಏನು ತೊಂದರೆ ಇದೆ? ಇದನ್ನು ಒಪ್ಪಿಕೊಳ್ಳುವುದಕ್ಕೆ ಏನು ತೊಂದರೆ ಇದೆ. ಇಂತಹ ಕೆಲವು ವಿಚಾರವನ್ನು ಚರ್ಚೆ ಮಾಡಿ ಉಳಿದ ವಿಚಾರವನ್ನು ಆಲೋಚನೆ ಮಾಡೋಣ ನಮ್ಮ ಹಣಕಾಸಿನ ಪರಿಸ್ಥಿತಿ ಹೀಗೆ ಇದೆ ಎಂದು ಹೇಳಬಹುದಾಗಿತ್ತು. ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ಮುಂಚೆ ಇದನ್ನು ಹೇಳಬೇಕಾಗಿತ್ತು. This is the constitution obligation of every individual including the government officers so far as the elections of this country is concerned. ಜನತಾಂತ್ರಿಕ ವ್ಯವಸ್ಥೆಯೊಳಗೆ ಚುನಾವಣಾ ಪ್ರಕ್ರಿಯೆಗೆ ಅಡ್ಡಿ ತರತಕ್ಕಂತಹ ಯಾವುದೇ ವ್ಯವಸ್ಥೆಯನ್ನು ನಾವು ರಾಜ್ಯಾಂಗ ಬದ್ಧವಾಗಿ ಒಪ್ಪುವುದಿಲ್ಲ ಶಾಸಕಾಂಗ ಬದ್ಧವಾಗಿ ಒಪ್ಪುವುದಿಲ್ಲ. ಇದನ್ನು ಇವರು ವಿರೋಧ ಮಾಡುತ್ತಾರೆ ಎನ್ನತಕ್ಕಂತಹ ಭಾವನೆಯನ್ನು ಜನರಿಗೆ ಕೊಟ್ಟು. ಎಲ್ಲಿ ಒಟ್ಟಾರೆ ಚರ್ಚೆ ಮಾಡಿರತಕ್ಕಂತಹ ಯಾವುದೇ ಭಾಗವನ್ನು ತೆಗೆದು ನೋಡಿದರೆ ಸರ್ಕಾರಿ ನೌಕರರಿಗೆ ಚುನಾವಣೆ ಬಂದಿದೆ, ಅದನ್ನು ನಡೆಸಿಕೊಡಿ, ಆ ಮೇಲೆ ಚರ್ಚೆ ಮಾಡುತ್ತೇವೆಂದು ಸರಕಾರಿ ನೌಕರರಿಗೆ ಹೇಳಿದಂತಹ ಒಂದು ವಾಕ್ಯ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಪತ್ರಿಕಾ ಹೇಳಿಕೆಗಳನ್ನು ನಾನು ನೋಡಿದ್ದೇನೆ ಚರ್ಚೆಯ ಸ್ವರೂಪಗಳನ್ನು ನೋಡಿದ್ದೇನೆ. ಈ ಬಗ್ಗೆ ದಿನಾಂಕ ೯–೨–೧೯೭೦ರ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಏನು ಬಂದಿದೆ ಎಂಬುದನ್ನು ಓದುತ್ತೇನೆ.

> "Popular Government in place now is not obliged to implement all the decisions taken by the previous government"

ಇದು ನಿಮ್ಮ ನಿಲುವು ಚುನಾವಣೆ ಮುಂದಕ್ಕೆ ಹೋಗುವುದಕ್ಕೆ ಅಧಿಕಾರಿಗಳ ಮುಷ್ಕರದಿಂದ ತೊಂದರೆ ಬಂದಿದೆ ಎಂದು ಅಲ್ಲ ಹಿಂದಿನ ಸರಕಾರ ತೆಗೆದುಕೊಂಡಂತಹ ನಿರ್ಣಯಗಳನ್ನು ಜಾರಿಯಲ್ಲಿ ಕೊಡುವುದಕ್ಕೆ ನಾವು ಬಾಧ್ಯರಲ್ಲ ಅನ್ನುವ ಮಾತನ್ನು ಹೇಳಿದ್ದೀರಿ. ಆದರೆ ಹಿಂದಿನ ಸರಕಾರವೆಂದರೆ ಯಾವ ಸರಕಾರ ? ರಾಜ್ಯಪಾಲರ ಅವಧಿಯಲ್ಲಿಯೋ ಅಥವಾ ಅದರ ಹಿಂದೆಯೋ ಅದನ್ನು ಹೇಳುವುದಿಲ್ಲ. ರಾಜ್ಯಪಾಲರ ಆಡಳಿತಾವಧಿಯಲ್ಲಿ ರಾಜ್ಯಪಾಲರು ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸುವುದು ನಿಮಗೆ ಸಾಧ್ಯವಿಲ್ಲದಿದ್ದರೆ ರಾಜ್ಯಪಾಲರು ತೆಗೆದುಕೊಂಡಂತಹ ನಿರ್ಣಯಕ್ಕೆ

ಮಧ್ಯೆ ನೀವು ಏಕೆ ಪ್ರವೇಶ ಮಾಡಿದಿರಿ, ಈ ಮಧ್ಯ ಪ್ರವೇಶ ಎಲ್ಲಿಯವರೆಗೆ ಆಯಿತು ಎಂದರೆ ಕೆ. ಎಸ್. ಆರ್. ಟಿ. ಸಿ. ಬಸ್ ದರ ಏರಿಸುವುದು, ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ ಒಂದು ಡೆಲಿಗೇಷನ್ ಹೋಗುವುದು. ಇದು ತಪ್ಪು ಎನ್ನುವುದು ಆಗ ಅವರು ಅದನ್ನು ವಿತ್‌ಡ್ರಾ ಮಾಡುವುದು. ಇನ್ನು ಕೆಲವು ರೂಟ್‌ಗಳನ್ನು ಬದಲಾವಣೆ ಮಾಡುವುದು; ಆಗ ಇವರು ಹೋಗಿ ಇದು ತಪ್ಪು ಎಂದು ಹೇಳುವುದು, ಅವರು ಆದನ್ನು ವಿತ್‌ಡ್ರಾ ಮಾಡುವುದು ಹೇಗೆ ತಾವು ಆಗ ಏಕೆ ಪಾಲುದಾರರಾದಿರಿ? ಇನ್ನು ಎಕ್ಸೈಸ್ ಸೇಲ್ಸ್ ಬಗ್ಗೆ ಮಾನ್ಯ ರಾಜ್ಯಪಾಲರು ತೀರ್ಮಾನ ಮಾಡುತ್ತಾರೆ, ಎಂ.ಎಸ್.ಐ.ಎಲ್. ಮೂಲಕ ಸೇಲ್ಸ್ ಮಾಡುವುದನ್ನು ನಿಗದಿ ಮಾಡುತ್ತಾರೆಂದು ಹೇಳಿದ್ದಕ್ಕೆ ನೀವು ಒಪ್ಪಿಗೆ ಕೊಟ್ಟಿದ್ದೀರಿ. ಎಂ. ಎಸ್. ಐ. ಎಲ್. ಬಗ್ಗೆ ತೆಗೆದುಕೊಂಡಂತಹ ನಿರ್ಣಯ ಸರಿ ಎಂದು ಹೇಳುತ್ತೀರಿ. ಹೀಗೆ ಒಂದು ನಿರ್ಣಯ ಸರಿಯಾಗಿದ್ದರೆ ಇನ್ನೊಂದು ನಿರ್ಣಯ ಏಕೆ ತಪ್ಪಾಯಿತು. ಅನುಕೂಲಸಿಂಧು ವ್ಯವಸ್ಥೆ ಬಗ್ಗೆ ಹೇಳುವಾಗ ಅನುಕೂಲ ಸಿಂಧು ರಾಜಕಾರಣ ಮಾಡತಕ್ಕಂತಹ ಪ್ರವೃತ್ತಿಗೆ ಒಂದು ಸರಕಾರ ಹೋಗಬಾರದು. ಇಲ್ಲಿ ಹಿಂದಿನ ಸರಕಾರ ಮಾಡಿದಂತಹ ಕಮಿಟ್‌ಮೆಂಟ್ ನಿಮಗೆ ಇಲ್ಲದೇ ಇದ್ದರೆ ಉಳಿದದ್ದನ್ನು ಏಕೆ ಮುಂದುವರಿಸುತ್ತೀರಿ ಅವಷ್ಟನ್ನು ಮುಂದುವರಿಸಿ ಇವಷ್ಟನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಏಕೆ ಹೇಳುತ್ತೀರಿ. ನಾನು ಎಲ್ಲಾ ಕಡೆ ನೋಡಿದ್ದೇನೆ ಇನ್ನೇ ಕಾರಣ ಏನು ಕೊಡುತ್ತಾರೆ ಎಂದರೆ ನಾವು ಈಗ ತಾನೆ ಅಧಿಕಾರಕ್ಕೆ ಬಂದಿದ್ದೇವೆ ನಮಗೆ ಇನ್ನೊಂದಿಷ್ಟು ಸಮಯ ಕೊಡಿ ಎಂದು ಹೇಳುತ್ತಾರೆ. ಮೂಲತಃ ಈ ಸಮಸ್ಯೆಗೆ ಏನು ಕಾರಣ ಎಂದರೆ ಅವರು ಏನು ಕೇಳಿದರು ಎಂದರೆ ನೀವು ನಮ್ಮ ಬಾಕಿ ಬೇಡಿಕೆಗಳನ್ನು ಈಡೇರಿಸುತ್ತೀರೋ ಇಲ್ಲವೋ ಮಂತ್ರಿಗಳ ಬಾಯಿ ಮುಚ್ಚಿಸಿ ನಮಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿದರು. ಅವರು ಸರಕಾರಿ ನೌಕರರ ಬಗ್ಗೆ ಏನು ಬಳಸಿದ್ದಾರೆ ಎಂಬುದನ್ನು ಹೇಳುತ್ತೇನೆ. ಸರಕಾರಿ ನೌಕರರನ್ನು ಅರಬ್ಬಿ ಸಮುದ್ರಕ್ಕೆ ಎಸೆಯಬೇಕು ಇದು ಒಬ್ಬ ಮಂತ್ರಿಗಳದ್ದು ಸರಕಾರಿ ನೌಕರರ ಅದಕ್ಷತೆಯಿಂದ ಈ ರಾಜ್ಯ ಮುಳುಗಿ ಹೋಗುತ್ತಿದೆ ಎಂದು ಒಬ್ಬ ಮಂತ್ರಿಗಳು ಹೇಳುವುದು ಮತ್ತು ಈಗಿರತಕ್ಕಂತಹ ನೌಕರರ ಒಟ್ಟು ಸಂಖ್ಯೆಯಲ್ಲಿ ಎರಡು ಸರಕಾರವನ್ನು ನಡೆಸುವುದಕ್ಕೆ ಸಾಧ್ಯ ಇದೆ ಎಂದು ಮೂರನೇ ಮಂತ್ರಿಗಳು ಹೇಳುವುದು. ಹೀಗೆ ಒಬ್ಬೊಬ್ಬ ಮಂತ್ರಿಗಳು ಒಂದೊಂದು ರೀತಿಯಲ್ಲಿ ಸರಕಾರಿ ನೌಕರರ ಮೇಲೆ ಆಪಾದನೆ ಮಾಡುತ್ತಿದ್ದರೆ, ಈ ಭಾಷೆಯನ್ನಾದರೂ ಅವರು ಬಳಸದಂತೆ ಅವರ ಬಾಯಿಗೆ ಬೀಗ ಹಾಕಿ ಎಂದು ಸರ್ಕಾರಿ ನೌಕರರು ಹೇಳಿದರು ; ಇಷ್ಟನ್ನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆಗ ಸರಕಾರಿ ನೌಕರರು ವಿಧಿಯಿಲ್ಲದೆ ಮುಷ್ಕರಕ್ಕೆ ಹೋದರು. ಆದರೆ ಎಲ್ಲಾ ಒಟ್ಟು ಪ್ರಕ್ರಿಯೆಯೊಳಗೆ ನೀವು ಚುನಾವಣೆಯನ್ನು ನಡೆಸಿಕೊಡುತ್ತೀರೋ ಇಲ್ಲವೋ ಎಂದು ಸರಕಾರಿ ನೌಕರರನ್ನು ಒಂದು ಮಾತು ಕೇಳಲಿಲ್ಲ. ವಿರೋಧ ಪಕ್ಷದವರನ್ನು ಕೇಳುವ ಸೌಜನ್ಯವಂತೂ ಇಲ್ಲವಲ್ಲ ಅದು ಗೊತ್ತಾಗಿದೆ. ತೀರ್ಮಾನ ಮಾಡಿ ನಿಮಗೆ ಸಂಖ್ಯೆ ಇದೆ ತೀರ್ಮಾನ ಏನು ಮಾಡುತ್ತೀರೋ ಮಾಡಿ ಇದು ಎಷ್ಟು ದಿವಸ ಇದು ನಡೆಯುತ್ತದೋ ನೋಡೋಣ. ಆದರೆ ಯಾವ ಸರಕಾರೀ ನೌಕರರು ಈ ಚುನಾವಣೆ ಪ್ರಕ್ರಿಯೆಯನ್ನು ಪೂರ್ಣ ಮಾಡಬೇಕಾಗಿತ್ತೋ ಮತ್ತು ಈ ಜವಾಬ್ದಾರಿಯನ್ನು ಏನು ಅವರು ಹೊತ್ತಿದ್ದರೋ, ಯಾರು ರಾಜ್ಯಾಂಗ ಬದ್ಧವಾಗಿ ಈ ಕಾರ್ಯ ಮಾಡಬೇಕಾಗಿತ್ತೋ ಅಂತಹವರನ್ನು ನೀವು ಕೇಳಿದರೋ? ಕನಿಷ್ಟ ಸಾಂಪ್ರದಾಯಿಕವಾಗಿ ಚುನಾವಣೆ ಮುಗಿಯಲಿ, ಆನಂತರ ನಿಮ್ಮ ಸಮಸ್ಯೆಗಳನ್ನು ಕೂತು ಚರ್ಚೆಮಾಡೋಣ ಅಂತ ಹೇಳಲಿಲ್ಲ, ಆ ರೀತಿ ಕೇಳತಕ್ಕ ಸೌಜನ್ಯತೆ ನಿಮ್ಮಲ್ಲಿಲ್ಲ. ಮೇಲಾಗಿ ಅವರ ಬೇಡಿಕೆಗಳಾದರೂ ಏನು? ಬಹಳ ಸದಸ್ಯರು ಮಾತನಾಡುವವರು ಇರುವುದರಿಂದ ನಾನು ಹೆಚ್ಚು ವಿವರಕ್ಕೆ ಹೋಗುವುದಿಲ್ಲ,

ಸ್ವಾಮಿ, ಅವರು ವಾಲಂಟರಿ ರಿಟೈರ್‌ಮೆಂಟ್‌ನ್ನು ೨೦ ರಿಂದ ೧೫ ವರ್ಷಕ್ಕೆ ಇಳಿಸಬೇಕೆಂದು ಕೇಳಿದ್ದಾರೆ. ನೌಕರರ ನಿವೃತ್ತಿ ವಯಸ್ಸನ್ನು ಇಳಿಸುವುದಕ್ಕೆ ನೀವೇ ಆಲೋಚನೆ ಮಾಡುತ್ತಿದ್ದೀರಿ. ಆದರೆ ಇಲ್ಲಿ ನೌಕರರೇ ವಾಲಂಟರಿ ರಿಟೈರ್‌ಮೆಂಟ್‌ನ್ನು ೧೫ ವರ್ಷಕ್ಕೆ ಇಳಿಸಿ, ನಾವು ಅಷ್ಟಕ್ಕೇ ರಿಟೈರ್ ಆಗುತ್ತೇವೆ ಎಂದರೆ ನಿಮಗೆ ಏನು ಕಷ್ಟ. ಇನ್ನು ಆಫೀಸು ಟೈಮಿಂಗ್ಸ್ ಬೆಳಿಗ್ಗೆ ೧೦.೩೦ ರಿಂದ ಸಂಜೆ ೫.೩೦ರ ವರೆಗೆ ಮಾಡುವುದಕ್ಕೆ ನಿಮಗೆ ಎಷ್ಟು ಖರ್ಚು ಬರುತ್ತದೆ? ಇದರ ಬಗ್ಗೆ ನೀವು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುತ್ತಿಲ್ಲ, ಇಂಥ ಸಣ್ಣ ಸಣ್ಣ ಕೆಲಸಗಳನ್ನು ನೀವು ಮಾಡಿದ್ದಿದ್ದರೆ ರಾಜ್ಯದ ಮೂರನೇ ಒಂದು ಭಾಗದಷ್ಟು ಜನರು ಈ ಒಂದು ಚುನಾವಣೆಯನ್ನು ಎದುರಿಸಿ ಅನಂತರ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡತಕ್ಕವರಿದ್ದರು. ಜನತಾಂತ್ರಿಕ ರಂಗದಲ್ಲಿ ಕೊಟ್ಟಂಥ ಹಕ್ಕನ್ನು, ಅದರ ಕತ್ತನ್ನು ಹಿಸುಕತಕ್ಕ ಪ್ರಯತ್ನವನ್ನು ನೀವು ಮಾಡಿದ್ದೀರಿ. ಯಾವ ಶಾಸನದ ಆಧಾರದ ಮೇಲೆ ನೀವು ಇದನ್ನು ಮಾಡಿದ್ದೀರಿ? ೧೫ನೇ ತಾರೀಖು ನೀವು ಈ ಮಾತನ್ನು ಹೇಳಿದಾಗ ನಿಮಗೆ ಅಧಿಕಾರ ಇರಲಿಲ್ಲ. ೧೬ನೇ ತಾರೀಖು ಅಸೆಂಬ್ಲಿಯನ್ನು ನೀವು ಪ್ರೋರೋಗ್

ಮಾಡುವಾಗ ನಿಮಗೆ ಗೊತ್ತಾಯಿತು. Assembly is in session technically in session. Therefore the Assembly to be prorogued ಆಗ ತಕ್ಷಣ ರಾಜ್ಯಪಾಲರ ಹತ್ತಿರ ಹೋಗಿ ಅಸೆಂಬ್ಲಿಯನ್ನು ಪ್ರೊರೋಗ್ ಮಾಡಿಸಿದಿರಿ you come out with a weapon You bring an amendment regarding "power to make regulations and rules" ಇದಕ್ಕೆ ಒಂದು ತಿದ್ದುಪಡಿ ಮಾಡಿದಿರಿ. ಇದಕ್ಕೆ ತಿದ್ದುಪಡಿಯನ್ನು ಮಾಡುವುದಕ್ಕೆ ಮುಂಚಿತವಾಗಿ ಇಲ್ಲಿ ರಾಜ್ಯಾಂಗದ ಪ್ರಕಾರ ಚುನಾವಣೆಯನ್ನು ಮಾಡತಕ್ಕ ಅಧಿಕಾರ ಯಾರಿಗಿದೆ ಎಂಬುದು ತಮಗೆ ಗೊತ್ತಿದೆ. ನಮ್ಮ ರಾಜ್ಯಾಂಗದ ಪ್ರಕಾರ ಚುನಾವಣೆಯನ್ನು ನಡೆಸತಕ್ಕ ಸಂಪೂರ್ಣ ಜವಾಬ್ದಾರಿಗೋಸ್ಕರ ಒಂದು ವಿಶೇಷವಾದ ವ್ಯವಸ್ಥೆ ಇದೆ, ಇದಕ್ಕಾಗಿ ಚುನಾವಣಾ ಆಯೋಗ ಎಂದು ಪ್ರತ್ಯೇಕವಾಗಿ ಇದೆ. ಚುನಾವಣಾ ಪ್ರಕ್ರಿಯೆ ಪ್ರಾರಂಭವಾದಮೇಲೆ ಯಾವ ಸಂದರ್ಭದಲ್ಲಿ ಇದನ್ನು ಮುಂದೂಡಬೇಕೆಂಬುದನ್ನು ಇಲ್ಲಿ ಹೇಳಿದ್ದಾರೆ, ನಾಮಿನೇಷನ್, ಸ್ಕ್ರೂಟಿನಿ, ವಿತ್‌ಡ್ರಾಯಲ್ ಮುಂತಾದ್ದೆಲ್ಲಾ ಮುಗಿದುಹೋದಮೇಲೆ ಏನು ಮಾಡಬೇಕೆಂದು ಇದರಲ್ಲಿ ಇದೆ. Suspension of the Poll. I quote Rule 55, sub-rule 10.

> "Suspension of the poll. In case of any interruption by riot, violence or any other sufficient reason"

"any other sufficient reason" What was the reason? The reason you pose is, Government employees were on strike. This is the reason. ನೀವು ಈ ಕಾರಣವನ್ನು ಕೊಡಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಸಾರ್ವಜನಿಕವಾಗಿ ಹೇಳಿದ್ದಾರೆ. ಇಂಥ ಕಾಲದಲ್ಲಿ ಚುನಾವಣಾ ಕಮಿಷನರ್‌ರವರು ಚುನಾವಣೆಯನ್ನು ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಬರೆದಿದ್ದಾರೆ. ಆದ್ದರಿಂದ ನಾವು ಚುನಾವಣೆಯನ್ನು ಮುಂದೂಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಹೇಳಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೆ,...

ಶ್ರೀ ಡಿ. ಎ. ಚಿನ್ನಪ್ಪ.—ನೀವು ಹೇಳುವುದರಲ್ಲಿ ಏನೂ ಸತ್ಯವಿಲ್ಲ...

ಶ್ರೀ ಡಿ. ಬಿ. ಚಂದ್ರೇಗೌಡ.—ನೀವು ಸುಮ್ಮನೆ ಕೂತುಕೊಳ್ಳಿ. ನೀವು ಇನ್ನೂ ಪೇಷನ್ಸ್‌ನ್ನು ತೆಗೆದುಕೊಳ್ಳಿ. ನಿಮಗೆ ಏತಕ್ಕೆ ಇಷ್ಟು ಆತುರ.........

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ.—ನೀವು ಹೇಳುವುದು ಸರಿಯಲ್ಲ.

SRI D.B. CHANDREGOWDA.—You are not the authority to decide. Please sit down. Don't question me like that. ನಾನು ಹೇಳುತ್ತಿರುವುದು ಸರಿಯಲ್ಲ ಎಂದು ನೀವು ಹೇಳುವುದಾದರೆ ನನ್ನ ಮೇಲೆ ಪ್ರಿವಿಲೇಜ್ ಮೋಷನ್‌ನ್ನು ತನ್ನಿ But don't question me like that, I will have my say, you have your way. because you are 179

ಛೇರ್ಮನ್.—ನೀವು ಕುಳಿತುಕೊಳ್ಳಿ. ಅವರು ಮಾತನಾಡಿದ ನಂತರ ನೀವು ಮಾತನಾಡಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಚುನಾವಣಾ ಆಯೋಗದವರಿಗೆ ನಾನು ಒಂದು ಪತ್ರವನ್ನು ಬರೆದ ೨೫ನೇ ತಾರೀಖು ನಡೆಯಬೇಕಾಗಿದ್ದ ಚುನಾವಣೆಯನ್ನು ಅವರು ಮುಂದಕ್ಕೆ ಹಾಕಿದ್ದಾರೆ. ಅದನ್ನು ಯಾವ ಶಾಸನದ ಮೇಲೆ ಹಾಕಿದ್ದಾರೆ ಎಂದು. ಅದಕ್ಕೆ ಚುನಾವಣಾ ಆಯೋಗದವರು ನನಗೆ ಒಂದು ಪತ್ರವನ್ನು ಈ ರೀತಿ ಬರೆದಿದ್ದಾರೆ.

> "No order is issued for cancellation of the above elections till today, 17-3-90...

ಆದರೂ ಸಹ ಇವರು ಮಾತ್ರ ಈ ಬಗ್ಗೆ ಪತ್ರಿಕೆಗಳ ಮೂಲಕ ರೇಡಿಯೋ ಮತ್ತು ಟಿ.ವಿ. ಮೂಲಕ ಜನರಿಗೆ ಹೇಳಿಕೆ ಕೊಡುತ್ತಾ ಬಂದರು.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಚುನಾವಣಾ ಆಯೋಗಕ್ಕೆ ಯಾವುದರ ಸಲುವಾಗಿ ಪತ್ರ ಬರೆದಿದ್ದಿರಿ. ಅದಕ್ಕೆ ಅನುಗುಣವಾಗಿ ಅವರು ಉತ್ತರ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು

ಚುನಾವಣಾ ಆಯೋಗಕ್ಕೆ ಚುನಾವಣೆಯನ್ನು ಮುಂದೂಡಿರಿ ಎಂದು ಪತ್ರ ಬರೆದಿದ್ದಾರೆಂದು ತಾವು ಹೇಳಿದ್ದೀರಿ ತಾವೇನಾದರು ಚುನಾವಣಾ ಆಯೋಗದವರಿಗೆ ಮುಖ್ಯಮಂತ್ರಿಗಳಿಗೆ ಏನು ಪತ್ರ ಬರೆದಿದ್ದೀರಿ ಎಂದು ತಾವು ಕೇಳಲಿಲ್ಲ. ಅವರು ಅದಕ್ಕೆ ಉತ್ತರವನ್ನೂ ಹೇಳಲಿಲ್ಲ

SRI D. B. CHANDREGOWDA.—I am not arguing the case as an Advocate. ಇಲ್ಲಿ ನಾನು ಏನು ಕೇಳುತ್ತಿದ್ದೇನೆಂದರೆ, ಚುನಾವಣಾ ಆಯೋಗ ಏತಕ್ಕೆ ಆಗಿದೆ ಎಂದರೆ ಚುನಾವಣೆ ಮಾಡುವುದಕ್ಕೆ ರಚನೆ ಆಗಿದೆ ಉದಾಹರಣೆಗೆ I will take the extreme case of Meham. ಮೆಹಮ್‌ನಲ್ಲಿ ಏನು ನಡೆಯಿತು, ಚುನಾವಣಾ ಆಯೋಗಕ್ಕೆ ಎಲ್ಲ ರಾಜಕೀಯ ಪಕ್ಷಗಳು ಪ್ರಧಾನ ಮಂತ್ರಿಗಳನು ಒಳಗೊಂಡು ನಮ್ಮ ಪಕ್ಷದ ಅಧ್ಯಕ್ಷರು ಕೂಡ ಸೇರಿ ಈ ಚುನಾವಣೆಯನ್ನು ನೀವು ಮುಂದಕ್ಕೆ ಹಾಕಬೇಕೆಂದು ಹೇಳಿದೆವು. ಆಗ ಆಯೋಗ ಒಪ್ಪಲಿಲ್ಲ. ಚುನಾವಣಾ ಆಯೋಗದವರು ಏನು ಹೇಳಿದರೆಂದರೆ ನೀವು ಹೇಳಿದರ ಮೇಲೆ ನಾವು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ನನಗೆ ಸಮಾಧಾನವಾದ ತೀರ್ಮಾನ ಮಾಡಿದ್ದೇನೆ. they send their representatives to Meham ಅಲ್ಲಿನ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಆಗಿರತಕ್ಕಂಥ ಚುನಾವಣೆಯನ್ನು ಪ್ರಸ್ತಾಪಮಾಡಿದ್ದೇನೆ ಚುನಾವಣೆಯನ್ನು ಮುಂದುವರಿಸಬೇಕೆಂದು ನನಗೆ ಸಮಾಧಾನವಾದರೆ ನಾನು ಮಾಡುತ್ತೇನೆಂದು ಹೇಳಿದರು. ಹರಿಯಾಣದ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಆದ ಗಲಭೆ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳು ಹಾಗೂ ರೂಲಿಂಗ್ ಪಾರ್ಟಿಯವರು ಸಹ ಸೇರಿ ಈ ಚುನಾವಣೆಯನ್ನು ಮುಂದೆ ಹಾಕಬೇಕೆಂದು ಹೇಳಿದರು including the ruling party's Prime Minister Election Commission did not agree. ನಾವು ಇಂಡಿಪೆಂಡೆಂಟ್ ಅಥಾರಿಟಿ ಇದ್ದೇವೆ. ಈ ತೀರ್ಮಾನ ಮಾಡತಕ್ಕಂಥ ಅಧಿಕಾರ ನಮಗೆ ಇದನ್ನು ಮುಂದಕ್ಕೆ ಹಾಕಬೇಕೆಂದು ಸಮಾಧಾನವಾದರೆ ಮಾತ್ರ ನಾವು ತೀರ್ಮಾನ ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿ ಚುನಾವಣಾ ಆಯೋಗವನ್ನೂ ಕೇಳುವಂತಿಲ್ಲ. ಇಲ್ಲಿ ಚುನಾವಣೆ ಬಗ್ಗೆ ಸರ್ಕಾರದವರು ಒಂದು ತೀರ್ಮಾನ ಮಾಡಿದ ನಂತರ ಚುನಾವಣೆ ರದ್ದಾಗಿದೆ ಎಂದು ಹೇಳುವುದು. ಆಮೇಲೆ ಚುನಾವಣೆಯನ್ನು ಮುಂದೂಡಿದ್ದೇವೆಂದು ಹೇಳುವುದು, ಮತ್ತೆ ತಾರೀಕನ್ನು ನಿಗದಿಮಾಡಲು ವಿರೋಧಪಕ್ಷದವರನ್ನು ಕರೆಯುತ್ತೇವೆಂದು ಹೇಳುವುದು, ನೀವು ಮಾಡಿದಂಥ ಅಪರಾಧದ ಹೊರೆಯನ್ನು ನಮ್ಮ ಹೆಗಲಮೇಲೆ ಹಾಕುವಂತಹ ಈ ಪ್ರವೃತ್ತಿ ಸಲ್ಲದು. ಇಲ್ಲಿ ಸರ್ಕಾರವನ್ನು ಹರಾಜು ಹಾಕಬೇಕೆನ್ನುವ ಚಿಂತನೆ ನಮಗಿಲ್ಲ. ಈ ಪ್ರವೃತ್ತಿ ಜನತಂತ್ರ ವ್ಯವಸ್ಥೆಗೆ ವಿರುದ್ಧವಾಗಿದೆ. ಇಂಥ ವಿಚಾರಗಳ ಬಗ್ಗೆ ನಮ್ಮನ್ನು ಮೊದಲೇ ಕರೆಯಿರಿ ಚರ್ಚೆ ಮಾಡೋಣ. ೧೯ನೇ ತಾರೀಖು ಒಂದು...

ಶ್ರೀ ಕಾಗೋಡು ತಿಮ್ಮಪ್ಪ.— ನಗರ ಕಾರ್ಪೊರೇಷನ್‌ಗಳ ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿಯಿತು. ಚುನಾಯಿತ ಪ್ರತಿನಿಧಿಗಳ ಅವಧಿ ಮುಗಿದಾದ ಮೇಲೆ ತಾವು ಚುನಾವಣೆಗಳನ್ನು ಮಾಡಲಿಲ್ಲ. ಮುಂದೆ ಹಾಕಿದ್ದಿರಿ. ಆವಾಗ ಇದ್ದಂಥ ವಿರೋಧ ಪಕ್ಷಗಳನ್ನು ತಾವು ಕೇಳಲಿಲ್ಲ. ಪ್ರಜಾಪ್ರಭುತ್ವದ ಬಗ್ಗೆ ಹೇಳುವಂತ ಜನ ಸಕಾಲಕ್ಕೆ ಚುನಾವಣೆಗಳನ್ನು ಮಾಡುವ ಬದಲಾಗಿ ಅವರ ಅವಧಿ ಮುಗಿದ ಮೇಲೆ ಚುನಾವಣೆ ಮುಂದೂಡುವುದಕ್ಕೆ ಕಾರಣವೇನು ? Let us go by principles.

ಶ್ರೀ ಡಿ. ಬಿ. ಚಂದ್ರೇಗೌಡ.— ಆಗ ನಾನು ಮುಖ್ಯ ಮಂತ್ರಿಯಾಗಿ ಸರ್ಕಾರವನ್ನು ನಡೆಸುತಿದ್ದರೆ ಉತ್ತರ ಹೇಳುತ್ತಿದ್ದೆ.

SRI KAGODU THIMMAPPA.— At that time your party was the ruling party.

SRI D B. CHANDRE GOWDA.— I will get the matter examined. ನೀವೂ ಒಂದೊಂದುಸಲ ಈ ರೀತಿ ಹೇಳುತ್ತೀರಿ. ಈ ಬಗ್ಗೆ ನಾನು ಇನ್ನೂ ಮುಗಿಸಿಲ್ಲ. ಈ ಬಗ್ಗೆ ಚುನಾವಣಾ ಆಯೋಗ ಏನು ಬರೆಯುತ್ತದೆ ಅಂದರೆ; I will refer the last para.

> "In view of the census work and the annual examinations during March and April the Government decided to hold the poll on 22nd April, 1990. This is in consultation with keeping the election commission chief electoral officer informed about this they took a decision".

"The decision was communicated to all the concerned vide message of even number dated 2nd March, 1990, Subsequently in view of the Ramzan month, the Government decided to hold the poll on 29th of April, 1990 This decision is also communicated"...

So, election commission is there only to communicate the decisions of the Government not in consultation with the election commission There is a vast difference between the two. ೨೨ಕ್ಕೆ ಚುನಾವಣೆ ಸರಿಯೋ ತಪ್ಪೋ ಮಾಡಿ ಆದರೆ ನಿಮಗೆ ೨೨ಕ್ಕೆ ಚುನಾವಣೆಯನ್ನು ಮುಂದಕ್ಕೆ ಹಾಕಿದ ಮೇಲೆ ರಂಜಾನ್ ಇದೆ ಎಂದು ಗೊತ್ತಾಯಿತೆ ? What was the Minister doing in the Cabinet. Was he not expected to advice the Cabinet that there is Ramzan ? What was he doing ? You have a minority representative muslim representative in the cabinet. What was he doing. Basava Jayanthi ೨೮ಕ್ಕೆ ಇದೆ. ಏನೋ ಒಂದು ತೀರ್ಮಾನ ಮಾಡುತ್ತೀರಿ, ಆಮೇಲೆ ಅದು ಆಗುವುದಿಲ್ಲ. ನಂತರ ಆಲೋಚನೆ ಶುರುವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ಏಕೆ ಆಗುವುದಿಲ್ಲ ?

SRI D. B. CHANDREGOWDA.— Please do that, But don't forget the consequences of your decisions on the general public. ಸಾರ್ವಜನಿಕರಿಗೆ ಆಗತಕ್ಕ ತೊಂದರೆಗಳನ್ನು ಗಮನಿಸಿ ನೀವು ಚುನಾವಣೆಯನ್ನು ಮುಂದಕ್ಕೆ ಹಾಕಲಿಲ್ಲ. ತಮಗೇನಾದರೂ ಈ ತೊಂದರೆಯ ಅರಿವು ಆಗಿದೆಯೆ ? ಚುನಾವಣೆ ಮುಂದಕ್ಕೆ ಹೋಗಿದ್ದರ ಪರಿಣಾಮವಾಗಿ ಸರ್ಕಾರಕ್ಕೆ ಎಷ್ಟು ಖರ್ಚಾಗಿದೆ ? ಗೊತ್ತಿದೆಯೋ ? ಬ್ಯಾಲೆಟ್ ಪೇಪರ್ ಪ್ರಿಂಟಿಂಗ್ ನಡೆಯುತ್ತಿತ್ತು. ಇಂಕು, ಪೇಪರ್, ಪ್ಯಾಡು ಎಲ್ಲ ಕೊಂಡಿದ್ದೀರಿ. ೨೦ನೇ ತಾರೀಖು ಹೋಗಿ ಕೇಳಿದರೆ ನಿಮ್ಮಿಂದ ಯಾವ ಕಮ್ಯುನಿಕೇಷನ್ ಇಲ್ಲ. ಎಲ್ಲಾ ತಯಾರಿ ನಡೆದಿದೆ. ಸರ್ಕಾರದಿಂದ ಲಕ್ಷಾಂತರ ರೂಪಾಯಿ ಖರ್ಚು ಮಾಡಿದಿರಿ ಯಾವ ಅಧಿಕಾರದ ಮೇಲೆ ನೀವು ಚುನಾವಣೆಯನ್ನು ಮುಂದಕ್ಕೆ ಹಾಕಿದಿರಿ. ಆಮೇಲೆ ಈ ಬಗ್ಗೆ ಅಧಿಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದಿರಿ. ಒಂದು ಅಧಿಕಾರ ತೆಗೆದುಕೊಳ್ಳುತ್ತೀರಿ, ಅದು ಸ್ಪೀಕಿಂಗ್ ಪವರ್ಸ್. ಎಷ್ಟು ಪವರ್ಸ್ ಎಂಬುದನ್ನು ಓದುತ್ತೇನೆ Ordinance No. 1 Law and Parliamentary Affairs Secretariat notification. It is dated 19th February, 1990. Till such time. ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ಅಥವಾ ಚುನಾವಣೆಯನ್ನು ರದ್ದುಪಡಿಸುವುದಕ್ಕೆ ನಿಮಗೆ ಅಧಿಕಾರ ಇರಲಿಲ್ಲ. ನೀವು ಏನು ಪವರ್ಸ್ ತೆಗೆದುಕೊಳ್ಳುತ್ತೀರಿ ಆ ಎಲ್ಲ ವಿವರಗಳನ್ನು ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. Law and other aspects, I will go through little later, Every election of the councillor shall be subject to the control and supervision of the Government. It shall be lawful for the Government to issue directions on 19th and till such time it was unlawful. ಇವತ್ತು ಚುನಾವಣೆ ಮಾಡುತ್ತೇವೆ ಅನ್ನುವುದು, ನಾಳೆ ಮುಂದಕ್ಕೆ ಹಾಕುವುದು. ೨೮ಕ್ಕೆ ಚುನಾವಣೆ ಮಾಡುವುದು ಬೇಡ, ಅಂದು ಬಸವ ಜಯಂತಿ ಇದೆ. ಎಂಬ ವಾದ ಈಗ ಶುರುವಾಗಿದೆ. ನನಗಂತೂ ನಂಬಿಕೆ ಇಲ್ಲ. ಇವರು ಹೇಳತಕ್ಕ ಮಾತುಗಳ ಬಗ್ಗೆ, ತೆಗೆದುಕೊಳ್ಳತಕ್ಕ ನಿರ್ಣಯಗಳ ಬಗ್ಗೆ ನನಗೆ ನಂಬಿಕೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ — ಜನರಿಗೆ ನಂಬಿಕೆ ಇರುತ್ತದೆ.

೪-೩೦ ಪಿ.ಎಂ.

ಶ್ರೀ ಡಿ. ಬಿ. ಚಂದ್ರೇಗೌಡ.— ಅದಕ್ಕಾಗಿಯೇ council of ministers, ಇರುವುದು. joint responsibility ಇರುತ್ತದೆ. ಅದಕ್ಕಾಗಿಯೇ we have not kept one Minister, But Council of Ministers, it is a combined cabinet. The decisions of the Cabinet should reflect the view of the Government. ಏನು ತೀರ್ಮಾನ ಮಾಡುತ್ತೀರಿ, ಅದರಿಂದ ಆಗತಕ್ಕ ಪರಿಣಾಮಗಳ ಕಲ್ಪನೆ ಬೇಡವೆ ? ಕಳಕಳಿ

ಬೇಡವೆ ? ಆಲೋಚನೆ ಬೇಡವೇ ? Then, why should the Cabinet be there ? Why should you sit here ? What type of Cabinet you should have ? ಅಧಿಕಾರ ತೆಗೆದುಕೊಂಡು ಚುನಾವಣೆ ಮುಂದಕ್ಕೆ ಹಾಕುತ್ತಾ ಇರಿ. ಜನ ತೀರ್ಮಾನ ಕೊಡುತ್ತಾರೆ. ನಾನು ಅದರ ಮೇಲೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರಿ ನೌಕರರ ಮುಷ್ಕರ ಮತ್ತು ಚುನಾವಣೆ. ಸರ್ಕಾರಿ ನೌಕರರು ಚುನಾವಣೆಯನ್ನು ಮುಂಗಿಸಿಕೊಡುವುದಿಲ್ಲ ಎಂದು ಎಲ್ಲೂ ಹೇಳಿಲ್ಲ. Let me be plain and straight. Let it go to records. ಸರ್ಕಾರಿ ನೌಕರರ ಮುಷ್ಕರದಿಂದ ರಾಜ್ಯದಲ್ಲಿ ಆಗತಕ್ಕ ಚುನಾವಣೆಗೆ ಅಡ್ಡಿಯಾಗುತ್ತದೆಂದು ಅವರೂ ಹೇಳಿಲ್ಲ. ನೀವಂತೂ ಅವರನ್ನು ಕೇಳಲಿಲ್ಲ. ಆದರೆ ಚುನಾವಣೆ ಮುಂದೂಡಲು ಅಧಿಕಾರ ತೆಗೆದುಕೊಂಡಿರಿ.

ಶ್ರೀ ಕಾಗೋಡು ತಿಮ್ಮಪ್ಪ.— ಸರ್ಕಾರಿ ನೌಕರರು ಎಲ್ಲಾ ಕೆಲಸಕ್ಕೂ ಬಹಿಷ್ಕಾರ ಹಾಕಿದಮೇಲೆ ಚುನಾವಣೆಗೆ ಹಾಕುತ್ತಿರಲಿಲ್ಲ ಎಂದು ಹೇಳಿದರೆ ಅರ್ಥ ಏನು ? ನಿಮ್ಮ ಮನೆಗೆ ಬರುವುದಿಲ್ಲ ಎಂದು ಸಿಟ್ಟು ಮಾಡಿಕೊಂಡು ಹೋದರೆ ಊಟಕ್ಕಾದರೆ ಬರುತ್ತಿದ್ದರು, ಹಾಗೇ ಆದರೆ ಬರುತ್ತಿರಲಿಲ್ಲ ಎಂದು ಯಾರಾದರೂ ಹೇಳುತ್ತಾರಾ ?

ಶ್ರೀ ಡಿ. ಬಿ. ಚಂದ್ರೇಗೌಡ.— ಚುನಾವಣೆ ಕೆಲಸ ಜನರ ಕೆಲಸ. ರಾಜ್ಯಾಂಗದತ್ತವಾದ ಕೆಲಸ ಶಾಸನಬದ್ಧವಾದ ಕೆಲಸ. ಮಂತ್ರಿಮಂಡಲಕ್ಕೂ ಸರ್ಕಾರಿ ನೌಕರರಿಗೂ ವ್ಯತ್ಯಾಸ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ವಿರೋಧ ಪಕ್ಷದ ನಾಯಕರು ಈ ಬಗ್ಗೆ ಹೇಗೆ ವಾದ ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಸರ್ಕಾರಿ ನೌಕರರ ಕೆಲಸ ಶಾಸನಬದ್ಧವಾದ ಕೆಲಸ: They have created a system. ಅದು ಚುನಾವಣೆಯಾಗಿರಬಹುದು, ಆಫೀಸ್ ಕೆಲಸವಾಗಿರಬಹುದು. ಚುನಾವಣಾ ಕೆಲಸವೂ ಅಫಿಷಿಯಲ್ ಡ್ಯೂಟಿ. It is official duty.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಸರ್ಕಾರದ ಗಮನಕ್ಕೆ ಈ ಸಂದರ್ಭದಲ್ಲಿ ನಾನು ತರತಕ್ಕದ್ದು, ಕರ್ನಾಟಕದ ಪವರ್ ಕಾರ್ಪೊರೇಷನ್ ಇಂಜಿನಿಯರ್ಸ್ ೯೦೦ ಜನ ಇರಬೇಕು. ಅವರು ತಮ್ಮ ಬೇಡಿಕೆಗಳನ್ನಿಟ್ಟು ೨೪ನೇ ತಾರೀಖಿನಿಂದ ಸ್ಟ್ರೈಕ್ ಮಾಡುತ್ತೇವೆಂದು ಅವರು ಹೇಳಿದಾಗ ಎಸೆನ್ಷಿಯಲ್ ಸರ್ವೀಸಸ್ ಮೈಂಟೆನೆನ್ಸ್ ಆಕ್ಟನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ಈ ಸದನ ನಡೆಯುತಕ್ಕ ಸಂದರ್ಭದಲ್ಲಿ ಮುಷ್ಕರ ಆಗದಂತೆ ಒಬ್ಬ ಆಫೀಸರ್ ದಮನ ಮಾಡಿದ. ಇದನ್ನು ನಿಮ್ಮ ಕೈಯಲ್ಲಿ ಮಾಡುವುದಕ್ಕಾಗಲಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಮಾನ್ಯ ಸಿಂಧ್ಯ ಅವರು ಹೇಳಿದರು ಒಬ್ಬ ಅಧಿಕಾರಿ ಆಜ್ಞೆ ಜಾರಿಗೆ ತಂದ ಎಂದು. ಕಾನೂನಿನ ಇತಿಮಿತಿಯಲ್ಲಿ ಅಧಿಕಾರಿ ಕೆಲಸ ಮಾಡಿದ್ದರೆ ನಾವೇನು ಮಾಡುವುದು ?

ಶ್ರೀ ಡಿ. ಬಿ. ಚಂದ್ರೇಗೌಡ.— ಇದು ಚುನಾವಣೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ಎಸೆನ್ಷಿಯಲ್ ಸರ್ವೀಸಸ್ ಮೈಂಟೆನೆನ್ಸ್ ಆಕ್ಟನ್ನು ಸದನ ನಡೆಯುವಾಗ ಒಬ್ಬ ಅಧಿಕಾರಿ ಜಾರಿಗೆ ತರುವ ಬಗ್ಗೆ ನೋಟಿಫೈ ಮಾಡಿದರು ಎಂದು ನನ್ನ ಸನ್ಮಿತ್ರರು ಹೇಳಿದ್ದಾರೆ. ಅದು ಅಧಿಕಾರಿ ಮಾಡಿದ್ದಲ್ಲ. ಸರ್ಕಾರವೇ ಮಾಡಿದಂಥದ್ದು. ಸೆಕ್ಷನ್ ೩ರ ಕೆಳಗೆ ನೋಟಿಫಿಕೇಷನ್ ಕೊಡಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳು ವಿವರಣೆ ಕೊಡಬೇಕು ಎಂದು ಒಂದು ಕ್ಲಾಸ್ ಇದೆ. ಅದಕ್ಕೆ ಅನ್ವಯವಾಗಿ ಫರ್ದರ್ ಕ್ಲಾರಿಫಿಕೇಷನ್ ಅಧಿಕಾರಿ ಕೊಟ್ಟರೇ ಹೊರತು ಸೆಕ್ಷನನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದರಂತೆ ನೋಟಿಫಿಕೇಷನ್ ಕೊಟ್ಟಿದೆ ಎಂಬ ಮಾತನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅಧಿಕಾರಿಗಳು ಮಾಡಿರುವುದು, ತಾವು ಮಾಡಿರುವುದು ಎಂದು ನಾನು ಹೇಳುತ್ತಿಲ್ಲ. ಅವರನ್ನು ಸಪ್ರೆಸ್ ಮಾಡುವುದಕ್ಕೆ ಮಾಡಿದ್ದೀರಿ. ಎಲೆಕ್ಷನ್ ಇನ್ನು ಐದು ದಿನದಲ್ಲಿ ನಡೆಯಬೇಕಾಗಿತ್ತು. ಸಾವಿರಾರು ರೂಪಾಯಿಗಳನ್ನು ಎಲ್ಲಾ ಪಕ್ಷದವರು ಮತ್ತು ಪಕ್ಷೇತರ ಅಭ್ಯರ್ಥಿಗಳು ಖರ್ಚು ಮಾಡಿರುವಾಗ, ಸರ್ಕಾರಿ ನೌಕರರು ಸ್ಟ್ರೈಕ್ ನೋಟೀಸ್ ಕೊಟ್ಟ ತಕ್ಷಣ, ಒಂದು ದಿವಸ ಸ್ಟ್ರೈಕ್ ನಡೆದಿರಲಿಲ್ಲ, ಆಗಲೇ ಎಲೆಕ್ಷನ್ ಮುಂದೂಡುವ ಬಗ್ಗೆ ಅನೌನ್ಸ್ ಮಾಡಿದರಲ್ಲ, ಅದು ಸರಿಯಲ್ಲ ಎಂದು ನಾವು ಹೇಳುತ್ತಾ ಇರುವುದು

ಶ್ರೀ ಡಿ. ಬಿ. ಚಂದ್ರೇಗೌಡ.— ಒಟ್ಟಿಗೆ ಒಂದು ಮಾತಿನಲ್ಲಿ ಹೇಳಬೇಕೆಂದರೆ, ಕಳ್ಳನಿಗೆ ಒಂದು ಪಿಳ್ಳೆ ನೆವ. ಚುನಾವಣೆ ಫಲಿತಾಂಶ ನಿಮಗೆ ಹೆಚ್ಚುಕಡಿಮೆ ಗೊತ್ತಾಗಿಬಿಟ್ಟಿತ್ತು.

ಶ್ರೀ ರಮಾನಾಥ ರೈ.— ಬೆಂಗಳೂರು, ಜಯನಗರ ಮತ್ತು ಧಾರವಾಡ ಚುನಾವಣಾ ಫಲಿತಾಂಶ ಏನಾಯಿತು ?

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ, ಇಲ್ಲಿ ಕಳ್ಳ ಯಾರು ? ರಾಜಶೇಖರಮೂರ್ತಿ ಯವರು ಮೊನ್ನೆ ಸೂಳೆ ಎಂದಾಗ ನಾವು ಆ ಪದ ಸರಿಯಲ್ಲ ಎಂದು ಹೇಳಿದೆವು. ನಮ್ಮ ವಿರೋಧ ಪಕ್ಷದ ನಾಯಕರು ಕಳ್ಳ ಎಂದು ಹೇಳಿದ್ದಾರೆ. ಇದು ಸರಿಯೇ ? ಯಾರಿಗೆ ಈ ಪದವನ್ನು ಅವರು ಉಪಯೋಗ ಮಾಡಿದ್ದಾರೆ ? ಕಾಗೋಡು ತಿಮ್ಮಪ್ಪನವರು ಇದಕ್ಕೆ ಸಹಕಾರ ನೀಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.— ಆ ಗಾದೆ ಈ ಸನ್ನಿವೇಶಕ್ಕೆ ಯೋಗ್ಯವಾದುದಲ್ಲ. ಮೊನ್ನೆ ಅಧ್ಯಕ್ಷರು ಕೂಡ ಹೇಳಿದ್ದಾರೆ. ಅಂಥಾದ್ದು ಬಳಸಬಾರದು ಎಂದು. ಇಲ್ಲಿ ಕಳ್ಳನೂ ಇಲ್ಲ ಪಿಳ್ಳೆಯೂ ಇಲ್ಲ. ಆದ್ದರಿಂದ ಯಾರೂ ಇಲ್ಲದ ಕಾರಣಕ್ಕೆ ಅದನ್ನು ಏತಕ್ಕೆ ಬಳಸಬೇಕು ? ತೆಗೆದುಹಾಕಿ.

ಮಾನ್ಯ ಸದಸ್ಯರು.— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ರಾಜ್ಯಪಾಲರು ನಮ್ಮನ್ನುದ್ದೇಶಿಸಿ ಮಾಡಿದ ಭಾಷಣದ ಮೇಲೆ ಮಾತನಾಡಬೇಕಾಗಿತ್ತು. ಆದರೆ ಈಗ ಅವರು ಮಾತನಾಡುತ್ತಿರತಕ್ಕ ಚುನಾವಣೆ ವಿಷಯ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇದೆಯೇ

ಶ್ರೀ ಡಿ. ಬಿ. ಚಂದ್ರೇಗೌಡ.— ಪಾಪ, ಅವರು ಹೊಸ ಸದಸ್ಯರು ಅವರು ಕೇಳಿದ್ದಕ್ಕೆ ನಾನು ತಪ್ಪು ತಿಳಿದುಕೊಳ್ಳುವುದಿಲ್ಲ. ಅವರ ಮಾರ್ಗದರ್ಶನಕ್ಕೆ ಒಂದು ವಿಷಯವನ್ನು ಹೇಳುತ್ತೇನೆ. ಮಾತ ನಾಡುವ ಅಭ್ಯಾಸ ಪ್ರಾರಂಭ ಆಗುವುದೇ ಇಲ್ಲಿಂದ. ಆದ್ದರಿಂದಲೇ ರಾಜ್ಯಪಾಲರ ಭಾಷಣದ ಮೇಲೆ ನಿಮ್ಮನ್ನೆಲ್ಲಾ ಮಾತನಾಡಿ ಎಂದು ಹೇಳಿದ್ದು, ರಾಜ್ಯಪಾಲರ ಭಾಷಣದಲ್ಲಿ ನಿಮಗೆ ಏನು ತಿಳಿಯು ತ್ತದೆಯೋ ಅದನ್ನೆಲ್ಲಾ ಈ ಶಾಸನದ ವ್ಯಾಪ್ತಿಯಲ್ಲಿ ಮಾತನಾಡಬಹುದು. ಇದು ನಡೆದುಬಂದ ಪದ್ಧತಿ ಆದ್ದರಿಂದ ಎರಡನೆಯದು ಮುಖ್ಯವಾಗಿ ಈ ಕಾಂಗ್ರೆಸ್‌ನ ಅಭ್ಯರ್ಥಿಗಳ ಆಯ್ಕೆ ನಡೆದಿತ್ತಲ್ಲಾ ಬೆಂಗಳೂರು ನಗರದಲ್ಲಿ ಮತ್ತು ಬೇರೆ ಬೇರೆ ನಗರದಲ್ಲಿ ಆಯ್ಕೆಯಲ್ಲಿ ಎಷ್ಟೆಷ್ಟು ದ್ವಂದ್ವ ಆಗಿತ್ತು ಎಂದರೆ ಪಾರ್ಟಿ ಆಫೀಸಿನಲ್ಲಿ ಅಂಗಿ ಶರ್ಟ್ ಹರಿದುಕೊಂಡು ಬಿಟ್ಟರು ಅಲ್ಲಿ ಅಧ್ಯಕ್ಷರೇ ಈಚೆ ಬರುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.— ತಾವೂ ಸಹ ನಮ್ಮ ಪಕ್ಷದಲ್ಲಿಯೇ ಇದ್ದವರು. ಪಾಪ ತಮಗೆ ನಮ್ಮ ಪಕ್ಷದ ಬಗ್ಗೆ ಕಳಕಳಿ ಬಂದು ಹೀಗೆ ಏಕೆ ಮಾತನಾಡುತ್ತಿದ್ದೀರೋ ನನಗೆ ಗೊತ್ತಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ನಾವು ಎಲ್ಲಾ ಕಾಲದಲ್ಲೂ ವಿರೋಧ ಪಕ್ಷದಲ್ಲೇ ಇದ್ದೇವೆ. ಅವರು ಆ ಕಡೆ ಇದ್ದಾಗಲೂ ನಾನು ಈ ಕಡೆ ಇದ್ದೆ. ಈಗಲೂ ಕೂಡಾ ನಾನು ಈ ಕಡೆಯೇ ಇದ್ದೇನೆ. ನಾನು ಕಳಕಳಿಯಿಂದ ಮಾತನಾಡಿದರೆ ಅವರಿಗೆ ಏಕೆ ವ್ಯಥೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಕಾಂಗ್ರೆಸ್ ಬಗ್ಗೆ ಅವರಿಗೆ ಕಳಕಳಿಯೇ ?

ಶ್ರೀ ಡಿ. ಬಿ. ಚಂದ್ರೇಗೌಡ.— ಇವತ್ತು ಪಾರ್ಟಿ ಯಾರ ಸ್ವತ್ತೂ ಅಲ್ಲ.

(ಶ್ರೀಮತಿ ನಾಗರತ್ನಮ್ಮ ಹಾಗೂ ಶ್ರೀ ಹುಚ್ಚಮಾಸ್ತಿಗೌಡರನ್ನು ಕುರಿತು) ನೀವಿಬ್ಬರು ಕುಳಿತು ನನಗೆ ಹೇಳುತ್ತಿದ್ದೀರಿ. ನಿಮ್ಮ ಕಾಲದ ಕಾಂಗ್ರೆಸ್ ಉಳಿದಿದೆಯೇ ? ಸ್ವಲ್ಪ ಎದೆ ಮುಟ್ಟಿಕೊಂಡು ಹೇಳಿ. ಅದು ಇದೆ ಎಂದರೆ ನಾನೂ ನಿಮ್ಮ ಜೊತೆ ಧ್ವನಿಗೂಡಿಸುತ್ತೇನೆ.

ಶ್ರೀ ರಮಾನಾಥ ರೈ.— ಕಾಂಗ್ರೆಸ್ ಪಕ್ಷ ಯಾವಾಗಲೂ ಇರುತ್ತದೆ. ಆದರೆ ಈ ಪಕ್ಷಗಳು ಇರುವುದಿಲ್ಲ. ಇವು ಬದಲಾವಣೆ ಆಗುತ್ತಾ ಇರುತ್ತವೆ.

ಶ್ರೀ ಕಾಗೋಡು ತಿಮ್ಮಪ್ಪ.— ಜನತಾ ಪಾರ್ಟಿ ಅಧ್ಯಕ್ಷರ ಚುನಾವಣೆ ಕಾಲದಲ್ಲಿ ಏನು ನಡೆಯಿತು ಮಾನ್ಯ ಸಿಂಧ್ಯಾರವರೇ ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಪುಟ್ಟಸ್ವಾಮಿ ಗೌಡರು ಹಾಗೂ ನಾನೂ ಮಾನ್ಯ ವೀರೇಂದ್ರ ಪಾಟೀಲರನ್ನೇ ಅಧ್ಯಕ್ಷರನ್ನಾಗಿ ಮುಂದುವರಿಸಬೇಕೆಂದು ಬೀರಲ್ಲಿ ಜಗಳ ಆಡಿಕೊಂಡೆವು. ಕುಸ್ತಿ ಮಾಡಿ ಕೊಂಡೆವು, ಆದರೆ ನೀವು ಅವರನ್ನು ಹೊತ್ತುಕೊಂಡು ಹೋಗಿ ಮುಖ್ಯಮಂತ್ರಿಗಳನ್ನಾಗಿ ಮಾಡಿ ಕೊಂಡಿದ್ದೀರಿ. ಏನು ಮಾಡುವುದಕ್ಕಾಗುತ್ತದೆ ?

ಶ್ರೀ ವಾಟಾಳ್ ನಾಗರಾಜ್.— ಇದು ಸರಿಯಲ್ಲ. ತೋಳ ಕುರಿ ಎಲ್ಲ ಒಟ್ಟು ಸೇರಿಕೊಂಡು ಹಂಚಿಕೊಂಡಂತೆ ಇಲ್ಲಿ ತಿಮ್ಮಪ್ಪ ಹಾಗೂ ಸಿಂಧ್ಯಾ ಅವರ ಮಾತುಕತೆ ನಡೆಯುತ್ತಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಕಾಂಗ್ರೆಸ್ ಪಕ್ಷದಲ್ಲಿ ಅಭ್ಯರ್ಥಿಗಳ ಆಯ್ಕೆಯಲ್ಲಾದ ಆತಂಕ ನಿಮಗೂ ಗೊತ್ತಿದೆ. ಏನೋ ಮಾಡಿ ಚುನಾವಣೆ ಮುಂದೂಡಿದ್ದೀರಿ. ಆದರೆ ನನ್ನ ಕಳಕಳಿ ಏನೆಂದರೆ,

ಇಂತ ಒಂದು ರಾಜ್ಯವ್ಯಾಪಿ ಸಾರ್ವಜನಿಕ ಜನ ಚುನಾವಣೆಗೆಂದು ಹಲವಾರು ಸಿದ್ಧತೆಗಳನ್ನು ಮಾಡಿಕೊಂಡ ಮೇಲೆ ಮುಂದೂಡಿದ್ದರ ಪರಿಣಾಮ ಏನು ? ಇನ್ನೂ ೬ ದಿವಸ ಸಮಯ ಇತ್ತು. ಮುಷ್ಕರ ೧೭ನೇ ತಾರೀಖು ಸಾಯಂಕಾಲವೇ ಮುಗಿದಿತ್ತು. ೨೫ನೇ ತಾರೀಖು ಚುನಾವಣೆ ಮಾಡುವುದಕ್ಕೆ ಅವಕಾಶ ಇತ್ತು. ಅಲ್ಲಿಂದೀಚೆಗೆ ೫ ದಿವಸದಲ್ಲಿ ಚುನಾವಣೆ ಮುಗಿಸಬಹುದಿತ್ತು. ಎಷ್ಟು ದಿನ ಮುಷ್ಕರ ಇತ್ತೋ ಅಷ್ಟು ದಿನ ಮುಂದೆ ಹಾಕುವುದಕ್ಕೆ ಸಾಧ್ಯ ಇತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಯಾವುದೇ ಚುನಾವಣೆಗೆ ಟ್ರೈನಿಂಗ್ ಇರುತ್ತದೆ. ಬ್ಯಾಲೆಟ್ ಪೇಪರ್ ಪ್ರಿಂಟ್ ಆಗಬೇಕಾಗುತ್ತದೆ. ವಾರದಲ್ಲಿ ಎಲ್ಲಾ ಆಗುವುದಿಲ್ಲ.

ಶ್ರೀ ಡಿ. ಬಿ ಚಂದ್ರೇಗೌಡ.—೧೯ನೇ ತಾರೀಖಿನವರೆಗೆ ಮುಂದಕ್ಕೆ ಹಾಕಿದ್ದರ ಬಗ್ಗೆ ಸರ್ಕಾರಿ ಆಜ್ಞೆ ಇರಲಿಲ್ಲ. ಅವರ ಪಾಡಿಗೆ ಅವರು ಕೆಲಸ ಮಾಡುತ್ತಿದ್ದರು ಸ್ವಾಮಿ ಈಗ ನಾನು ಬೇರೆ ಬೇರೆ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ಮುಖ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ಆಡಳಿತದ ಶಿಸ್ತಿನ ಬಗ್ಗೆ, ಆಡಳಿತದ ಸ್ವಚ್ಛತೆಯ ಬಗ್ಗೆ ಬಹಳ ದೊಡ್ಡ ಭಾಷಣವನ್ನು ಮಾಡಿದ್ದಾರೆ. ರಾಜ್ಯಪಾಲರ ಭಾಷಣದ ೮ನೇ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ,

> ''ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸುವುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ತರುವುದು ನನ್ನ ಸರ್ಕಾರದ ಪ್ರಮುಖ ಕಾರ್ಯಕ್ರಮಗಳಲ್ಲೊಂದು ಆಡಳಿತ ದಕ್ಷತೆ ಅತ್ಯಂತ ಕ್ಷೀಣ ಸ್ಥಿತಿಯಲ್ಲಿರುವುದರಿಂದ ವ್ಯಾಪಕವಾಗಿ ವಿಸ್ತರಿಸಿರುವ ನೌಕರಶಾಹಿ ವ್ಯವಸ್ಥೆಯು ಜನತೆಯ ಅಗತ್ಯಗಳು ಮತ್ತು ಆಶೋತ್ತರಗಳಿಗೆ ಸಾಕಷ್ಟು ಸ್ಪಂದಿಸುತ್ತಿಲ್ಲ. ಭ್ರಷ್ಟಾಚಾರವು ಎಲ್ಲೆಡೆ ವ್ಯಾಪಿಸಿದೆ.'' ಎಂದು ಹೇಳಿದ್ದಾರೆ.

ಇವೆಲ್ಲ ಮಾತುಗಳನ್ನು ನಾನು ಒಪ್ಪುತ್ತೇನೆ. ಆದರೆ ನಾನು ಒಂದು ಏನು ಕೇಳುತ್ತೇನೆ ಎಂದರೆ this should be a policy enunciated document ಇಲ್ಲಿ ಆಡಳಿತವನ್ನು ನಿರ್ವಹಿಸತಕ್ಕ ಂಥ ಜವಾಬ್ದಾರಿ ರಾಜ್ಯದ ಮಂತ್ರಿಮಂಡಲಕ್ಕೆ ಸೇರಿದ್ದು. ಅದು ನೀತಿ ನಿರೂಪಣೆಯಾಗುವುದಿಲ್ಲ. ಆಡಳಿತ ವ್ಯವಸ್ಥೆಯ ಬಗ್ಗೆ ಈ ಭಾಷಣದಲ್ಲಿ ಹೇಳತಕ್ಕದ್ದು ನೀತಿ ನಿರೂಪಣೆಯಾಗುವುದಿಲ್ಲ. The administration is a part and parcel and the basic duty of your Cabinet. Do not try to dispense or transfer of your responsibility. ಇಲ್ಲಿ ಏನು ಮಾಡಿದ್ದಾರೆಂದರೆ, ಆಡಳಿತದ ಬಗ್ಗೆ ಮೂರು ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಇದು ನಿಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಪ್ರಯತ್ನ ಒಂದಾದರೆ, ಈ ಜವಾಬ್ದಾರಿಯನ್ನು ಹೆಗಲಿನಿಂದ ಹೆಗಲಿಗೆ ವರ್ಗಾವಣೆ ಮಾಡುವುದು ಇನ್ನೊಂದು ಇದು ಬ್ರಿಟಿಷ್ ಸಾಮ್ರಾಜ್ಯದಲ್ಲಿ ನಡೆಯುತ್ತಿತ್ತು. ಅವರಿಗೆ ಯಾವುದೇ ಒಂದು ಸಮಸ್ಯೆಯ ವಿಚಾರ ಬಂದಾಗ ಅದನ್ನು ರಾಯಲ್ ಕಮೀಷನ್‌ಗೆ ರೆಫರ್ ಮಾಡುವುದು. ಇದು ಬ್ರಿಟಿಷ್ ಪದ್ಧತಿ. ಇದನ್ನು ರಾಯಲ್ ಕಮೀಷನ್ ಎನ್ನಬೇಕಾಗಿದೆ. ಇಂತಹ ಒಂದು ಕಮಿಷನ್ ಮಾಡಲಾಗಿದೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಒಂದು ಸಪರೇಟ್ ಸೆಲ್ ಇದಕ್ಕಾಗಿಯೇ ಇದೆ. ಇದು ನೇರವಾಗಿ ಮುಖ್ಯಮಂತ್ರಿಗಳ ನಿರ್ದೇಶನದಲ್ಲಿ ಮುಖ್ಯ ಕಾರ್ಯದರ್ಶಿಯವರ ಆದೇಶದ ಮೇರೆಗೆ ಕೆಲಸ ಮಾಡುತ್ತದೆ. One is the top executive and the other is the top elected representative. This came into existence because of the recommendations of the Administrative Reforms Commission. Based on the recommend tions of the Administrative Reforms Commission a seperate cell was a constituted in DPAR in every State In Karnataka also we have accepted it. ನೀವು ಹೇಳಿರತಕ್ಕ ಎಲ್ಲಾ ಪ್ರಕ್ರಿಯೆಯನ್ನು ಮಾಡಿ ಮುಖ್ಯ ಮಂತ್ರಿಯವರಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸುತ್ತಾರೆ. ಅದರ ಒಂದು ಆಧಾರದ ಮೇಲೆ ನೀವು ಮಂತ್ರಿ ಮಂಡಲದಲ್ಲಿ ಕೂತು ನಿರ್ಣಯ ಮಾಡುತ್ತೀರಿ. ದಕ್ಷತಾ ಪರಿಶೋಧನಾ ಮತ್ತು ಜಾಗೃತಾ ಮಂಡಳಿಯೆಂದು ಒಂದು ಸಮಿತಿಯನ್ನು ಅಥವಾ ಮಂಡಳಿಯನ್ನು ರಚಿಸುವುದು ಹಾಗೂ ಭ್ರಷ್ಟಾಚಾರ, ಅಲಕ್ಷ್ಯ, ಕರ್ತವ್ಯಲೋಪ, ಅದಕ್ಷತೆ ಮತ್ತು ದುಂದುವೆಚ್ಚ ಹಾಗೂ ಹೊಣೆಗೇಡಿತನ ಇವುಗಳ ಬಗ್ಗೆ ಪರಿಶೀಲನೆ ಮಾಡುವ ಜವಾಬ್ದಾರಿಯನ್ನು ಈ ಮಂಡಳಿಗೆ ಒಪ್ಪಿಸುವುದು. Then what is the job of the DPAR ? What is the role of DPAR. Whether you want to dispense with DPAR ? These are all basic administrative and fundamental questions.

ಇದೊಂದು ಕಮಿಟಿ. ಎರಡನೇ ಕಮಿಟಿ ಏನೆಂದರೆ ಮೇಲೆ ಹೇಳಿದ್ದೇನೆ. ಸೂಪರ್‌ವಿಷನ್ ಕಮಿಟಿ ಅಂದರೆ ಪರಿಶೋಧನಾ ಕಮಿಟಿ, ಆಡಳಿತದಲ್ಲಿ ಹೆಚ್ಚು ದಕ್ಷತೆಯುಂಟು ಮಾಡುವುದಕ್ಕೆ ಒಂದು ಕಮಿಟಿ, ಕಾರ್ಯ ಸಾಮರ್ಥ್ಯವನ್ನು ಪರಿಶೀಲಿಸಲು ಮತ್ತೊಂದು ಕಮಿಟಿ. ಈ ಬಗ್ಗೆ ಇದರಲ್ಲಿ ಹೇಳಿರುವುದನ್ನು ಇನ್ನೊಂದು ಸಲ ತಮಗೆ ಓದಿ ಹೇಳುತ್ತೇನೆ,

> "ಆಡಳಿತವನ್ನು ಹೆಚ್ಚು ದಕ್ಷತೆ, ಹೊಣೆಗಾರಿಕೆ, ಸ್ಪಂದನೀಯ. ಮತ್ತು ಸೌಜನ್ಯಯುತ ಯಂತ್ರವನ್ನಾಗಿ ಮಾಡುವ ಉದ್ದೇಶದಿಂದ, ಕಾರ್ಯ ವಿಧಾನವನ್ನು ಮರು ವಿನ್ಯಾಸ ಗೊಳಿಸಲು ಪದ್ಧತಿ ಮತ್ತು ಮಾನವ ಶಕ್ತಿ ಯೋಜನೆಯನ್ನು ಪುನರ್ ರೂಪಿಸಲು. ಅನುಭವಶೀಲ ಸರ್ಕಾರಿ ನೌಕರರು ಮತ್ತು ನಿಪುಣ ವ್ಯವಸ್ಥಾಪನಾ ತಜ್ಞರನ್ನೊಳ ಗೊಂಡ ಪದ್ಧತಿ ಪರಿಶೋಧನಾ ಸಂಸ್ಥೆಯನ್ನು ಸ್ಥಾಪಿಸುವುದು.

ಇಲ್ಲಿ ಅನುಭವ ಬೇಕು. ಅಲ್ಲಿ ಅನುಭವ ಹೆಚ್ಚು ಬೇಡ ಅಂತ ೫೮ ರಿಂದ ೫೫ ಮಾಡುತ್ತೀರಿ. What sort of dycotomy it is ? ಇದು ಒಂದಕ್ಕೊಂದು ಪೂರಕವಾಗುವ ರೀತಿಯಲ್ಲಿದೆಯೆ ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇದೆ. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಇದ್ದರೂ ಕೂಡ ಹಿಂದೆ ಥಿಂಕ್ ಟ್ಯಾಂಕ್ ಅಂತ ಒಂದು ಸಮಿತಿಯನ್ನು ನಿಮ್ಮ ಕಾಲದಲ್ಲಿ ರಚನೆ ಮಾಡಿ ಅನೇಕ ಪುಸ್ತಕಗಳನ್ನು ತಯಾರು ಮಾಡಿದ್ದೀರಿ, ಅವುಗಳು ನಮ್ಮ ಹತ್ತಿರ ಇವೆ. ಅವುಗಳನ್ನು ಅನೇಕ ಸಂದರ್ಭಗಳಲ್ಲಿ ನಾವು ಉಪಯೋಗ ಮಾಡಿಕೊಳ್ಳುತ್ತೇವೆ. ಈ ಚಿಂತನಾ ಚಿಲುಮೆಯನ್ನು ಏತಕ್ಕೆ ಮಾಡುವುದಕ್ಕೆ ಹೋದಿರಿ ?

ಶ್ರೀ ಮಾಟಾಳ್ ನಾಗರಾಜ್.—ಆ ಚಿಂತನೆ ಚಿಲುಮೆಯಲ್ಲಿ ಬಹಳ ಜನ ಮುಳುಗಿದರು.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಏನು ಹೇಳಲಿ. Planning of the State and the administration both are 2 wings and they are part and parcel of the elected Government and the Cabinet. That is the Cabinet system. First thing is to envisage the administration. You are not administering, You have to govern. Whatever you govern, if you cannot manage your own officers what are you governing whom are you governing, how are you governing ? ಇದಕ್ಕೆ ಮತ್ತೊಂದು ಸಮಿತಿ ; ಮೂರನೆಯದ್ದು ಇನ್ನೊಂದು ಸಮಿತಿ ಉನ್ನತ ಅಧಿಕಾರಿಗಳೂ ಸೇರಿದಂತೆ ಎಲ್ಲಾ ಹಂತಗಳ ಅಧಿಕಾರಿಗಳ ಕಾರ್ಯ ಸಾಮರ್ಥ್ಯವನ್ನು ಪರಿಶೀಲಿಸಲು ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಪರಿಶೀಲನಾ ಸಮಿತಿಯೊಂದನ್ನು ರಚಿಸಲಾಗುತ್ತಿದೆ. ಆಡಳಿತಕ್ಕೆ ಸಂಬಂಧವಿಲ್ಲದೇ ಇರುವಂಥ ಉಚ್ಚ ನ್ಯಾಯಾಲಯದ ನಿವೃತ್ತನ್ಯಾಯಾಧೀಶರು ಇದಕ್ಕೆಮುಖ್ಯಸ್ಥರು. ಆಡಳಿತಕ್ಕೂ ನ್ಯಾಯಾಲಯಕ್ಕೂ ಏನು ಸಂಬಂಧ ? ಏಕೆ ಹೀಗೆ ? ಪ್ರತಿ ಹಂತದಲ್ಲೂ ನಿಮ್ಮ ನೌಕರರನ್ನು ಟ್ಯಾಂಪರ್ ಮಾಡಿ ಎಂದು ನಾನು ಹೇಳುವುದಿಲ್ಲ ಅವರಲ್ಲಿ ವಿಶ್ವಾಸ ಇಡಿ, ನಂಬಿಕೆ ಇಡಿ. ಅವರ ತಪ್ಪನ್ನು ಸರಿ ಮಾಡಿ. ನಾನು ನಿನ್ನೆ ದಿವಸ ಹೇಳಿದ ಹಾಗೆ ನೆಗಡಿ ಆಗುತ್ತದೆ ಎಂದು ಮೂಗನ್ನು ಕೊಯ್ಯುವುದಕ್ಕೆ ಹೋಗಬೇಡಿ. ಲೋಪದೋಷಗಳು ಇದ್ದರೆ ಡಿ.ಪಿ.ಎ.ಆರ್.ಗೆ ಹೇಳಿ ಚೀಫ್ ಸೆಕ್ರೆಟರಿಯವರಿಗೆ ಹೇಳಿ ಅವರನ್ನು ಮೊದಲು ನಂಬಿಕೆಗೆ ತೆಗೆದುಕೊಳ್ಳಿ. ಅವರನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ ಈ ರಾಜ್ಯದ ಆಡಳಿತ ಹೇಗೆ ಆಗುತ್ತದೆ ? ದಿನ ಬೆಳಕು ಹರಿದರೆ ಈ ಸಮಿತಿಯನ್ನು ಕರೆಯುವುದು, ಅವರು ಹೋಗಿ ವರದಿ ಕೊಡಬೇಕು. ಅದರ ವ್ಯಾಪ್ತಿಗೆ ಯಾರ್ಯಾರನ್ನು ತಂದಿದ್ದೀರೋ ಗೊತ್ತಿಲ್ಲ. ಅದರ ಬದಲು ಈಗಿರುವ ವ್ಯವಸ್ಥೆಯಲ್ಲಿ ದೋಷ ಇದ್ದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿ, Don't transfer your powers. This is my appeal. You are trying to escape from the responsibility and transfer your power. ನಿಮಗೆ ಇರತಕ್ಕಂಥ ಜವಾಬ್ದಾರಿಯನ್ನು ವರ್ಗ ಮಾಡಬೇಡಿ. ನಿಭಾಯಿಸಿ. ಅದರ ನಿಭಾವಣೆಗೆ ತೊಂದರೆ ಏನಿದೆ ? ಪೂರ್ಣ ಪ್ರಮಾಣದ ಮಂತ್ರಿಮಂಡಲ ಇಲ್ಲದೇ ಇರುವುದು ಕೂಡ ಅತ್ಯಂತ ದೊಡ್ಡ ದೋಷ. ಸಾಕಷ್ಟು ದೊಡ್ಡ ಮಂತ್ರಿ ಮಂಡಲದಲ್ಲಿ ಅನುಭವಿಗಳು ಅಲ್ಲಿ ಇದ್ದಿದ್ದರೆ ಹೀಗೆ ತೀರ್ಮಾನ ಮಾಡಿ ಆಲೋಚನೆ ಮಾಡತಕ್ಕಂಥ ಸ್ಥಿತಿಗೆ ನೀವು ಬರುತ್ತಿರಲಿಲ್ಲ. ಆಲೋಚನೆ ಮಾಡಿದ ನಂತರ ತೀರ್ಮಾನ ಮಾಡಿ.

SRI KAGODU THIMMAPPA.—Ultimately all decisions and suggestions should have to come to the Government. It is only the

Government which has to take a decision. They are all recommendatory bodies.

AN HON. MEMBER.—You are delaying decisions by constituting these bodies.

ಶ್ರೀ ಡಿ. ಬಿ. ಚಂದ್ರೇಗೌಡ.—ಯಾವುದನ್ನು ನಿರ್ಣಯ ಮಾಡಬೇಕಿತ್ತೋ, ಈ ರಾಜ್ಯದ ಜನರ ಹಿತದ ಸಲುವಾಗಿ. ಆ ನಿರ್ಣಯವನ್ನು ಈ ಒಂದು ಸಮಿತಿಗಳ ನೆಪದಲ್ಲಿ ಮುಂದೆ ಹಾಕುತ್ತಿದ್ದೀರಿ. ಹೀಗೆ ಮುಂದೆ ಹಾಕುವುದಕ್ಕೆ ಹೋಗಬೇಡಿ Whether it is right or wrong. ಕೆಲವು ಲೋಪ ದೋಷಗಳು ಆಗುತ್ತವೆ, ಎಲ್ಲವೂ ಸರಿ ಹೋಗುವುದಿಲ್ಲ. ನಾವೇನೂ ಸರ್ವಜ್ಞರಲ್ಲ. Take decisions and implement it. ಇದು ಆಡಳಿತದ ಬಗ್ಗೆ ಒಂದು ಸಮಗ್ರವಾದ ಪ್ಯಾರಾಗ್ರಾಫ್ ತಂದು ಏನು ಹೇಳಿಕೊಂಡಿದ್ದಾರೆಂದರೆ. ನಾವು ಆಡಳಿತವನ್ನು ನಡೆಸುವುದಕ್ಕೆ ಅಸಮರ್ಥರಾಗಿದ್ದೇವೆ. ಅದಕ್ಕಾಗಿ ಸಮಿತಿಗಳನ್ನು ಮಾಡಿ ಇವರ ಯೋಗ್ಯತೆಯನ್ನು ಹುಡುಕುವುದಕ್ಕೆ ಭೂತ ಕನ್ನಡಿ ಕೊಟ್ಟು ಕಳಿಸುತ್ತಿದ್ದೇವೆ ಎಂದು ಈ ಮಾತನ್ನು ಹೇಳಿದ ಹಾಗೆ ಆಗಿದೆ. ಇದು ಆಡಳಿತದ ಬಗ್ಗೆ ಹೇಳತಕ್ಕ ಮಾತು. ಇಷ್ಟಾದರೂ ನೀವು ಆಡಳಿತದ ಸುಧಾರಣೆ ಬಗ್ಗೆ ಏನು ಆಲೋಚನೆ ಮಾಡಿದ್ದೀರಿ? ಈ ಸುಧಾರಣೆಯನ್ನು ಇರತಕ್ಕಂಥ ವ್ಯವಸ್ಥೆಯಲ್ಲಿ ಮಾಡುವುದಕ್ಕೆ ಸಾಧ್ಯವಿದೆ. ಇದಕ್ಕೆ ಬೇಕಾಗಿರತಕ್ಕಂಥಾದ್ದು ಇಚ್ಛಾಶಕ್ತಿ, ರಾಜಕೀಯ ಇಚ್ಛಾಶಕ್ತಿ. ಮತ್ತು ಎರಡನೆಯದು ಅಧಿಕಾರಿಗಳ ಮೇಲೆ ವಿಶ್ವಾಸ ಮತ್ತು ನಂಬಿಕೆಯನ್ನು ಇಡುವುದು. ಈ ಎರಡನ್ನು ನೀವು ಮಾಡುವುದು ಸಾಧ್ಯವಾದರೆ, ಇದನ್ನು ಮಾಡುವುದಕ್ಕೆ ಸಾಧ್ಯವಿದೆ ಎಂದು ನಾನು ಭಾವನೆ ಮಾಡುತ್ತೇನೆ. ಬಹಳ ಹಿರಿಯರಾದಂಥ ಮತ್ತು ಅನುಭವಿ ಆಡಳಿತಗಾರರಾದಂತಹ ಮಾನ್ಯ ಹುಚ್ಚಮಾಸ್ತಿಗೌಡರು ಇದ್ದಾರೆ, ಶ್ರೀಮತಿ ನಾಗರತ್ನಮ್ಮನವರು ಇದ್ದಾರೆ, ಅವರ ಸಲಹೆಗಳನ್ನು ಕೇಳಿ, ಸುಮ್ಮನೆ ಸಮಿತಿಗಳನ್ನು ಅನೌನ್ಸ್ ಮಾಡಿಕೊಂಡು ಮುಂದಕ್ಕೆ ಹಾಕಬೇಡಿ. ಮತ್ತೆ ೯ನೇ ಪ್ಯಾರಾಗ್ರಾಫ್, ೧೫ನೇ ಪ್ಯಾರಾಗ್ರಾಫ್ ಮತ್ತು ೧೧ನೇ ಪ್ಯಾರಾ ಗ್ರಾಫ್ ನೋಡಿದರೆ ಒಂದು ರೀತಿಯ ದ್ವಂದ್ವ ಇದೆ. ಏನು ದ್ವಂದ್ವ ಎಂದರೆ,

"ಕೆಲವು ಅಪರೂಪದ ನಿದರ್ಶನಗಳನ್ನು ಬಿಟ್ಟರೆ, ನನ್ನ ಸರ್ಕಾರವು ಅಧಿಕಾರ ವಹಿಸಿಕೊಂಡಂದಿನಿಂದಲೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಕೊಂಡು ಬಂದಿದೆ".

ಬಹಳ ದೊಡ್ಡ ಮಾತು, ಸಂತೋಷ. ಎಷ್ಟರಮಟ್ಟಿಗೆ ಇದೆ ಈ ಕಾನೂನು. ಇದನ್ನು ಹೇಳುವುದಕ್ಕೆ ಮುಂಚೆ ೧೧ನೇ ಪ್ಯಾರಾಗ್ರಾಫ್ ಬಗ್ಗೆ ಹೇಳುತ್ತೇನೆ. ೧೧ನೇ ಪ್ಯಾರಾಗ್ರಾಫ್‌ನಲ್ಲಿ ಏನು?

"ಕಳೆದ ಕೆಲವು ತಿಂಗಳುಗಳಲ್ಲಿ, ವಿಶೇಷವಾಗಿ ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳ ಹೊರವಲಯಗಳಲ್ಲಿ ಡಕಾಯಿತಿ ಪ್ರಕರಣಗಳಲ್ಲಿ ಸ್ವಲ್ಪ ಹೆಚ್ಚಳ ಉಂಟಾಗಿದೆ ನನ್ನ ಸರ್ಕಾರವು ಈ ವಿಪತ್ತಿನ ಭಯದ ಬಗ್ಗೆ ಜಾಗೃತಿ ವಹಿಸುವ ಸಲುವಾಗಿ ಅನೇಕ ಕ್ರಮಗಳನ್ನು ಪ್ರಾರಂಭಿಸಲು ಮತ್ತು ಅವುಗಳನ್ನು ಮುಂದುವರಿಸಲು ಉದ್ದೇಶಿಸಿದೆ"

ವಿಪತ್ತು, ಭಯ ಮತ್ತು ಜಾಗೃತಿ ಈ ಎಲ್ಲಾ ಪದಗಳನ್ನೂ ಸೇರಿಸಿ, ಕ್ರಮ ಪ್ರಾರಂಭಿಸುವುದಕ್ಕೆ ಏನು ಮಾಡಿದ್ದೀರಿ. ವಿಶೇಷ ಡಕಾಯಿತಿ ನಿರೋಧಕ ಘಟಕವನ್ನು ನೇಮಕ ಮಾಡಿದ್ದೀರಿ. ಅದೇ ನೀವು ೯ನೇ ಪ್ಯಾರಾಗ್ರಾಫ್‌ನಲ್ಲಿ ಹೇಳಿದಂತೆ, ಕಾನೂನು ಸುವ್ಯವಸ್ಥೆ ಪರಿಣಾಮಕಾರಿಯಾಗಿ ನಿರ್ವಹಿಸಿದ್ದರೆ, ಈ ಘಟಕ ನೇಮಕ ಮಾಡುವಂತಹ ಪರಿಸ್ಥಿತಿ ಏಕೆ ಬರುತ್ತಿತ್ತು. ಇವತ್ತು ಎಷ್ಟೋ ಡಕಾಯಿತಿಗಳು ಆಗಿವೆ. You can understand. ಬೇರೆಯವರಿಗೆ ಅರ್ಥವಾಗುತ್ತದೋ ಇಲ್ಲವೋ ಗೊತ್ತಿಲ್ಲ. ನಿಮಗೆ ಅರ್ಥವಾಗುತ್ತದೆ. ಏಕೆಂದರೆ, ನೀವೂ ಸಹ ನಮ್ಮ ಪರಿಸರದಲ್ಲಿ ಬಂದವರು. ನಮಗೆ ಬರೆದಿರತಕ್ಕಂಥ, with all seriousness I am bringing it to the notice of the Government. ವರದಕ್ಷಿಣೆ ಕಿರುಕುಳದಲ್ಲಿ ಇಲ್ಲಿ ನನಗೆ ಅನೇಕ ಅರ್ಜಿಗಳು ಬಂದಿವೆ ಸರ್ಕಾರಕ್ಕೂ ಬಂದಿವೆ. ಇಷ್ಟು ಜನ ಹೆಣ್ಣುಮಕ್ಕಳ ಬಗ್ಗೆ ಸರ್ಕಾರ ಏನು ಮಾಡುತ್ತಿದೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಒಂದು ಉದಾಹರಣೆ ಕೊಡುತ್ತೇನೆ, "ವರದಕ್ಷಿಣೆ ಕಿರುಕುಳ ಮೂಲಕ ನನ್ನ ಮಗಳು ಶಶಿಕಲಾ ಎಂಬುವಳು, ಮಾವ, ಗಂಡ, ಭಾವ ಇವರ ಕಾಟಕ್ಕೆ ಇಲಿ ಪಾಷಾಣ ತೆಗೆದುಕೊಂಡು ೨೬-೧೨-೮೮ಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದರ ಬಗ್ಗೆ ತನಿಖೆ ಇನ್ನೂ ಮುಗಿದಿಲ್ಲವೆಂದು ಒಬ್ಬರು ಕೂಡಲ ಸಂಗಮದಿಂದ, ಹುನಗುಂದ ತಾಲ್ಲೂಕು, ಬಿಜಾಪುರ ಜಿಲ್ಲೆಯವರು ವಿನಂತಿ ಮಾಡಿಕೊಂಡು ಪತ್ರ ಬರೆಯುತ್ತಾರೆ ನಾನು ದೀರ್ಘವಾಗಿ ಹೇಳುವುದಿಲ್ಲ. ಇದು ೧೯೮೮ರಲ್ಲಿ ನಡೆದುದು. ಇವತ್ತಿನವರೆಗೆ ಇನ್‌ವೆಸ್ಟಿಗೇಷನ್ ಆಗಿಲ್ಲ, ಇದುವರೆಗೂ ಆಗಿಲ್ಲ. ೧೯೮೮-೮೯ರಲ್ಲಿ ನಿಮ್ಮದೇ ಸರ್ಕಾರ, ೧೯೮೯-೯೦ರಲ್ಲಿ

ನಿಮ್ಮದೇ ಸರ್ಕಾರ. ಆಕೆ ಬರೆದಿರುವುದನ್ನು ಹೇಳುತ್ತೇನೆ. ಮತ್ತೆ ೨೩-೩-೯೦ರಲ್ಲಿ ಇನ್ನೊಬ್ಬರು ಬರೆಯುತ್ತಾರೆ. ಡಾ. ಎಸ್. ಜಿ. ಹಿರೇಮಠ್ ಎಂಬುವರು. ಮುಖ್ಯಮಂತ್ರಿಗಳಿಗೆ ೩-೪ ಪತ್ರ ಬರೆದಿದ್ದೇನೆ. ಅದರ ಪಾವತಿ ರಸೀತಿಗಳು ನಮ್ಮಲ್ಲಿ ದಾಖಲೆ ಇವೆ. ಸಿ ಓ.ಡಿ. ಆಫೀಸಿನಲ್ಲಿ ಯಾವುದೇ ತರಹದ ವಿಚಾರ ಎತ್ತಿರುವುದಿಲ್ಲ. ಸಿ. ಓ ಡಿ. ಯವರು ನಮ್ಮಲ್ಲಿ ಬಂದು ವಿಚಾರ ಮಾಡಿಲ್ಲ, ಸಿ. ಓ. ಡಿ. ಇನ್ಸ್‌ಪೆಕ್ಟರ್ ಅವರ ಸಮಕ್ಷಮಕ್ಕೆ ಎರಡು ಮೂರು ಸಲ ತಂದರೂ ಏನೂ ಕ್ರಮ ತೆಗೆದುಕೊಂಡಿಲ್ಲ: ಆದ್ದರಿಂದ ಈ ಕೇಸನ್ನು ಸಿ.ಓ.ಡಿ.ಗೆ ಬದಲಾಗಿ, ಸಿ ಐ.ಡಿ.ಗೆ ನೇಮಿಸಿದರೆ ಒಳ್ಳೆಯದು ಎಂದು ತಿಳಿಸಿದ್ದಾರೆ. ಇದು ಒಂದು. ಮತ್ತೆ ರಂಗಯ್ಯ ಬಿನ್ ಲೇಟ್ ಅಣ್ಣಯ್ಯಪ್ಪ. ಕೆಂಪಾಪುರ ಅಗ್ರಹಾರ, ಬೆಂಗಳೂರು ಇವರು ಮುಖ್ಯಮಂತ್ರಿಯವರಿಗೆ ಈ ರೀತಿ ಪತ್ರ ಬರೆದಿರುತ್ತಾರೆ. "ನನ್ನ ಮಗಳು ನಾಗರತ್ನ ವಯಸ್ಸು ಸುಮಾರು ೨೦. ಮಾಲಿಂಗಪ್ಪ ಎಂಬುವವರ ಪತ್ನಿ. ವರದಕ್ಷಿಣೆ ಕಿರುಕುಳದಿಂದ ಮರಣ ಹೊಂದಿದ್ದು. ಇದರ ಬಗ್ಗೆ ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ಪೋಲೀಸಿನವರು ಯಾವುದೇ ಕ್ರಮವನ್ನು, ನನ್ನ ಮಗಳ ಪತಿ ಹಾಗೂ ಅವರ ಮನೆಯವರ ವಿರುದ್ಧ ಜರುಗಿಸಿರುವುದಿಲ್ಲ, ಈ ಪ್ರಕರಣವನ್ನು ಕ್ರೈಮ್ ನಂ. ೭೦-೯೦, ಐ.ಪಿ.ಸಿ. ಮೇರೆಗೆ ಸಿ.ಓ.ಡಿ.ಗೆ ವರ್ಗಾಯಿಸಬೇಕಾಗಿ ಪ್ರಾರ್ಥನೆ" ಸಿ.ಓ.ಡಿ.ಗೆ ಏತಕ್ಕೆ ನಿಮ್ಮದು ಶಾಸನ ಬಹಳ ಚೆನ್ನಾಗಿ ನಡೆಯುತ್ತದೆ. ಪೋಲೀಸಿನವರ ಮೇಲೆ ನಿಮಗೆ ವಿಶ್ವಾಸ ಇಲ್ಲವೇ ? ಸಂಬಂಧಪಟ್ಟವರು ಈ ರೀತಿ ಬರೆಯುತ್ತಾರೆ. ಕರ್ನಾಟಕ ಸರ್ಕಾರ, ವಿಧಾನಸೌಧ,—ಇಲ್ಲೊಬ್ಬಳು ಹೆಣ್ಣುಮಗಳು ಬರೆಯುತ್ತಾಳೆ.

(ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ವಿಧಾನಸೌಧದ ಅಂಬೇಡ್ಕರ್ ಬೀದಿ ಹತ್ತಿರದಲ್ಲೇ ನಡೆದಿದೆ. ದಿನಾಂಕ ೩-೩-೯೦ ರಂದು ಬೆಂಗಳೂರು ಆಲ್ಬರ್ಟ್ ವಿಕ್ಟರ್ ರಸ್ತೆಯ ಹೋಟೆಲ್ ಮಯೂರ ಪಕ್ಕ ಒಂದು ಅನಾಥ ಶವವನ್ನು ಬೆಳಗಿನ ಜಾವ ೪ ಗಂಟೆ ಸಮಯದಲ್ಲಿ ಕಂಡೆವು. ನಮಗೆ ತಿಳಿದಂತೆ ಈ ಶವ ಕಲಾಸಿಪಾಳ್ಯ ಪೋಲೀಸ್ ಸ್ಟೇಷನ್ ಕ್ರೈಮ್ ನಂಬರ್...ನಲ್ಲಿ ಬರುವ ಮೋಹನ್ ಎಂಬುವರು ಸಿಕ್ಕಾಪಟ್ಟೆ ಹೊಡೆದು ಕೊಲೆ ಮಾಡಿರುವುದು ಎಂದು ತಿಳಿದು ಬಂದಿದೆ ಇದೊಂದು. ನಮ್ಮ ಶ್ರೀರಂಗಪಟ್ಟಣದ ಮಹಿಳಾ ಸದಸ್ಯರು ಇಲ್ಲ. ಅಲ್ಲಿಂದ ಒಬ್ಬ ಮುಸ್ಲಿಮ್ ಬಾಂಧವರ ಇಡೀ ಒಂದು ಕುಟುಂಬ ನನ್ನ ಹತ್ತಿರ ಬಂದಿದೆ. ಅವರು ಹೇಳಿದ್ದು. ನಾನು ಹೇಳುವುದು ಅಲ್ಲ. ಈ ಒಂದು ಪ್ರಕರಣವನ್ನು ನಾನು ಸರಕಾರಕ್ಕೆ ಕೊಡುತ್ತೇನೆ. ಈ ಶ್ರೀರಂಗಪಟ್ಟಣದ ಶಾಸಕರು ಏನಿದ್ದಾರೆ ಅವರ ರಕ್ಷಣೆ ಇದಕ್ಕೆ ಇದೆ. ಅಲ್ಲಿ ಏನು ನಡೆದಿದೆ, ಯಾವ ವರದಕ್ಷಿಣೆ ಸಾವು ಅಲ್ಲಿ ಸಂಭವಿಸಿದೆ, ಅದಕ್ಕೆ ಈ ಶಾಸಕರ ರಕ್ಷಣೆ ಇದೆ ಎಂಬ ದೂರನ್ನು ಅವರು ನಮಗೆ ಹೇಳಿದ್ದಾರೆ. ಆದುದರಿಂದ ಈ ಸರಕಾರ ಕೆಲಸ ಮಾಡುತ್ತಿಲ್ಲ. ಇದು ಶಾಸನ ನಡೆಸ ತಕ್ಕಂಥ ರೀತಿ. ಸರಾಸರಿ ತಿಂಗಳಿಗೆ ೧೧೧೧ —೧೧೧೨ ಮರ್ಡರ್ ಕೇಸ್‌ಗಳು ಈ ರಾಜ್ಯದಲ್ಲಿ ನಡೆಯುತ್ತಿವೆ ಜೊತೆಗೆ ಡಕಾಯಿತಿಗಳು. ಅದರ ವಿವರಕ್ಕೆ ನಾನು ಹೋಗುವುದಿಲ್ಲ ಇವೆಲ್ಲವನ್ನೂ ಇಟ್ಟುಕೊಂಡು ನಮ್ಮ ಮೂರು ತಿಂಗಳ ಆಡಳಿತದಲ್ಲಿ ಕೆಲವು ಅಪರೂಪದ ನಿದರ್ಶನಗಳನ್ನು ಬಿಟ್ಟರೆ ನಾವು ಅಧಿಕಾರ ವಹಿಸಿಕೊಂಡಾಗಿನಿಂದಲೂ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಬಂದಿದ್ದೇವೆಂದು ಹೇಳಿದರೆ ಇದು ಹೇಗೆ ಒಪ್ಪತಕ್ಕಂಥ ಮಾತು. ಇನ್ನು ಮೂಲ ಭೂತವಾಗಿ ೧೫ನೇ ಪ್ಯಾರಾಗ್ರಾಫ್‌ನಲ್ಲಿ "ನಗರ ಗೃಹ ನಿರ್ಮಾಣ ಕ್ಷೇತ್ರದಲ್ಲಿ ನನ್ನ ಸರ್ಕಾರವು ಮುಂಬರುವ ವರ್ಷದಲ್ಲಿ ಕೊಳಚೆ ನಿವಾಸಿಗಳಿಗೆ ಮನೆಗಳನ್ನು ನಿರ್ಮಿಸುವ ಒಂದು ವಿವರವಾದ ಕಾರ್ಯ ಕ್ರಮವನ್ನು ಹಾಕಿಕೊಂಡಿದೆ. ನಗರದ ನಿರುದ್ಯೋಗಿ ಮತ್ತು ಅರೆ ಉದ್ಯೋಗಿ ಬಡಜನರಿಗೆ ಹೊಸ ಉದ್ಯೋಗಾವಕಾಶಗಳನ್ನು ಸೃಜಿಸುವಧ್ಯೇಯೋದ್ದೇಶ ಹೊಂದಿರುವ ಜವಾಹರ್ ರೋಜ್‌ಗಾರ್ ಯೋಜನೆಯನ್ನು ಮುಂಬರುವ ವರ್ಷಗಳಲ್ಲಿ ಅತ್ಯಂತ ಮುತುವರ್ಜಿಯಿಂದ ಕಾರ್ಯಗತಗೊಳಿಸಲಾಗುವುದು". ಎಂದು ಹೇಳಲಾಗಿದೆ, ಇವನ್ನು ಕಾರ್ಯಗತಗೊಳಿಸಿಬಿಟ್ಟರೆ, ಎಲ್ಲರಿಗೂ ಪರಿಹಾರ ಸಿಗುತ್ತದೆ. ಎಷ್ಟು ಜನ ನಿರುದ್ಯೋಗಿಗಳು ರಾಜ್ಯದಲ್ಲಿದ್ದಾರೆಂಬ ನನ್ನ ಪ್ರಶ್ನೆಗೆ ಇವೊತ್ತು ಉತ್ತರ ಹೇಳಿದ್ದಾರೆ.

ಶ್ರೀ ರಮಾನಾಥರೈ.—ನಿರುದ್ಯೋಗಿಗಳು ನೀವು ಇದ್ದಾಗಲೂ ಇದ್ದರು, ನಾವು ಬಂದಾಗಲೂ ಇದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸಂಖ್ಯೆಯನ್ನಾದರೂ ತಿಳಿದುಕೊಳ್ಳಿ. ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಗಳಲ್ಲಿ ನೋಂದಾಯಿಸಿಕೊಂಡಿರುವ ಕುಶಲ ಅಭ್ಯರ್ಥಿಗಳು ೮,೭೨,೮೯೨ ಅಕುಶಲ ೩,೬೩.೨೪೯. ಒಟ್ಟಾರೆ ಸುಮಾರು ಹನ್ನೆರಡೂವರೆ ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ. ಏನು ಉದ್ಯೋಗ ಕೊಡುತ್ತೀರಿ ಇವರಿಗೆ. ಇದಕ್ಕೆ ಏನಾದರೂ ಒಂದು ಕಾರ್ಯಕ್ರಮ ರೂಪಿಸುವುದು ಬೇಡವೇ ? ಜವಾಹರ್ ರೋಜ್‌ಗಾರ್ ಯೋಜನೆಯಿಂದ ಉದ್ಯೋಗ ಕೊಡುತ್ತೇವೆ ಎಂದು ಹೇಳಿದರೆ ಎಲ್ಲಾ ವಿದ್ಯಾವಂತ ಯುವಕರಿಗೆ ಉದ್ಯೋಗ ದೊರಕಿದಹಾಗೆ ಆಗುತ್ತದೆಯೋ ?

ಮಾನ್ಯ ಅಧ್ಯಕ್ಷರೇ, ಇನ್ನೊಂದು ಮುಖ್ಯವಾದ ಅಂಶ. ರಾಜ್ಯದಲ್ಲಿನ ಕೈಗಾರಿಕೆಗಳಲ್ಲಿ ಹಣ ಹೂಡಿಕೆಯು ಕಳೆದ ಕೆಲವು ವರ್ಷಗಳಿಂದ ಒಂದೇ ಸಮನೆ ಕಡಿಮೆಯಾಗುತ್ತಿರುವುದು ನನ್ನ ಸರಕಾರಕ್ಕೆ ತೀವ್ರ ಆತಂಕದ ವಿಷಯವಾಗಿದೆ. ನನ್ನ ಸರ್ಕಾರವು ಕೈಗಾರಿಕಾ ಅಭಿವೃದ್ಧಿಗೆ ಅಗತ್ಯವಾದ ಪ್ರಾಮುಖ್ಯತೆ ನೀಡುವ ಮೂಲಕ ಈ ನಕಾರಾತ್ಮಕ ಪ್ರವೃತ್ತಿಯನ್ನು ತಡೆಗಟ್ಟಲು ಉದ್ದೇಶಿಸಲಾಗಿದೆ. ಇದು ೧೬ನೇ ಪ್ಯಾರಾದಲ್ಲಿ ಹೇಳಿರುವ ಮಾತು. ಇವರು ಇನ್ನೂ ಏನು ಮಾಡುತ್ತಿದ್ದಾರೆ ಎಂದರೆ, ೧೫ನೇ ಪ್ಯಾರಾದಲ್ಲಿ ಹೇಳಿದ್ದಾರೆ. ಕರ್ನಾಟಕದಲ್ಲಿ ಈಗ ೬೨ ಸಾರ್ವಜನಿಕ ವಲಯ ಉದ್ಯಮಗಳಿದ್ದು ಅವುಗಳಲ್ಲಿ ಭಾರಿ ಮೊತ್ತದ ಹಣ ಹೂಡಲಾಗಿದೆ. ತೆರಿಗೆ ಸಂದಾಯದ ನಂತರ ಅವುಗಳಲ್ಲಿ ಕೆಲವು ಮಾತ್ರವೇ ಲಾಭ

೫-೦೦ ಪಿ.ಎಂ.

ಗಳಿಸಿರುವುದು ದುರದೃಷ್ಟಕರ. ಇಂದಿನ ಪರಿಸರ ಹಾಗೂ ಒತ್ತಡಗಳ ಹಿನ್ನೆಲೆಯಲ್ಲಿ ಪ್ರತಿಯೊಂದು ಉದ್ಯಮಗಳ ಸುಸಂಬದ್ಧತೆಯನ್ನು ನಿರ್ಧರಿಸುವ ಸಮಯ ಈಗ ಬಂದಿದೆ. ತೀರಾ ರೋಗಗ್ರಸ್ತವಾದ ಈ ಸಾರ್ವಜನಿಕ ವಲಯದ ಉದ್ಯಮಗಳನ್ನು ನಡೆಸಿಕೊಂಡು ಹೋಗಲು ರಾಜ್ಯದ ಅತ್ಯಮೂಲ್ಯ ಸಂಪನ್ಮೂಲಗಳನ್ನು ಬಳಸುವುದು ಸರಿಯಲ್ಲ. ಬೇಸಿಕ್ ಕಾನ್‌ಸೆಪ್ಟ್ ಬಗ್ಗೆ ನಾವು ರಾಜ್ಯಾಂಗದ ಪ್ರಿಯಾಂಬಲ್‌ನಲ್ಲಿ ಏನು ಹೇಳಿದ್ದೇವೆಂದರೆ,

> "We the people of India having sol+mnly resolved to constitute India into a sovereign, socialist, secular, democratic republic"

'Sov-reign Democratic Republic'. ಎಂದು ಇದ್ದಿದ್ದಕ್ಕೆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಎಂದು ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದಲ್ಲಿ ಈ ರಾಜ್ಯಾಂಗದ ಬದಲಾವಣೆ ಆಯಿತು. ಸೋಷಿಯಲಿಸ್ಟಿಕ್ ಸಮಾಜವಾದಿ ಸಿದ್ಧಾಂತ ಅನ್ನುವ ಮಾತನ್ನು ಏತಕ್ಕೆ ಇಲ್ಲಿ ಸೇರಿಸಿದ್ದೀರಿ" The means of production: The State should own the means of production. ಉತ್ಪಾದನೆಯ ಮೂಲವನ್ನು ರಾಜ್ಯಗಳು ಅಥವಾ ಕೇಂದ್ರ ನಡೆಸತಕ್ಕಂಥ ಸರ್ಕಾರ ವಹಿಸಿಕೊಳ್ಳಬೇಕೆನ್ನುವ ಕಾರಣದಿಂದ ಈ ಪದವನ್ನು ಸೇರಿಸಿದ್ದೀರಿ. ಇವೊತ್ತು ಈ ಮೂಲ ಉದ್ದೇಶಕ್ಕೆ ವಿರುದ್ಧವಾಗಿ ಖಾಸಗೀಕರಣದ ಮಾತನ್ನು ಈ ಭಾಷಣದಲ್ಲಿ ಹೇಳಿದ್ದೀರಿ ಯಾವ ಮೂಲ ಭೂತ ಸಿದ್ಧಾಂತಕ್ಕಾಗಿ ನಾವು ೩-೪ ದಶಕಗಳ ಕಾಲ ಹೋರಾಟ ಮಾಡಿಕೊಂಡು ಬಂದಿದ್ದೇವೆ. ನಾವು ಮೂಲಭೂತ ಸಿದ್ಧಾಂತವನ್ನು ಒಪ್ಪಿಕೊಂಡು ಮೆಚ್ಚಿಕೊಂಡು ಅಪ್ಪಿಕೊಂಡು ರಾಜ್ಯಾಂಗದಲ್ಲಿ ಸೇರಿಸಿದ್ದೇವೆ. ಆ ರಾಜ್ಯಾಂಗಕ್ಕೆ ತದ್ವಿರುದ್ಧವಾಗಿರತಕ್ಕಂಥ ಭಾಷೆಯನ್ನು ರಾಜ್ಯಪಾಲರ ಭಾಷಣದಲ್ಲಿ ನೀವು ಬಳಸಿದ್ದೀರಿ. ಹೀಗೆ ಬಳಸುವಾಗ ನಾವು ಹಮ್ಮಿಕೊಂಡಿರತಕ್ಕ ಹಾಕಿಕೊಂಡಿರತಕ್ಕ ಪ್ರಿಯವಾಗಿರತಕ್ಕಂತಹ ನಮ್ಮ ಮೂಲಭೂತ ಸಿದ್ಧಾಂತ ಏನು ಇತ್ತು, ಈ ಒಂದು ಉತ್ಪಾದನಾ ಮೂಲಗಳು ಏನಿದ್ದವು, What is socialism and what is the difference between socialism and communism, I don't want to go into the merits and demerits but at least ಮೂಲ ಸಿದ್ಧಾಂತವನ್ನು, ಅಂದರೆ ನಾವು ಸಮಾಜವಾದಿ ಸಿದ್ಧಾಂತವನ್ನು ಒಪ್ಪಿಕೊಂಡು ರಾಜ್ಯಾಂಗದಲ್ಲಿ ಅದನ್ನು ಅಳವಡಿಸಿದ ಮೇಲೆ ಅದಕ್ಕೆ ತದ್ವಿರುದ್ಧವಾಗಿ ಈ ಪದವನ್ನು ಈ ಸರ್ಕಾರ ಬಳಸಿಕೊಂಡಿದೆ. ಅದನ್ನು ಸಮರ್ಥಗೊಳಿಸುವ ಸಂಬಂಧವಾಗಿ ಲಭ್ಯವಿರುವ ಎಲ್ಲಾ ಪರ್ಯಾಯ ಕ್ರಮಗಳನ್ನು ಅಂದರೆ ಏನು ಇದನ್ನು ಖಾಸಗೀ ವಲಯಕ್ಕೆ ಕೊಡುತ್ತೀರೋ, ಹಾಗೆ ಕೊಡುವಾಗ ರಾಜ್ಯಾಂಗದಲ್ಲಿ ನಾವು ಕೊಟ್ಟಿರತಕ್ಕಂಥ ಮಾತಿಗೆ ಮತ್ತು ನಾವು ಹಮ್ಮಿಕೊಂಡಿರುವ ತತ್ವ ಹಾಗೂ ಸಿದ್ಧಾಂತಕ್ಕೆ ವಿರುದ್ಧ ಆಗುವುದಿಲ್ಲವೇ ? ಈ ಇಂಡಸ್ಟ್ರಿಗಳಿಂದ ೬೦೦ ಕೋಟಿ ರೂಪಾಯಿಗಳಷ್ಟು ನಷ್ಟವಾಗುತ್ತಿದೆ ನಿಜ. ನಷ್ಟವಾಗುತ್ತಿಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲಿ ನಷ್ಟವಾಗುತ್ತದೆ. ಏತಕ್ಕೆ ನಷ್ಟವಾಗುತ್ತದೆ ಎನ್ನುವುದನ್ನು ಪರಿಶೀಲನೆ ಮಾಡಿ. ಇದಕ್ಕೆ ತಾವು ಒಂದು ಸಮಿತಿ ನೇಮಕ ಮಾಡಿ ಆ ಸಮಿತಿಯಲ್ಲಿ ತಜ್ಞರು ಇರಲಿ ಎಲ್ಲಿ ದೋಷಗಳು ಇವೆ ಅವುಗಳನ್ನು ಸರಿಪಡಿಸಲು ನಮ್ಮ ಸಂಪೂರ್ಣ ಸಹಕಾರ ಇದೆ. ಆದರೆ ಈ ದೋಷ ಇದೆ ಎಂದು.............

ಶ್ರೀ ಕಾಗೋಡು ತಿಮ್ಮಪ್ಪ.—ತಜ್ಞರ ಸಮಿತಿ ನೇಮಕ ಮಾಡಲು ಒಪ್ಪಿಕೊಂಡಿದ್ದಾರಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಬಜೆಟ್ ಚರ್ಚೆ ಮೊದಲು ಆಗಿದೆ. ಆಮೇಲೆ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಮಾಡಿದ ಕರ್ಮದ ಫಲ ನೀವು ಅನುಭವಿಸುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ.—ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇನ್ನೂ ಅನೇಕ ವಿಚಾರಗಳು ಇದ್ದರೂ ಸಹ ನಾನು ಆ ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮೂಲಭೂತವಾಗಿ ನಾನು ಪ್ರಾರಂಭಿಕವಾಗಿ ಹೇಳಿದಹಾಗೆ ಈ ರಾಜ್ಯಪಾಲರ ಭಾಷಣ ಒಂದು ಸಾಂಪ್ರದಾಯಿಕ ಭಾಷಣದಂತೆ ನಾವು ಈ ಸದನದಲ್ಲಿ ಸಾಂಪ್ರದಾಯಿಕವಾಗಿ ಚರ್ಚೆ ಮಾಡತಕ್ಕಂಥ ಪ್ರವೃತ್ತಿಸಲ್ಲದು. ಇದು ನೀತಿ ನಿರೂಪಣೆ ಮಾಡತಕ್ಕಂಥಾ ಒಂದು ದಾಖಲೆ ಇದರ ಬಗ್ಗೆ ಆಯವ್ಯಯ ಕ್ಷೀತ ಮುಂಚಿತವಾಗಿ ಚರ್ಚೆ ಮಾಡಿದರೆ ಅದಕ್ಕೆ ಸಾಕಷ್ಟು ಪ್ರಖರತೆ ಮತ್ತು ಒತ್ತು ಕೊಟ್ಟಂತೆ ಆಗುತ್ತದೆ. ಆ ಕೆಲಸವನ್ನು ಸನ್ನಿವೇಶದ ಒತ್ತಡದಲ್ಲಿ ನಾವು ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ—ನೀವು ಒಪ್ಪಿಕೊಂಡಿದ್ದು ತಾನೆ.

ಶ್ರೀ ಡಿ.ಬಿ. ಚಂದ್ರೇಗೌಡ,—ಹಾಗಾದರೆ ನಾವು ನಿಮ್ಮ ಜೊತೆ ಸಹಕರಿಸಿದ್ದು ತಪ್ಪಾಯಿತೆಂದು ಕಾಣುತ್ತದೆ.

ಅಧ್ಯಕ್ಷರು.—ಈಗ ಅದರಿಂದೇನೂ ಫಲ ಬರುವುದಿಲ್ಲ. ಆಗಿದ್ದು ಆಗಿ ಹೋಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಆದ್ದರಿಂದ ಒಟ್ಟಿನಲ್ಲಿ ಈ ಸರ್ಕಾರ ಪುನಃ ನಾನು ಹೇಳುತ್ತಿದ್ದೇನೆ, ಶೀಘ್ರವಾಗಿ ಆಲೋಚನೆ ಮಾಡುತ್ತದೆ. ದಯಮಾಡಿ ಆಲೋಚನೆ ಮಾಡಿ ತೀರ್ಮಾನ ಮಾಡತಕ್ಕಂತಹ ನಿಯಮಗಳನ್ನು ಹಾಕಿಕೊಳ್ಳಲಿ ಎನ್ನುವ ಮಾತನ್ನು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಇನ್ನೂ ಒಂದು ಖಾಸಗಿ ನಿರ್ಣಯ ಇದೆ. ಅದು ಗ್ರಾನೇಟ್ ಕಲ್ಲುಗಳನ್ನು ತೆಗೆಯುತ್ತಿರುವ ಬಗ್ಗೆ ಇದೆ. ಅದರ ಬಗೆ ಸಾಕಷ್ಟು ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು.—ಈಗ ಅದನ್ನು ತೆಗೆದುಕೊಳ್ಳಬೇಕಾ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಜೆಂಡಾದಲ್ಲಿ ಖಾಸಗಿ ನಿರ್ಣಯ ಮಂಡಿಸುವುದು ಇದೆ. ಈಗಾಗಲೇ ಅದು ಎರಡು ಸಾರಿ ಪೋಸ್ಟ್‌ಪೋನ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ವಿರೋಧ ಪಕ್ಷದನಾಯಕರ ಚರ್ಚೆ ಮುಗಿದ ನಂತರ ಕೊನೆಯಲ್ಲಿ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದರು. ನಾನು ನಿರ್ಣಯ ಮಂಡಿಸುತ್ತೇನೆ. ನಂತರ ಅವರು ಮಾತನಾಡಲಿ.

ಅಧ್ಯಕ್ಷರು,—ಮಾನ್ಯ ವೆಂಕಟಪ್ಪನವರದ್ದು ಆಗಲಿ.

† ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನನ್ನ ವಂದನೆಗಳನ್ನು ಅರ್ಪಿಸುತ್ತಾ ಕೆಲವು ಅತಿ ಜರೂರಾದ ವಿಷಯಗಳನ್ನು ಹೇಳಬೇಕೆಂದು ನನಗನಿಸುತ್ತದೆ. ಮೊದಲನೆಯದಾಗಿ 'ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಗೆ ನನ್ನ ಸರ್ಕಾರ ತೀವ್ರ ಗಮನ ಸೆಳೆದಿದೆಯೆಂದು ಹೇಳಿ ಹೈದರಾಬಾದ್ ಕರ್ನಾಟಕಕ್ಕೆ ಒಂದು ಅಭಿವೃದ್ಧಿ ಮಂಡಳಿಯನ್ನು ಮಾಡಬೇಕೆಂದು ಮಾಡಿದ್ದಾರೆ. ಬಹಳ ಸಂತೋಷ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ ಎಂದು ಅನೇಕ ಮಂಡಳಿಗಳನ್ನು ಮಾಡುವುದರಲ್ಲಿ ನಮ್ಮದು ಯಾವ ಒಂದು ಅಭ್ಯಂತರವೂ ಇಲ್ಲ. ಆದರೆ, ಇವತ್ತಿನ ದಿವಸ ಈ ಮೈದಾನ ಪ್ರದೇಶದ ಬಗ್ಗೆ, ಉದಾಹರಣೆಗೆ ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳು, ರಾಯಲ್ ಸೀಮಾ ಏರಿಯಾ ಎಂದು ಏನಿದೆ, ಅದಕ್ಕೆ ತೆಲುಗಿನಲ್ಲಿ ರಾಯಲ ಸೀಮಾ ಎಂದರೆ, ಕನ್ನಡಕ್ಕೆ ಅದನ್ನು ತರ್ಜುಮೆ ಮಾಡಿದರೆ ಅದು ಕಲ್ಲು ಪ್ರದೇಶವಾಗುತ್ತದೆ. ಈ ಪ್ರದೇಶಗಳಲ್ಲಿ ಓಡಾಡುತ್ತಾ ಇದ್ದರೆ ಎಲ್ಲಿ ನೋಡಿದರೂ ಬೆಟ್ಟ ಗುಡ್ಡಗಳು ಕಾಣಿಸುತ್ತವೆ. ಕೋಲಾರ ಜಿಲ್ಲೆಯಾಗಲೀ, ಅಥವಾ ತುಮಕೂರು ಜಿಲ್ಲೆಯಾಗಲೀ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಾಗಲೀ ಯಾವುದೂ ಕೃಷ್ಣಾ ನದಿ ಇಲ್ಲ, ಕಾವೇರಿ ನದಿ ಇಲ್ಲ. ಇರುವ ಅಲ್ಪ ಸ್ವಲ್ಪ ಚಿಕ್ಕ ನದಿಗಳೆಂದರೆ, ಪಾಲರ್ ಉತ್ತರ ಪಿನಾಕಿನಿ, ಅರ್ಕಾವತಿ, ಅದೂ ಏನು ಮಳೆಗಾಲದಲ್ಲಿ ಮಾತ್ರ ಇವು ಹರಿಯುತ್ತವೆ. ಸುಮಾರು ಸೆಪ್ಟಂಬರ್‌ನಲ್ಲಿ ಪ್ರಾರಂಭವಾಗಿ ಅಕ್ಟೋಬರ್, ನವೆಂಬರ್‌ನಲ್ಲಿ ಎಲ್ಲಾ ನೀರು ಮುಗಿದು ಹೋಗುತ್ತದೆ. ಈ ರೀತಿ ಇರುವಾಗ ಮೈದಾನ ಪ್ರದೇಶಗಳಲ್ಲಿ ಸುಮಾರು ೩೦ ಇಂಚು ಮಳೆ ಬರುತ್ತದೆ. ಈ ಜಿಲ್ಲೆಗಳಲ್ಲಿ ೨೫ ರಿಂದ ೩೦ ಇಂಚು ಮಳೆ ವರ್ಷ ವರ್ಷ ಬರುತ್ತದೆ. ನಾವು ೬೦ ವರ್ಷದ ೧೦೦ ವರ್ಷದ ಮಳೆಯೆಲ್ಲ ತೆಗೆದುಕೊಂಡರೂ ಸರಾಸರಿ ೨೫ ರಿಂದ ೩೦ ಇಂಚು ಮಳೆ ಬೀಳುತ್ತದೆ, ಈ ೩-೪ ಜಿಲ್ಲೆಗಳು ಒಂದು ದೊಡ್ಡ ಆಲದ ಮರದ ಕೆಳಗೆ ಇದ್ದಹಾಗೆ. ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಆಗಲೀ, ಕೋಲಾರ ಜಿಲ್ಲೆ ಆಗಲೀ, ತುಮಕೂರು ಜಿಲ್ಲೆ ಆಗಲೀ, ಈ ದೊಡ್ಡ ಆಲದಮರದ

ಕೆಳಗೆ ಏನೂ ಬೆಳೆಯುವುದಿಲ್ಲ. ಚಿತ್ರದುರ್ಗದ ಕೆಲವು ಭಾಗಗಳನ್ನು ಅಂದರೆ ದಾವಣಗೆರೆ, ಹರಿಹರ ಬಿಟ್ಟು ಎಲ್ಲೆಲ್ಲಿ ತುಂಗಭದ್ರ ಕಾಲುವೆ ಹರಿಯುತ್ತದೆಯೋ ಅದು ಬಿಟ್ಟು ಮಿಕ್ಕ ಭಾಗಗಳನ್ನು ಸೇರಿಸಿ ಕೊಂಡರೆ ಮೊಳಕಾಲ್ಮೂರು ಅತ್ತ ಕಡೆ ಚಳ್ಳಕೆರೆ ಇವೆಲ್ಲಾ ಇದೆಯುಲ್ಲಾ, ಈ ಭಾಗಗಳೆಲ್ಲಾ ಸೇರಿ ಒಂದು ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ ಎಂದು ಮಾಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಇದನ್ನು ಸಾಧ್ಯವಾದಷ್ಟು ಬೇಗನೆ ಮಾಡಬೇಕು. ಕಾರಣ ಇಷ್ಟೇ. ಆ ಪ್ರದೇಶಗಳಲ್ಲಿ ವರ್ಷ ವರ್ಷ ಕ್ಷಾಮ ಬರುವುದು. ಸುಮಾರು ನಾನು ವಿಧಾನಪರಿಷತ್ತಿಗೆ ಚುನಾಯಿತನಾಗಿ ೨೪ ವರ್ಷವಾಯಿತು. ಆವತ್ತಿನಿಂದ ನಡೆಯುತ್ತಿದೆ. ಪ್ರತ್ರಿಯೊಂದು ಸಾರಿ ನಾವು ವಿಧಾನಪರಿಷತ್ತಿನಲ್ಲಿ ನಾನು ಛೇರ್ಮನ್ ಆಗುವುದಕ್ಕಿಂತ ಮೊದಲು ೮ ವರ್ಷ ಕಾಲ ಸದಸ್ಯನಾಗಿದ್ದಾಗ ವರ್ಷ ವರ್ಷವೂ ನಾನು ಈ ಬಗ್ಗೆ ಮಾತನಾಡುತ್ತಿದ್ದೆ. ಏನು ಈ ಮೈದಾನ ಪ್ರದೇಶಗಳಲ್ಲಿ ಕ್ಷಾಮ ಬರುತ್ತದೆ ಅದಕ್ಕೆ ಏನಾದರೂ ಒಂದು ಔಷಧಿ ಹುಡುಕಬೇಕೆಂಬುದು. ಕ್ಷಾಮ ಬಂದಾಗ ಏನೋ ಒಂದಿಷ್ಟು ರಿಲೀಫ್ ಕೊಟ್ಟುಬಿಡುವುದು ಅಥವಾ ಕೆರೆ ಕುಂಟೆಗಳಾಗುವುದು ಅಥವಾ ಕೆರೆಗಳ ಹೂಳು ಎತ್ತುವುದು ಈ ರೀತಿ ಮಾಡಿದರೆ ನಮಗೆ ಅನುಕೂಲ ಆಗುವುದಿಲ್ಲ. ಈ ೩-೪ ಜಿಲ್ಲೆಗಳನ್ನು ಸೇರಿಸಿ ಒಂದು ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಮಾಡಬೇಕೆಂದು ನಾನು ಎಷ್ಟೋ ಸಾರಿ ಹೇಳಿದೆ. ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ ಮಾಡಿದ ಮೇಲೆ ಈವಾಗ ಉದಾಹರಣೆಗೆ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ೪೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಕೊಡಬೇಕು ಈ ಜಿಲ್ಲೆಗಳಲ್ಲಿ ರಾ-ಮೆಟೀರಿಯಲ್ ಏನು ಸಿಗುತ್ತದೋ, ಇವತ್ತು ಕೋಲಾರ ಜಿಲ್ಲೆಯಲ್ಲಿ ಸಿಲ್ಕ್ ಮತ್ತು ಮಿಲ್ಕ್ ಬೇಕಾದಷ್ಟು ಸಿಗುತ್ತದೆ. ಸುಮಾರು ೩ ಲಕ್ಷ ಲೀಟರ್‌ನಷ್ಟು ಮಿಲ್ಕ್ ಬೆಂಗಳೂರು ಡೈರಿಗೆ ಸೇರುತ್ತದೆ. ಕೋಲಾರ ಜಿಲ್ಲೆ ಒಂದರಿಂದಲೇ ೩ ಲಕ್ಷ ಲೀಟರ್ ಮಿಲ್ಕ್ ಅಂದರೆ ಹಾಲು ಬೆಂಗಳೂರು ಡೈರಿಗೆ ಸೇರುತ್ತದೆ. ತುಮಕೂರು ಜಿಲ್ಲೆಯಿಂದ ೨ ಲಕ್ಷ ಲೀಟರ್ ಬರುತ್ತದೆ. ಬೆಂಗಳೂರು ರೂರಲ್ ಜಿಲ್ಲೆಯಿಂದ ೨ ಲಕ್ಷ ಲೀಟರ್ ಬರುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ನಮ್ಮ ಜಿಲ್ಲೆಯಿಂದ ವರ್ಷಕ್ಕೆ ೪೫ ಕೋಟಿ ರೂಪಾಯಿ ಬೆಲೆ ಆಗುವಂಥ ಹಾಲನ್ನು ಬೆಂಗಳೂರಿಗೆ ಕಳುಹಿಸಿಕೊಡುತ್ತಿದ್ದೇವೆ. ಹಣ್ಣು ತರಕಾರಿಗಳು ಇವತ್ತಿನ ದಿವಸ ಕೋಲಾರ ಜಿಲ್ಲೆಯವರು ಮನಸ್ಸು ಮಾಡಿದರೆ ಬೆಂಗಳೂರಿನಲ್ಲಿ ಬೆಳಿಗ್ಗೆ ನಿಮಗೆ ಯಾರಿಗೂ ಕಾಫಿ ಇಲ್ಲದಂತೆ ಮಾಡಬಹುದು. ನಾವು ಹಾಲು ಕಳುಹಿಸಿದರೆ ತಾನೇ ನೀವೆಲ್ಲಾ ಕಾಫಿಯನ್ನು ಕುಡಿಯಬೇಕಾಗಿದ್ದು. ಮತ್ತು ಹಣ್ಣು ಹಂಪಲು. ತರಕಾರಿಗಳನ್ನು ಕಳುಹಿಸಿದರೆ ತಾನೆ ನೀವು ಉಪಯೋಗಿಸುವುದು ? ನನಗಾದರೂ ಅನಿಸುತ್ತದೆ, ಮೊನ್ನೆತಾನೆ ಪತ್ರಿಕೆಯಲ್ಲಿ ಓದಿದೆ. ಕೋಲಾರ ಚಿನ್ನದ ಗಣಿಯಲ್ಲಿ ಸುಮಾರು ಈ ಚಿನ್ನದ ಗಣಿ ಪ್ರಾರಂಭ ಮಾಡಿದಾಗಲಿನಿಂದ ೨೬ ಸಾವಿರದ ಐನೂರು ಕೋಟಿ ಬೆಲೆಬಾಳುವಂಥ ಚಿನ್ನವನ್ನು ಉತ್ಪತ್ತಿ ಮಾಡಿದ್ದೇವೆ. ಚಿನ್ನದ ಗಣಿ ಪ್ರಾರಂಭವಾಗಿ ಸುಮಾರು ೧೫೦ ವರ್ಷ ಆಯಿತಲ್ಲಾ, ಆವತ್ತಿನಿಂದ ೨೬ ಸಾವಿರದ ೫ ನೂರು ಕೋಟಿ ರೂಪಾಯಿ ಆಗುವಷ್ಟು ಚಿನ್ನವನ್ನು ಕೊಟ್ಟಿದ್ದೇವೆ.

ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದು ಮೂರು ತಿಂಗಳಾಗಿದೆ. ಇವರು ಏನು ಮಾಡುತ್ತಾರೆಂದು ಕಾದು ನೋಡುತ್ತೇವೆ. ಹಿಂದಿನ ಸರ್ಕಾರ ಏನು ಮಾಡಿದೆ ಎಂದುಗೊತ್ತಿದೆ. ಅದಕ್ಕೋಸ್ಕರ ಈ ಜಿಲ್ಲೆಗಳಿಗೆಂದು ಒಂದು ಪ್ರತ್ಯೇಕ ಅಭಿವೃದ್ಧಿ ಮಂಡಲಿ ಮಾಡಿದರೆ ಅಲ್ಲಿನ ಜನರು ಹೈನುಗಾರಿಕೆ ಮತ್ತು ರೇಷ್ಮೆ ವ್ಯವಸಾಯದ ಮೂಲಕ ಅಭಿವೃದ್ಧಿ ಹೊಂದಬಹುದು. ಸಿಲ್ಕ್, ಮಿಲ್ಕ್ ಇಲ್ಲದೇ ಹೋದರೆ ನಮ್ಮ ಜಿಲ್ಲೆಯಲ್ಲಿ ಲೋಯರ್ ಮಿಡ್ಲ್‌ಕ್ಲಾಸಿಗೆ ಸೇರಿದ ಹರಿಜನರಿಗಾಗಲಿ ಅಥವಾ ಬ್ಯಾಕ್‌ವರ್ಡ್ ಕ್ಲಾಸ್ ಅವರಾಗಲೀ ಖಂಡಿತವಾಗಿ ಬದುಕುವುದಕ್ಕೆ ಆಗುತ್ತಿರಲಿಲ್ಲ. ಜನರು ಕ್ಷಾಮ ಬಂದು ಸಾಯುತ್ತಿದ್ದರು. ನಮ್ಮ ಜಿಲ್ಲೆಯಲ್ಲಿ ಭತ್ತ ಬೆಳೆಯೊಲ್ಲ. ನಮ್ಮಲ್ಲಿ ದೊಡ್ಡ ಕೆರೆಗಳಿವೆ. ದೊಡ್ಡವು ಚಿಕ್ಕವು ಎಲ್ಲಾ ಸೇರಿ ನಾಲ್ಕು ಸಾವಿರ ಕೆರೆಗಳಿವೆ. ಅದಕ್ಕಾಗಿ ಒಂದು ಅಭಿವೃದ್ಧಿ ಮಂಡಳಿ ಮಾಡಿ. ಡ್ಯಾನಿಷ್‌ನವರು ೮ ಕೋಟಿ ರೂಪಾಯಿಗಳ ಫ್ರೂಟ್ ಪ್ರೋಸೆಸಿಂಗ್ ಯೂನಿಟ್ ಅನ್ನು ಕರ್ನಾಟಕದಲ್ಲಿ ಪ್ರಾರಂಭ ಮಾಡುವವರಿದ್ದಾರೆ ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೆ. ಅದನ್ನು ಕೋಲಾರ ಅಥವಾ ಬೆಂಗಳೂರು ಜಿಲ್ಲೆಯ ಮಧ್ಯದಲ್ಲಿ ಪ್ರಾರಂಭ ಮಾಡಬಹುದು. ಏಕೆಂದರೆ ನಮ್ಮಲ್ಲಿ ೭೫ ಸಾವಿರ ಎಕರೆ ತೋಟ ಇದೆ. ೫೦ ಸಾವಿರ ಎಕರೆಗಳಷ್ಟು ಮಾವಿನ ತೋಟ ಇದೆ. ನಮ್ಮ ಮುಳಬಾಗಿಲು ಒಂದೇ ತಾಲ್ಲೂಕಿನಲ್ಲೇ ೧೫ಸಾವಿರ ಎಕರೆ ಇದೆ. ಚಿಂತಾಮಣಿಯಲ್ಲಿದೆ, ಶ್ರೀನಿವಾಸಪುರದಲ್ಲಿದೆ, ಚನ್ನಪಟ್ಟಣ, ರಾಮನಗರ, ತುಮಕೂರು ಜಿಲ್ಲೆಯ ಶಿರಾ, ಪಾವಗಡ, ಕನಕಪುರ ಹೀಗೆ ಎಲ್ಲ ಕಡೆ ಸೇರಿ ಸುಮಾರು ೭೫ ಸಾವಿರ ಎಕರೆ ತೋಟಗಾರಿಕೆ ಇದೆ. ಹಣ್ಣು ತರಕಾರಿ ಇಲ್ಲದಿದ್ದರೆ ಬೆಂಗಳೂರಿನಲ್ಲಿ ಜೀವನವೇ ಇಲ್ಲ. ಈಗ ಬೆಂಗಳೂರು ಜೊತೆಗೆ ಇಲ್ಲಿಂದ ಕಲ್ಕತ್ತ, ವಿಜಯವಾಡ ಮುಂತಾದ ಕಡೆಗೂ ತರಕಾರಿ ಹಣ್ಣುಗಳನ್ನು ರಫ್ತು

ಮಾಡಲಾಗುತ್ತಿದೆ. ಆದ್ದರಿಂದ ಈ ಹಣ್ಣಿನ ಪ್ರೋಸೆಸಿಂಗ್ ಯೂನಿಟನ್ನು ಕೋಲಾರದಲ್ಲೇ ಪ್ರಾರಂಭ ಮಾಡಬೇಕು. ಏಕೆಂದರೆ ಬೆಂಗಳೂರಿನಲ್ಲಿ ಬೇಕಾದಷ್ಟು ಇವೆ. ಆ ಮೇಲೆ ಕೋಲ್ಡ್ ಸ್ಟೋರೇಜ್ ಪ್ರಾರಂಭ ಮಾಡಬೇಕು. ಏಕೆಂದರೆ ಇದು ಇಲ್ಲದಿರುವುದರಿಂದ ಇವತ್ತು ನೂರಾರು ಕೋಟಿ ಬೆಲೆಬಾಳುವ ಆಲೂಗೆಡ್ಡೆ ಬೆಳೆ ಕೆಟ್ಟು ಹೋಗಿ ನಮ್ಮ ಜಿಲ್ಲೆಯವರಿಗೆ ಅನ್ಯಾಯ ಆಗಿದೆ. ರೇಷ್ಮೆ ರೀಲಿಂಗ್ ಸೆಂಟರ್‌ನ್ನು ಪ್ರಾರಂಭ ಮಾಡಬೇಕು ಮತ್ತು ಹೈನುಗಾರಿಕೆ ಅಭಿವೃದ್ಧಿಗೆ ವ್ಯವಸ್ಥೆ ಮಾಡಬೇಕು. ಹೀಗೆ ಎಲ್ಲ ವಿಧವಾದಂಥ ಸಹಾಯ ಸಹಕಾರಗಳು ನಮ್ಮ ಜಿಲ್ಲೆಗೆ ಆಗಬೇಕು. ಈಗ ಗುಜರಾತಿನಲ್ಲಿ ಆನಂದ್ ಎಂಬ ಮಿಲ್ಕ್ ಡೈರಿ ಇದೆ. ಅದೇ ರೀತಿ ಬೆಂಗಳೂರಿನಲ್ಲಿ ಮತ್ತು ಕೋಲಾರದಲ್ಲಿ ವೈಟ್ ರೆವಲ್ಯೂಷನ್, ಸಿಲ್ಕ್ ರೆವಲ್ಯೂಷನ್ ಮಾಡಿದರೆ ಅಲ್ಲಿ ಸಿಗುವ ಕಚ್ಚಾ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ನಾವು ಮುಂದುವರೆಯಬಹುದು.

ಇದರಿಂದ ನಮ್ಮ ಬಡ ಜನತೆಗೆ ಉಪಯೋಗವಾಗುತ್ತದೆ. ಮತ್ತೆ ೨೧ನೇ ಐಟಂನಲ್ಲಿ ರಾಜ್ಯಪಾಲರು ಏನು ಹೇಳತ್ತಾರೆಂದರೆ ಕೆರೆಗಳಲ್ಲಿ ಹೂಳು ಎತ್ತಬೇಕಾಗಿದೆ ಎಂದು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನಾಲ್ಕು ಸಾವಿರ ಕೆರೆಗಳಿವೆ, ಬಹುಶ: ೨೦೦ ಕೆರೆಗಳಲ್ಲಿ ಒಂದು ಬೆಳೆ ಆಗುತ್ತದೆ. ಇನ್ನು ಮೂರು ಸಾವಿರ ಚಿಲ್ಲರೆ ಕೆರೆಗಳಲ್ಲಿ ಒಂದು ಬತ್ತ ಬೆಳೆ ಆಗಬೇಕಾದರೆ ಎರಡು ಸಲ ನೀರು ತುಂಬಬೇಕು. ಆ ಕೆರೆಗಳೂ ಕೂಡ ಚೋಳರ ಕಾಲದ್ದು. ಸಾವಿರ ವರ್ಷಗಳ ಹಿಂದೆ ಕಟ್ಟಿದ ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ ನಮ್ಮ ಕೆರೆಗೆ ತೂಬುಗಳಲ್ಲಿ ನರಿಗಳು ಯಾವಾಗಲೂ ಮಲಗಿಕೊಂಡಿರುತ್ತವೆ ಎಂದು ನಮ್ಮ ಕಡೆಗಾದೆ ಮಾತಿದೆ. ಏಕೆಂದರೆ ಕೆರೆಗಳಲ್ಲಿ ನೀರು ಇರುವುದಿಲ್ಲ. ಆದ್ದರಿಂದ ತೂಬಲ್ಲಿ ನೀರು ಹೋಗುವುದೇ ಇಲ್ಲ. ಅದಕ್ಕೋಸ್ಕರ ನರಿಗಳು ಮಲಗಿರುತ್ತವೆಂದು ಹೇಳುತ್ತಾರೆ. ಮಾತು ಎತ್ತಿದರೆ ನಮ್ಮ ಇಂಜಿನಿಯರ್‌ಗಳು ಹೂಳು ಎತ್ತುವುದಕ್ಕಿಂತ ಹೊಸ ಕೆರೆ ಕಟ್ಟುವುದೇ ಒಳ್ಳೆಯದೆಂದು ರೆಡಿ ಉತ್ತರ ಕೊಡುತ್ತಾರೆ. ಈ ರೀತಿ ಹೇಳಿಬಿಟ್ಟರೆ ಬೆಂಗಳೂರು ಮತ್ತು ಕೋಲಾರದ ಜನರು ಏನು ಮಾಡುವುದು ? ವರ್ಲ್ಡ್ ಬ್ಯಾಂಕಿನಿಂದಾದರೂ ಲೋನ್ ತೆಗೆದುಕೊಂಡು ಬರಲಿ. ಕೆಲವು ಕೆರೆಗಳಿವೆ. ನಾಲ್ಕು ತಿಂಗಳು ನೀರಿರುತ್ತದೆ. ಒಂದು ತಿಂಗಳಲ್ಲಿ ನೀರು ಸಾಲುವುದಿಲ್ಲ. ರೈತರು ಆಗ ಆಕಾಶ ನೋಡುತ್ತಾರೆ. ಕೊನೆಯ ತಿಂಗಳಲ್ಲಿ ನೀರು ಮಳೆ ಮೂಲಕ ಸಿಗದೇ ಹೋದರೆ ಳತೀಗಳ ಬೆಳೆಯೂ ನಾಶವಾಗಿ ಹೋಗುತ್ತದೆ. ಹೂಳು ಎತ್ತುವುದು, ಬೇಡ ಎಂದರೆ ಕೆರೆಗಳಲ್ಲಿರುವ ತೂಬುಗಳು ಜಾಸ್ತಿ ಎಂದರೆ ಒನ್ ಫುಟ್ ಡಯಾಮೀಟರ್ ಇರುತ್ತದೆ. ೬ ಇಂಚುಗಳ ಎರಡು ಮೂರು ಬೋರ್‌ವೆಲ್ ಹಾಕಿದರೆ, ನೀರು ಕೆರೆಯಲ್ಲಿ ಸಿಗದಿದ್ದರೆ ಬೋರ್‌ವೆಲ್‌ನಿಂದಲಾದರೂ ನೀರು ಬಿಟ್ಟುಕೊಂಡು ಕೃಷಿ ಮಾಡಬಹುದು. ಆಗ ಹೂಳು ಎತ್ತಬೇಕಾಗಿಲ್ಲ. ಇದು ನನ್ನ ಒಂದು ಸಲಹೆ. ೧೫ನೇ ಪ್ಯಾರದಲ್ಲಿ ಏನು ಹೇಳುತ್ತಾರೆಂದರೆ ನಗರ ಪ್ರದೇಶಗಳಲ್ಲಿ ಬಡವರಿಗೆ ವಾಸದ ಮನೆಗಳನ್ನು ಕಟ್ಟಿಕೊಡುವ ಬಗ್ಗೆ ಹೇಳಿರುವುದು ಬಹಳ ಒಳ್ಳೆಯ ಕೆಲಸ, ರಾಜ್ಯಪಾಲರು ಹೇಳಿರುವುದು ಮತ್ತು ಸರ್ಕಾರದವರು ಮನಸ್ಸು ಮಾಡಿರುವುದು ಒಪ್ಪಬೇಕಾಗಿದೆ. ಆದರೆ ರಾಜ್ಯಪಾಲರಾಗಲೀ ಅಥವಾ ಸರ್ಕಾರದವರಾಗಲೀ ಹಳ್ಳಿಗಾಡು ಪ್ರದೇಶಗಳಿಗೆ ಹೋಗಿಲ್ಲ ಎನಿಸುತ್ತದೆ. ನಾವೆಲ್ಲ ಚುನಾವಣೆಯಲ್ಲಿ ನಿಂತು ಗೆದ್ದು ಬಂದಿರುವುದು ಬಡವರ ವೋಟಿನಿಂದಲೇ. ಎಲ್ಲ ಕಡೆಯೂ ಬಡವರಿಗೆ ಹೌಸಿಂಗ್ ಪ್ರಾಬ್ಲಮ್ ಇದೆ. ಎ. ಕೆ. ಕಾಲೋನಿ, ಎ. ಡಿ, ಕಾಲೋನಿ ಅಷ್ಟೇ ಅಲ್ಲ ಅವರಿಗಿಂತ ಕೆಳಮಟ್ಟದಲ್ಲಿ ರುವವರು ಮನೆಗಳು ಇಲ್ಲದೆ ಇದ್ದಾರೆ. We can call all AK and AD colonies as slums. ಇವರು ಏನು ಹೇಳುತ್ತಾರೆ ಪಟ್ಟಣಗಳಲ್ಲಿ ಮಾತ್ರ ಸ್ಲಮ್ಸ್ ಇದೆ ಎಂದು ತಿಳಿದುಕೊಳ್ಳಬಾರದು. ಹಳ್ಳಿಗಳಲ್ಲಿ ಬೇಕಾದಷ್ಟು ಸ್ಲಮ್ಸ್‌ಗಳಿವೆ. ಅಂಥ ಜನಗಳಿಗೆ ಅಂದರೆ ವೀಕರ್ ಸೆಕ್ಷನ್ಸ್‌ಗೆ ಮನೆಗಳನ್ನು ಕಟ್ಟಿಕೊಡಬೇಕು. ಅವರು ನಮಗೆ ಓಟು ಕೊಟ್ಟ ಮೇಲೆ ಅವರಿಗೆ ಮನೆಗಳನ್ನು ಕಟ್ಟಿಸಿಕೊಡದಿರುವುದು ನಮ್ಮ ಧರ್ಮವಲ್ಲ. ಗ್ರಾಮ ನೈರ್ಮಲ್ಯಕ್ಕೆ ೩೭ನೇ ಪ್ಯಾರಾದಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಆದರೆ ನಿವೇಶನಗಳು ಮತ್ತು ಮನೆಗಳ ಬಗ್ಗೆ ದೇವರಾಜ ಅರಸರ ಕಾಲದಲ್ಲಿ ೬ ವರ್ಷದಲ್ಲಿ ೧೧ ಲಕ್ಷ ನಿವೇಶನಗಳನ್ನು ಕೊಟ್ಟರು. ಆ ಬಗ್ಗೆ ಒಂದು ಪ್ರೋಗ್ರಾಂ ಹಾಕಿಕೊಂಡಿದ್ದರು. ಆದರೆ ಈಚಿನ ಐದಾರು ವರ್ಷಗಳಲ್ಲಿ ೩೦, ೪೦ ಸಾವಿರ ನಿವೇಶನ ಕೊಟ್ಟಿರಬಹುದು. ಆದ್ದರಿಂದ ಸರ್ಕಾರದವರು ಬಡವರಿಗೆ ಮನೆ ಕಟ್ಟಿಕೊಡದಿದ್ದರೆ ಇನ್ನೊಂದು ಸಲ ನಾವು ಆರಿಸಿ ಬರುವುದಕ್ಕಾಗುವುದಿಲ್ಲವೆಂದು ಪಾರ್ಟಿ ಮೀಟಿಂಗ್‌ನಲ್ಲೂ ಹೇಳಿದೆ. ಮೊದಲು ಹಳ್ಳಿಗಳಲ್ಲಿರುವ ಹೌಸ್‌ಲೆಸ್, ಸೈಟ್‌ಲೆಸ್ ಜನಗಳ ಸರ್ವೆ ಮಾಡಿಸಬೇಕು, ಆಮೇಲೆ ಟೋಟಲ್ ಫಿಗರ್ ಸಿಕ್ಕಿದ ಮೇಲೆ ಮುಂದಿನ ಬಜೆಟ್‌ನಲ್ಲಾದರೂ ನಿವೇಶನ ಒದಗಿಸದಿದ್ದರೆ ಖಂಡಿತ ನಮಗೆ ದೇವರು ಒಳ್ಳೆಯದು ಮಾಡುವುದಿಲ್ಲ. ಆದ್ದರಿಂದ ಅಧಿಕಾರಿಗಳ ಕೈಲಿ ಈ ಬಗ್ಗೆ ಸರ್ಕಾರದವರು ಸರ್ವೆ ಕೆಲಸ ಈಗಲೇ ಶುರು ಮಾಡಿಸಬೇಕು. ಆಮೇಲೆ ವಿದ್ಯುತ್ ಇಲಾಖೆ ಬಗ್ಗೆ ನನಗನಿಸುತ್ತದೆ, ನಾವು ಪುನಃ

ವಾಪಸ್ ಹೋದರೆ ಈಗಾಗಲೇ ಎಲ್ಲ ಪಕ್ಷದವರೂ ನಮಗೋಸ್ಕರ ಕಾಯುತ್ತಿದ್ದಾರೆ. ಏಕೆಂದರೆ, ಕೆಇಬಿ ಆಫೀಸ್ ಮುಂದೆ ಧರಣಿ ಮಾಡಬೇಕು ಅಂತ. ಅದರಲ್ಲೂ ಕೋಲಾರ ಮತ್ತು ಬೆಂಗಳೂರು ಕ್ಷಾಮ ಪೀಡಿತ ಜಿಲ್ಲೆಗಳಲ್ಲಿ ಬೆಳಿಗ್ಗೆ ೬ ರಿಂದ ೧೨ ಗಂಟೆಯುವರೆಗೆ ವಿದ್ಯುತ್ ಕೊಡುತ್ತೇವೆಂದು ಹೇಳುತ್ತಾರೆ ಅಷ್ಟೇ. ಆದರೆ ಕೊಡುವುದಿಲ್ಲ ವಿದ್ಯುತ್ ಬಂದರೂ ಸಹ ಎಷ್ಟೋ ಮೀಟರುಗಳು ಮತ್ತು ಮೋಟಾರುಗಳು ಸುಟ್ಟು ಹೋಗುತ್ತವೆ ಜೊತೆಗೆ ನಮ್ಮ ಅಧಿಕಾರಿಗಳು ಏನು ಹೇಳುತ್ತಿದ್ದಾರೆಂದರೆ ದೊಡ್ಡ ದೊಡ್ಡ ಇಂಡಸ್ಟ್ರಿಯಾಲಿಸ್ಟ್‌ಗಳು ಬೆಂಗಳೂರಿನ ಸುತ್ತ ಮುತ್ತ ಇಂಡಸ್ಟ್ರಿಗಳನ್ನು ಸ್ಟಾರ್ಟ್ ಮಾಡಲು ಇನ್‌ವೈಟ್ ಮಾಡುತ್ತೇವೆನ್ನುತ್ತಾರೆ. ಆದರೆ ನಾನು ಇದನ್ನು ಒಪ್ಪುವುದಿಲ್ಲ. ಮೊದಲು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಿ, ಆ ಮೇಲೆ ಏನಾದರೂ ಪ್ರಯತ್ನ ಪಡಿ. ಅದು ಬಿಟ್ಟು ಇಂಡಸ್ಟ್ರಿಯಾಲಿಸ್ಟ್‌ಗಳನ್ನು ಇನ್‌ವೈಟ್ ಮಾಡಬೇಕೆನ್ನುವುದು ನಾನು ಒಪ್ಪುವುದಿಲ್ಲ. ಈ ಮಾತನ್ನು ಪಾರ್ಟಿ ಮೀಟಿಂಗ್‌ನಲ್ಲೂ ಸಹ ಹೇಳುತ್ತೇನೆ. ಇದಕ್ಕೆ ಸೂಕ್ತ ಪರಿಹಾರವನ್ನು ಆದಷ್ಟು ಬೇಗ ಮಂತ್ರಿಗಳು ಕಂಡು ಹಿಡಿಯದಿದ್ದರೆ ಏನೂ ಪ್ರಯೋಜನವಿಲ್ಲವೆಂದು ಹೇಳುತ್ತೇನೆ.

ಇನ್ನು ಪ್ರವಾಸಿ ಸ್ಥಳಗಳ ಬಗ್ಗೆ ಸಹ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಮ್ಮಲ್ಲಿ ಕೋಲಾರ ಚಿನ್ನದ ಗಣಿ. ಮುಳಬಾಗಿಲು ಎಂದರೆ ಮೊಡಲಬಾಗಿಲು ಎಂದು. ಅಲ್ಲಿ ನೂರೆಂಟು ದೇವಸ್ಥಾನಗಳಿವೆ. ಕೇಂದ್ರದಿಂದ ಡಿಕ್ಲೇರ್ ಆಗಿರುವ ಪ್ರೊಟೆಕ್ಟೆಡ್ ಮಾನ್ಯುಮೆಂಟ್ಸ್‌ನವರು ಇದನ್ನು ಹೇಳಿದ್ದಾರೆ. ೧೮–೨೦ ಅಡಿ ಎತ್ತರದ ಆಂಜನೇಯ, ೧೮ ಅಡಿ ಎತ್ತರದ ಗಣೇಶ ಇದೆ. ರಾಮಲಿಂಗೇಶ್ವರ ದೇವಸ್ಥಾನ ಇದೆ, ನರಸಿಂಹತೀರ್ಥ ಇದೆ. ಕೆ. ಜಿ. ಎಫ್, ಮುಳಬಾಗಿಲು, ನಂದಿ ಬೆಟ್ಟ ಇವುಗಳನ್ನೆಲ್ಲಾ ಪ್ರವಾಸೀ ಕೇಂದ್ರವಾಗಿ ಅಭಿವೃದ್ಧಿ ಪಡಿಸುವ ಯೋಜನೆ ಹಾಕಿಕೊಳ್ಳಬೇಕು. ನಂದಿ ಬೆಟ್ಟ ಮಂತೂ ಸಮ್ಮರ್‌ನಲ್ಲಿ ಬಹಳ ಹಿತಕರವಾದ ಬೆಟ್ಟ. ಆಲ್ ಇಂಡಿಯಾ ಟೂರಿಸ್ಟ್ ಮ್ಯಾಪ್‌ನಲ್ಲಿ....

ಅಧ್ಯಕ್ಷರು.—ಈಗಾಗಲೇ ನಂದಿ ಬೆಟ್ಟವನ್ನು ಪ್ರವಾಸಿ ಕೇಂದ್ರ ಮಾಡಿದ್ದಾರಲ್ಲ,

ಶ್ರೀ ಎಂ. ವಿ. ವೆಂಕಟಪ್ಪ.—ಸಂತೋಷ, ಇಂತಹ ಅನೇಕ ದೇವಸ್ಥಾನಗಳನ್ನು ರಾಜ್ಯಮಟ್ಟದ ಪ್ರವಾಸಿಧಾಮಗಳ ಪಟ್ಟಿಯಲ್ಲಿ ಸೇರಿಸಬೇಕು. ಇದರ ಜೊತೆಗೆ ಭೂಪಟ ಲೇಖನ ಎಂದರೆ ಸೆಟಿಲೈಟ್‌ನಿಂದ ನೀರು ಎಲ್ಲೆಲ್ಲಿ ಸಿಗುತ್ತದೆಂದು ಕಂಡುಹಿಡಿಯಬಹುದಂತೆ. ನಮ್ಮ ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳನ್ನು ಡಾರ್ಕ್ ಏರಿಯಾ ಅಂದರೆ ಕಪ್ಪು ಪ್ರದೇಶವೆಂದು ಅನೌನ್ಸ್ ಮಾಡಿದ್ದಾರೆ. ಇದರಿಂದ ಬ್ಯಾಂಕ್‌ನವರೂ ಸಾಲ ಕೊಡುವುದಿಲ್ಲ. ಹಣವಿರುವವರು ಬೋರ್‌ವೆಲ್ ಹಾಕಿಕೊಂಡರೂ ಸಹ ಕೆ.ಇ.ಬಿ.ನವರು ವಿದ್ಯುತ್‌ಕೊಡುವುದಿಲ್ಲ.

ನಿಮ್ಮದು ಡಾರ್ಕ್ ಏರಿಯಾ, ನಮಗೆ ಆರ್ಡರ್ಸ್ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ಕಪ್ಪು ಪ್ರದೇಶ ಎಂದು ಏನು ಇದೆ, ಅದನ್ನು ಸರ್ಕಾರದವರು ತೆಗೆಯಬೇಕು. ಅದನ್ನು ತೆಗೆಯದಿದ್ದರೆ ಉದಾಹರಣೆಗೆ ಡಾರ್ಕ್ ಏರಿಯಾ ಎಂದು ಡಿಕ್ಲೇರ್ ಮಾಡಿದ ಮೇಲೆ ಕೆಲವರು ಅಲ್ಲಿ ಸ್ವಂತ ಖರ್ಚಿನಿಂದ ಬೋರ್‌ವೆಲ್‌ಗಳನ್ನು ಹಾಕಿಕೊಂಡಿದ್ದಾರೆ. ಒಂದೊಂದು ಕಡೆ ಐದು ಸಾವಿರದಿಂದ ೧೨ ಸಾವಿರವರೆಗೂ ಗ್ಯಾಲನ್ ನೀರು ಬರುತ್ತಿದೆ. ಹಾಗಾದರೆ ಈ ಜಿಯಾಲಜಿಸ್ಟ್‌ಗಳು ಏನು ಮಾಡಿದರು ? ಏನೂ ಪ್ರಯೋಜನವಾಗಲಿಲ್ಲ ಅದನ್ನು ಮಾಡಬೇಕು. ಆಮೇಲೆ ಗ್ರಾಹಕರ ಸಂರಕ್ಷಣ ಮಂಡಳಿಯನ್ನು ಆಯಾಯ ಜಿಲ್ಲೆಗಳಲ್ಲಿ ಮಾಡುತ್ತೇವೆ ಎಂದು ಹೇಳಿದ್ದಾರೆ, ಅದು ಬಹಳ ಒಳ್ಳೆಯದು. ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಕೌನ್ಸಿಲ್ಸ್ ಬಗ್ಗೆ ಹೇಳಿದ್ದಾರೆ. ಅಲ್ಲಿ ಸಾಧ್ಯವಾದರೆ ಸ್ತ್ರೀಯರೇ ಹೆಚ್ಚಾಗಿ ಇರಬೇಕು. ಆ ಕಮಿಂಟಿಗಳಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳೇ ಇದ್ದರೆ ಕನ್‌ಸ್ಯೂಮರ್ಸ್ ಪ್ರೊಟೆಕ್ಷನ್ ಇದು ಯಾವುದು ಎಷ್ಟು ಬರುತ್ತದೆ, ಏನು ಎನ್ನುವುದನ್ನು ಅವರು ಚೆನ್ನಾಗಿ ನಿರ್ವಹಿಸಬಲ್ಲರು. ಆಮೇಲೆ ಸಾರಿಗೆ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಕಂಪ್ಯೂಟರ್‌ಗಳಿಗೆ ಅಳವಡಿಸಲು ಉದ್ದೇಶಿಸಲಾಗಿದೆ ಎಂದು ರಾಜಪ್ರಮುಖರು ಹೇಳಿದ್ದಾರೆ. ಸಂತೋಷ. ಅದು ಒಂದು ಕಡೆಯಲ್ಲಿ ಮಾಡಲಿ. ಆದರೆ ಮೊದಲು ಈಗ ತಾನೆ ಬೆಳಿಗ್ಗೆ ಹೇಳಿದೆ ನಮ್ಮ ಕೋಲಾರ ಜಿಲ್ಲೆಯಲ್ಲಿ, ಅದರಲ್ಲೂ ನಮ್ಮ ತಾಲ್ಲೂಕಿನಲ್ಲಿ ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ, ಟಿ.ಬಿ. ಮುಂದೆ ನಿಂತುಕೊಂಡು ನೋಡಿದಾಗ ಪ್ರತಿಯೊಂದು ಬಸ್‌ನ ಟಾಪ್ ಮೇಲೆಲ್ಲಾ ಜನರು ಪ್ರತಿದಿನ ಪ್ರಯಾಣ ಮಾಡುತ್ತಾರೆ. ಇದರ ಬಗ್ಗೆ ಒಂದಲ್ಲ, ಎರಡಲ್ಲ, ಮೂರಲ್ಲ, ಸುಮಾರು ಸಲ ನಮ್ಮ ಸಾರಿಗೆ ಮಂತ್ರಿಯವರಿಗೆ ಹೇಳಿದ್ದೇನೆ. ಪಾಪ, ಅವರು ಕೂಡಾ ಬರೆಯುತ್ತಾರೆ. ಆದರೂ ಅಲ್ಲಿಗೆ ಹೆಚ್ಚು ಬಸ್‌ಗಳನ್ನು ಹಾಕುವುದಿಲ್ಲ. ಅಲ್ಲಿ ಜನರು ಏನು ಹೇಳುತ್ತಾರೆಂದರೆ, ಏನು ಮಂತ್ರಿಗಳು ಹೇಳುತ್ತಾರೆ, ಏನು ಮಹಾ ? ಬಸ್‌ಗಳು ಇಲ್ಲಿ ಇರಬೇಕಲ್ಲ ಎನ್ನುವ ರೀತಿಯಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಈ ರೀತಿ ಹೇಳುತ್ತಾರೆ. ಈ ಸಾರಿಗೆ ಸಮಸ್ಯೆಯನ್ನು ನಾವು ಸರಿಪಡಿಸದಿದ್ದರೆ ಬಹಳ ಕಷ್ಟವಾಗುತ್ತದೆ. ಹೋಗಲಿ, ಇದನ್ನು ಪ್ರೈವೇಟ್ ಆಪರೇಟರ್ಸ್‌ಗಾದರೂ ಕೊಡಿ ಎಂದು ಹೇಳಿದರೂ ಮಾಡುವುದಿಲ್ಲ, ಅದೂ ಮಾಡುವುದಿಲ್ಲ,

ಇವರೂ ರನ್ ಮಾಡುವುದಿಲ್ಲ, ಎಷ್ಟು ಮಟ್ಟಿಗೆ ಈ ಸಾರಿಗೆಯನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಇನ್ನು ಕನ್ನಡ ಭಾಷೆಯ ಬೆಳವಣಿಗೆಗೆ ಇಲ್ಲಿ ಪ್ರೋತ್ಸಾಹವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ ಕನ್ನಡ ಚಲನಚಿತ್ರಗಳ ಬಗ್ಗೆ ಕೂಡಾ ಮಾನ್ಯ ರಾಜ್ಯಪಾಲರು ಹೇಳಿದ್ದರೆ ಚೆನ್ನಾಗಿತ್ತು. ಈ ಸಮಯದಲ್ಲಿ ನನಗಾದರೂ ಅನಿಸುತ್ತದೆ, ನನ್ನದೊಂದು ಪರ್ಸನಲ್ ಎಕ್ಸಪ್ಲನೇಶನನ್ನು ಹೇಳಬೇಕು. ಉದಾಹರಣೆಗೆ ೨೨ನೇ ತಾರೀಖಿನ ದಿವಸ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಒಂದು ಮುಖ್ಯ ಪ್ರಶ್ನೆಯನ್ನು ಕೇಳಿದಾಗ ನಾನು ಅದಕ್ಕೆ ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳುವಾಗ ಕೋಲಾರ ಜಿಲ್ಲೆಗೆ ಕನ್‌ಸೆಷನ್ ಅನ್ನು ಕೊಡಬೇಕು ಎಂದು ಹೇಳಿದನೇ ಹೊರತು ಬೇರೆ ಇನ್ನಾವ ರೀತಿಯಲ್ಲಿಯೂ ಇಲ್ಲ. ನಾನು ಯಾವತ್ತೂ ಕೂಡಾ ಕನ್ನಡ ಚಲನಚಿತ್ರಗಳ ಬಗ್ಗೆ ಅಡ್ಡಿ ಮಾಡಿ ಮಾತನಾಡಿದವನಲ್ಲ ಉದಾಹರಣೆಗೆ ಹೇಳಬೇಕಾದರೆ ನಾನು ೧೯೭೭ನೇ ಇಸವಿಯಲ್ಲಿ ಸಭಾಪತಿಯಾಗಿದ್ದಾಗ ರಾಜ್ಯಮಟ್ಟದಲ್ಲಿ ಜಾನಪದ ಮೇಳವನ್ನು ಮುಳುಬಾಗಿಲಿನಲ್ಲಿ ಸುಮಾರು ನಲವತ್ತೈದು ಸಾವಿರ ರೂಪಾಯಿ ಖರ್ಚು ಮಾಡಿ ಮಾಡಿಸಿದ್ದೆನು. ಅದನ್ನು ಕೆಲವರು ತಪ್ಪು ಅರ್ಥ ಮಾಡಿಕೊಂಡಿದ್ದಾರೆ. ನಾನು ನಿಮಗೆ ಹೇಳಬೇಕು ಎಂದರೆ, ವಾರಕ್ಕೆ ಒಂದು ಬಾರಿ ಕನ್ನಡ ಚಿತ್ರವನ್ನು ನೋಡುತ್ತೇನೆ. ಅದನ್ನು ಇವತ್ತಿಗೂ ಕೂಡಾ ಬಿಡುವುದಿಲ್ಲ. ಟಿ.ವಿ. ಯಲ್ಲಿ ಕನ್ನಡ ಚಲನಚಿತ್ರವನ್ನು ಪ್ರತಿ ವಾರವೂ ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್,—ವಾರಕ್ಕೊಂದು ಸಾರಿ ಕನ್ನಡ ಚಲನಚಿತ್ರವನ್ನು ನೋಡಿದರೆ ಕನ್ನಡ ಚಿತ್ರ ಉದ್ಧಾರವಾಯಿತು. ಅದೂ ಟಿ.ವಿ. ಯಲ್ಲಿ.

ಶ್ರೀ ಎಂ. ವಿ ವೆಂಕಟಪ್ಪ,—ಡೈಲಿ ಹೋಗುವುದಕ್ಕೆ ಬಿಡುವು ಇರಬೇಕಲ್ಲ. ವಾರಕ್ಕೊಂದು ಕನ್ನಡ ಚಿತ್ರವನ್ನು ನನಗೆ ಎಷ್ಟೇ ಮೀಟಿಂಗ್‌ಗಳು ಇರಲಿ, ಅದಕ್ಕೆ ತಪ್ಪಿಸಿಕೊಂಡು ಹೋಗಿ ಕನ್ನಡ ಪಿಕ್ಚರನ್ನು ನೋಡುತ್ತೇನೆ. ಅದಕ್ಕೋಸ್ಕರ ನಮ್ಮ ಸ್ನೇಹಿತರು ತಪ್ಪು ಅರ್ಥವನ್ನು ತಿಳಿದುಕೊಳ್ಳಬಾರದು. ಅವರ ಮನಸ್ಸಿಗೆ ಏನಾದರೂ ಬೇಸರವಾಗಿದ್ದರೆ ಅದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಮಾನ್ಯ ಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಕೋಲಾರದಲ್ಲೂ ೫೦ ದಿವಸ ೧೦೦ ದಿವಸ ಚಿತ್ರ ನಡೆದಿದೆ ಎಂದು ಹೇಳಿದ ಮೇಲೆ ನನಗೆ ಗೊತ್ತಾಯಿತು. ಆಮೇಲೆ ನಾನು ನನ್ನ ಅಭಿಪ್ರಾಯವನ್ನು ಛೇಂಜ್ ಮಾಡಿಕೊಂಡೆ.

ಶ್ರೀ ವಾಟಾಳ್ ನಾಗರಾಜ್.—ನಾನು ಅವತ್ತೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೆ. ಕನ್ನಡ ಭಾಷೆಯ ಬಗ್ಗೆ ಅಭಿಮಾನ ಇಲ್ಲದೇ ಇರತಕ್ಕಂಥವರನ್ನು ತಾವು ಸಚಿವ ಸಂಪುಟಕ್ಕೆ ತೆಗೆದುಕೊಳ್ಳಬಾರದು ಎಂದು ತೀವ್ರತರವಾದಂಥ ಒತ್ತಾಯ ಮಾಡಿದೆ. ಕಾರಣವೇನು ಎಂದು ಹೇಳಿದರೆ ನಮ್ಮ ಮಾನ್ಯ ವೆಂಕಟಪ್ಪನವರು ಕನ್ನಡ ಚಲನಚಿತ್ರಗಳಿಗೆ ವಿರೋಧವಾಗಿದ್ದಾರೆ, ಅವರನ್ನು ಏನಾದರೂ ತೆಗೆದುಕೊಳ್ಳುವುದು ಇದ್ದರೆ ಖಂಡಿತವಾಗಿಯೂ ತೆಗೆದುಕೊಳ್ಳಬಾರದು ಎಂದು ಅವತ್ತು ಹೇಳಿದ್ದೆ. ಈಗ ಅವರನ್ನು ತೆಗೆದುಕೊಳ್ಳುವುದು ಬಿಡುವುದು ಅವರಿಗೆ ಸೇರಿದ್ದು, ಅದು ನನ್ನದಲ್ಲ. ಈ ವಿಚಾರವನ್ನು ಹೇಳಿದ್ದೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಅದೆಲ್ಲಾ ಬೇಕಾಗಿಲ್ಲ. It is out of the purview of this House. Let us go according to our procedures. ಈ ರೀತಿ ಇರುವಾಗ ಅವರಿಗೆ ಏನಾದರೂ ಬೇಜಾರಾಗಿದ್ದರೆ ನಾನು ವಿಷಾದವನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯ. ಜೊತೆಗೆ ನಮಗೆ ಅಕಸ್ಮಾತ್ ಕೆಲವು ವಿಷಯಗಳು ಗೊತ್ತಿಲ್ಲದೇ ಇರಬಹುದು. ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದರು. ನಮ್ಮ ಮತದಾರ ಹೇಳಿದ್ದನ್ನು ನಾವು ತಿದ್ದಿಕೊಂಡು ಅವರ ಅಭಿರುಚಿ, ಅವರ ಅಭಿಲಾಷೆಯ ಮೇಲೆ ಹೋಗುವುದು ನಮ್ಮ ಕರ್ತವ್ಯ. ಡೆಮಾಕ್ರಸಿಯಲ್ಲಿ It is our duty. ಅವರು ಕೇಳುವುದು ಅವರ ಡ್ಯೂಟಿ. ಪ್ರಜಾಪ್ರಭುತ್ವದಲ್ಲಿ ನಾವು ಅದನ್ನು ತಿದ್ದಿಕೊಳ್ಳುವುದು ಅದು ನಮ್ಮ ಡ್ಯೂಟಿ. It is the real democracy in my opinion. ಕೊನೆಯದಾಗಿ ಒಂದು ಮಾತನ್ನು ಹೇಳಬೇಕೆಂದರೆ, ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ನನಗನ್ನಿಸುತ್ತದೆ, ಅವರಿಗೆ ಆರು ವಾರ ಅಲ್ಲ, ಮೂರು ತಿಂಗಳು ಕಡ್ಡಾಯ ಮಾಡಿದರೂ ಕೂಡಾ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ನಾನೇ ಬೇಕಾದರೆ ಇದರ ಮುಂದಾಳತ್ವವನ್ನು ವಹಿಸಿಕೊಳ್ಳುತ್ತೇನೆ. ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸುವುದು ಎಂದು ಒಂದು ಪ್ಯಾರಾ ಇದೆ. ನನಗಾದರೂ ಅನಿಸುತ್ತದೆ, ಇತ್ತೀಚೆಗೆ ನನ್ನ ಅನುಭವವನ್ನು ಹೇಳುತ್ತೇನೆ. ಕೆಲವು ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ ಬೆಳಿಗ್ಗೆಯ ವೇಳೆ ನಾನು ಸಾಮಾನ್ಯವಾಗಿ ಯಾರನ್ನು ಹೋಗಿ ನೋಡುವುದಿಲ್ಲ, ಏಕೆಂದರೆ ಅಧಿಕಾರಿಗಳು ಭೇಟಿ ಮಾಡುವುದು ಮಧ್ಯಾಹ್ನ ಮೂರು ಗಂಟೆಯ ವೇಳೆ ಎಂದು ಟೈಮನ್ನು ಹಾಕಿಕೊಂಡಿರುತ್ತಾರೆ. ಅದೇ ಸಮಯದಲ್ಲಿ ಹೋಗಿ ನೋಡುತ್ತೇನೆ.

ಬೆಳಿಗ್ಗೆಯ ಹೊತ್ತು ಹೋದರೆ ಅವರು ಇಂಟರ್‌ವ್ಯೂ ಕೊಡುವುದಿಲ್ಲ. ಮೀಟಿಂಗ್‌ನಲ್ಲಿ ಇದ್ದಾರೆ ಎಂದು ಹೇಳುತ್ತಾರೆ, ಫೈಲ್ಸ್ ನೋಡುತ್ತಿದ್ದಾರೆ ಎಂದು ಹೇಳುತ್ತಾರೆ, ಸೆಕ್ರೆಟರಿ ಹತ್ತಿರ ಹೋಗಿದ್ದಾರೆ ಎಂದು ಹೇಳುತ್ತಾರೆ. ಡೆಪ್ಯುಟಿ ಸೆಕ್ರೆಟರಿ ಹತ್ತಿರ ಹೋಗಿದ್ದಾರೆ ಎಂದು ಹೇಳುತ್ತಾರೆ. ಬೆಳಿಗ್ಗೆ ಹೊತ್ತು ಇಂಟರ್‌ವ್ಯೂ ಕೊಡುವುದಿಲ್ಲ ಎಂದು ಹೇಳಿ ಮಧ್ಯಾಹ್ನ ಹೋದರೂ ಕೂಡಾ ಮೀಟಿಂಗ್‌ನಲ್ಲಿದ್ದಾರೆ ಎಂದು ಹೇಳುತ್ತಾರೆ.

ಈ ಬಗ್ಗೆ ನನ್ನ ಸ್ವಂತ ಅನುಭವವನ್ನು ಹೇಳುತ್ತಾ ಇದ್ದೇನೆ. ಹೋದ ವಾರ ನಾನು ಹೋದಾಗ ಅಧಿಕಾರಿ ನನ್ನನ್ನು ಇನ್‌ವೈಟ್ ಮಾಡುವುದು ಬೇಡ, ನಾನು ಒಳಗೆ ಹೋದ ಮೇಲೆ ಚುಟ್ಟಾ ಹತ್ತಿಸಿ ನನ್ನ ಮೇಲೆ ಹೊಗೆ ಬಿಟ್ಟರು. ನಾನು ಅಲ್ಲಿ ಕುಳಿತುಕೊಂಡ ಮೇಲೆ ಈ ರೀತಿ ನನ ಮೇಲೆ ಚುಟ್ಟಾ ಹೊಗೆಯನ್ನು ಬಿಟ್ಟರು. ಅವರ ಹೆಸರನ್ನು ಹೇಳುವುದು ಬೇಡ, ನಾನು ಮುಖ್ಯಮಂತ್ರಿಗಳ ಹತ್ತಿರ ಹೇಳುತ್ತೇನೆ. ಈ ಅಧಿಕಾರಿಗಳು ಎಷ್ಟು ಮಾತ್ರ ಗೌರವವನ್ನು ಶಾಸಕರಿಗೆ ಕೊಡುತ್ತಾರೆಂದು ನಾವು ಅರ್ಥ ಮಾಡಿಕೊಳ್ಳಬಹುದು. ಶಾಸಕರು ಇರಬಹುದು, ಅಥವಾ ಬೇರೆ ಪ್ರಜೆ ಇರಬಹುದು, ಎಲ್ಲರಿಗೂ ಅವರು ಗೌರವವನ್ನು ತೋರಿಸಬೇಕು, ಆದ್ದರಿಂದ ಮಧ್ಯಾಹ್ನ ಮೂರರಿಂದ ಐದೂವರೆವರೆಗೆ ಅಧಿಕಾರಿಗಳು ಕಡ್ಡಾಯವಾಗಿ ಯಾವುದೇ ಮೀಟಿಂಗ್‌ಗೆ ಹೋಗದೆ ಸಾರ್ವಜನಿಕರನ್ನು ಅಥವಾ ಶಾಸಕರನ್ನು ಭೇಟಿ ಮಾಡಬೇಕೆಂದು ಸರ್ಕಾರ ಅವರಿಗೆ ಶಿಳಿಸ ಬೇಕೆಂದು ಹೇಳುತ್ತೇನೆ. ಮೂರನೇ ಹಿಂದುಳಿದ ವರ್ಗದವರ ಕಮೀಷನ್ ಬಗ್ಗೆ ಹೇಳಿದ್ದೀರಿ. ಅದು ಏಪ್ರಿಲ್ ಎರಡನೇ ವಾರದಲ್ಲಿ ಬರಬಹುದು ಎಂದು. ಇದರ ಮಧ್ಯೆ ದೆಹಲಿಯಲ್ಲಿ ಮಂಡಲ್ ಕಮಿಷನ್ ರಿಪೋರ್ಟ್ ಅನ್ನು ಆದಷ್ಟು ಬೇಗ ಇದೇ ಸೆಷನ್‌ನಲ್ಲಿ ಇಡುತ್ತೇವೆಂದು ಕೇಂದ್ರ ಸರ್ಕಾರ ದವರು ಹೇಳಿದ್ದಾರೆ. ಇಲ್ಲಿ ಒಂದು ಪ್ರಶ್ನೆ ಏನು ಅಂದರೆ, ಯಾವುದೇ ಒಂದು ಕೋಮು ಅಥವಾ ಗುಂಪು ಹಿಂದುಳಿದಿದೆ ಅಥವಾ ಮುಂದುವರೆದಿದೆ ಎಂದು ಹೇಳುವಲ್ಲಿ ಇವರೇ ಒಂದು ತರಹ ಜಡ್ಜ್‌ಮೆಂಟ್ ಕೊಡುವುದು. ಮಂಡಲ್ ಕಮೀಷನ್‌ರವರು ಒಂದು ತರಹ ಜಡ್ಜ್‌ಮೆಂಟ್ ಕೊಡುವುದು ಆಗಬಾರದು ಮಂಡಲ್ ಕಮಿಷನ್ ರಿಪೋರ್ಟ್ ಅನ್ನು ನಾನು ಕಳೆದ ವಾರ ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನಲ್ಲಿ ಓದಿದ್ದೇನೆ. ಅದರಲ್ಲಿ ಯಾವ ಯಾವ ಕೋಮುಗಳು ಮುಂದುವರೆದಿವೆ ಎಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಯಾವುದು, ಕೇರಳದಲ್ಲಿ ಯಾವುದು, ತಮಿಳುನಾಡಿನಲ್ಲಿ ಯಾವುದು ಎಂದು ಹೇಳಿದ್ದಾರೆ. ನಾಳೆ ಮಂಡಲ್ ಕಮೀಷನ್ ರಿಪೋರ್ಟ್ ಅನ್ನು ಕೇಂದ್ರ ಸರ್ಕಾರದವರು ಒಪ್ಪಿ ಕೊಂಡರು ಅಂದರೆ ಅವರು ಕರ್ನಾಟಕದಲ್ಲಿ ಯಾವ ಯಾವ ಕೋಮುಗಳು ಮುಂದುವರೆದಿವೆ ಅಥವಾ ಹಿಂದುಳಿದಿವೆ ಎಂದು ಹೇಳುತ್ತಾರೆ. ಆ ಬಗ್ಗೆ ಇವರು ಒಂದು ತರಹ ಹೇಳುವುದು, ಅವರು ಒಂದು ತರಹ ಹೇಳುವುದಾದರೆ, ಆಗ ಒಂದಕ್ಕೊಂದು ಕ್ಲಾಷ್ ಆಗಿ ನಾಳೆ ಕೋಮು–ಕೋಮುಗಳ ನಡುವೆ ಘರ್ಷಣೆ ಆಗಬಹುದು. ಇದನ್ನು ತಪ್ಪಿಸಬೇಕು ಅಂದರೆ ನನ್ನ ಸಲಹೆ ಇಷ್ಟೇ. ಮಾನ್ಯ ಚಿನ್ನಪ್ಪರೆಡ್ಡಿ ಯವರ ವರದಿ ಏನು ಇದೆ, ಅದನ್ನು ಅಲ್ಲಿ ಮಂಡಲ್ ಕಮೀಷನ್ ರಿಪೋರ್ಟ್ ಮಂಡನೆ ಆಗುವವರೆಗೆ ತಡೆ ಹಿಡಿದರೆ ಅನುಕೂಲವೆಂದು ನನ್ನ ಸ್ವಂತ ಅನಿಸಿಕೆ ಆಗುತ್ತಿದೆ. ಸರ್ಕಾರದವರು ಇದನ್ನು ದೀರ್ಘವಾಗಿ ಆಲೋಚನೆ ಮಾಡಬೇಕು. ಯಾಕೆಂದರೆ ಮುಂದೆ ಒಂದು ಸಲ ಇವರು ಅನೌನ್ಸ್ ಮಾಡುವುದು ಮಂಡಲ್ ಕಮೀಷನ್‌ನವರು ನಾಳೆ ಈ ಬಗ್ಗೆ ವ್ಯತಿರಿಕ್ತವಾಗಿ ಹೇಳಿದರೆ, ಅದು ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡುವವರಿಗೆ ಅನುಕೂಲವಾಗುತ್ತದೋ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ರುವ ಆಫೀಸರ್ಸ್‌ಗಳಿಗೆ ಅನುಕೂಲವಾಗುತ್ತದೋ ಅಥವಾ ಕರ್ನಾಟಕದಲ್ಲಿರುವ ಕೆಲವು ಕೋಮು ಗಳವರಿಗೆ ಅನುಕೂಲವಾಗುತ್ತದೋ ಗೊತ್ತಿಲ್ಲ. ಆದರೆ ಇದರಿಂದ ಒಂದಕ್ಕೊಂದು ಕೋಮಿನವರ ನಡುವೆ ಘರ್ಷಣೆ ಆಗಬಹುದು. ಘರ್ಷಣೆ ಆಗುವುದಿಲ್ಲ ಎಂದು ತಾವು ತಿಳಿದುಕೊಳ್ಳಬೇಡಿ, ಏಕೆಂದರೆ ಹಿಂದೆ ವೆಂಕಟಸ್ವಾಮಿ ಕಮೀಷನ್ ಅವರು ರಿಪೋರ್ಟ್ ಕೊಟ್ಟಾಗ ಏನು ಆಯಿತು ಎಂದು ತಮಗೆ ಗೊತ್ತಿದೆ. ಆಗ ನಾವು ತಾವು ಎಲ್ಲಾ ಕಬ್ಬನ್ ಪಾರ್ಕ್‌ನಲ್ಲಿ ಸತ್ಯಾಗ್ರಹ ಮಾಡಿದ್ದು ಎಲ್ಲರಿಗೂ ಜ್ಞಾಪಕ ಇದೆ. ಆದ್ದರಿಂದ ಅದನ್ನು ಅವಾಯ್ಡ್ ಮಾಡಬೇಕು ಎಂದರೆ ಮಾನ್ಯ ಚಿನ್ನಪ್ಪರೆಡ್ಡಿ ಅವರ ರಿಪೋರ್ಟ್ ಅನ್ನು ಜಾರಿಗೆ ತರುವುದನ್ನು ನಿಧಾನ ಮಾಡಿ. ಮಂಡಲ್ ಕಮೀಷನ್ ರಿಪೋರ್ಟ್ ಅನ್ನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಾದ ಮೇಲೆ ಜಾರಿ ಮಾಡಿ. ಇಷ್ಟು ಹೇಳಿ ಇವೊತ್ತು ನನಗೆ ಮಾತನಾಡಲು ಇಷ್ಟು ಜನರು ಇದ್ದಾಗ್ಯೂ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುವುದಕ್ಕಿಂತ ಮುಂಚೆ ರಾಜ್ಯಪಾಲರ ಭಾಷಣಕ್ಕೆ ನನ್ನ ವಂದನೆಯನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು.—ಶ್ರೀ ಪ್ರತಾಪಚಂದ್ರ ಶೆಟ್ಟಿಯವರೇ, ನೀವು ಇವೊತ್ತು ಶುರುಮಾಡಿ, 2ನೇ ತಾರೀಖು ನಿಮ್ಮ ಭಾಷಣವನ್ನು ಮುಂದುವರೆಸಿ...

† **ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ವಿಧಾನ ಮಂಡಲದಲ್ಲಿ ಮಾಡಿರತಕ್ಕ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಅವರು ಮಾಡಿದಂತಹ**

ಭಾಷಣವನ್ನು ಸ್ವಾಗತಿಸುತ್ತಾ ಅವರು ಏನು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ, ನೀತಿ ಧೋರಣೆ, ತತ್ವಗಳನ್ನು ಅತಿ ಶೀಘ್ರವಾಗಿ ಅನುಷ್ಠಾನಗೊಳಿಸಬೇಕೆಂಬ ಒತ್ತಾಯವನ್ನು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ತಿಳಿಸಲು ಅಪೇಕ್ಷೆ ಪಡುತ್ತೇನೆ. ಸುಮಾರು ೩೫ ವರ್ಷಗಳ ಕಾಲ ಆಡಳಿತವನ್ನು ನಡೆಸಿದಂತಹ ಕಾಂಗ್ರೆಸ್ (ಐ) ಸರ್ಕಾರ ಕೆಲವು ಕ್ರಾಂತಿಕಾರಕವಾದಂತಹ ಸುಧಾರಣೆಗಳನ್ನು ತಂದರೂ ಸಹ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಜನತಾ ಪಕ್ಷದವರು ಅಧಿಕಾರಕ್ಕೆ ಬರಬೇಕಾದರೆ ಅಪಾರ ಮತದಾರರ ಮತ್ತು ರೈತರಿಗೆ ಬೆಂಬಲದಿಂದ ಅಧಿಕಾರಕ್ಕೆ ಬಂದರು. ಅಧಿಕಾರಕ್ಕೆ ಬಂದ ನಂತರ ಜನರಿಗೆ ಹಲವಾರು ಕಾರ್ಯಕ್ರಮಗಳನ್ನು ಕೊಟ್ಟರು.

೫-೩೦ ಪಿ. ಎಂ.

ಆ ಕಾರ್ಯಕ್ರಮಗಳು ಯಾವುವು ಎನ್ನುವಂಥಾದ್ದು ತಮಗೆಲ್ಲಾ ಗೊತ್ತಿದೆ. ಅದೇ ರೀತಿಯಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಅವರು ಯಾವ ರೀತಿಯಲ್ಲಿ ನಡೆದುಕೊಂಡರು ಎನ್ನತಕ್ಕಂಥ ವಿಚಾರವನ್ನು ವಿಮರ್ಶೆಮಾಡಬೇಕಾಗಿದೆ. ಅವರ ಈ ಕಾರ್ಯಕ್ರಮಗಳು ಕೇವಲ ಅಗ್ಗದ ಪ್ರಚಾರದ ಕಾರ್ಯಕ್ರಮಗಳು ಎನ್ನುವಂಥ ವಿಚಾರ ಜನರಿಗೆ ತಿಳಿದು ಅವರು ಪುನ: ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರು ಎಂದು ನಾವು ಭಾವಿಸುತ್ತೇವೆ. ಈಗಾಗಲೇ ತಮಗೆ ತಿಳಿದಿರುವಂತೆ ವಿಧವಾ ಮಾಸಾಶನ, ತಾಳಿಭಾಗ್ಯ ವಿದ್ಯಾರ್ಥಿಗಳಿಗೆ ಸಮವಸ್ತ್ರ, ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ, ಕಡಿಮೆ ಬೆಲೆಯ ಸೀರೆ ಪಂಚೆ. ಹಸಿರು ಕಾರ್ಡು, ಮಾಜಿ ಗೇಣಿದಾರರಿಗೆ ಪರಿಹಾರ ಮನ್ನಾ. ಸೇತು ಬಂಧನ, ಹಳ್ಳಿ ಕೆದ್ದಾರಿ, ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಯಾವುವು ಅಗ್ಗದ ಪ್ರಚಾರದ ಕಾರ್ಯಕ್ರಮಗಳಾಗಿವೆ. ಅವುಗಳನ್ನು ಕೈಬಿಟ್ಟು ಮೂಲಭೂತವಾಗಿ ಜನರಿಗೆ ಸ್ಪಂದಿಸತಕ್ಕ ದೊರಕತಕ್ಕಂಥ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕು ಎನ್ನುವಂಥ ಉದ್ದೇಶದಿಂದ ಈ ಒಂದು ರಾಜ್ಯಪಾಲರ ಭಾಷಣದಲ್ಲಿ ಏನು ತಿಳಿಸಿದ್ದಾರೆ, ಅದು ಕ್ರಾಂತಿಕಾರಕ ಅಲ್ಲದೇ ಇರಬಹುದು, ಆದರೆ ಜನರ ಮೂಲಭೂತ ಬೇಡಿಕೆಗಳನ್ನು ಪೂರೈಸತಕ್ಕಂಥ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ನಾವು ವಿಧಾನಸಭೆಯ ಕಾರ್ಯಕಲಾಪದಲ್ಲಿ ನೋಡತಕ್ಕಂಥಾದ್ದು ಏನೆಂದರೆ, ೧೯೮೩ರಲ್ಲಿ ಸರ್ಕಾರದ ಬದಲಾವಣೆಯಾದಾಗ ಈ ಸದನದ ಸದಸ್ಯರೆಲ್ಲರೂ ರೈತರ ಬಗ್ಗೆ ಹೇಳುತ್ತಾ ಇದ್ದರು, ಕಾಂಗ್ರೆಸ್ ಪಕ್ಷವಾಗಲಿ, ಬಿ. ಜೆ. ಪಿ. ಯಾಗಿರಲಿ, ಅಧಿಕಾರದಲ್ಲಿದ್ದ ಜನತಾಪಕ್ಷವಾಗಲಿ ಎಲ್ಲರೂ ರೈತರ ಬಗ್ಗೆ ಕಾಳಜಿ ಹೊಂದಿದ್ದರು. ಅದೇ ವಾತಾವರಣವನ್ನು ಈಗ ನಾವು ಕಾಣುತ್ತಾ ಇದ್ದೇವೆ. ಭಾರತೀಯ ಜನತಾಪಕ್ಷದ ಹಾಗೂ ಜನತಾಪಕ್ಷದ ಎಲ್ಲ ಪ್ರತಿನಿಧಿಗಳು ರೈತರ ಬಗ್ಗೆ ಬಹಳಷ್ಟು ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಚಾರದ ಬಗ್ಗೆ ನಾನು ನಂತರ ಮಾತನಾಡಲಿಕ್ಕೆ ಇದ್ದೇನೆ. ಆದರೆ ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದಂಥ ವಿಚಾರವನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಆಡಳಿತದಲ್ಲಿ ಚುರುಕು ತರತಕ್ಕ ವಿಚಾರದಲ್ಲಿ ಕೆಲವೊಂದು ವಿಚಾರಗಳನ್ನು ಅವರು ಹೇಳಿದರು. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ನಾನು ಅದನ್ನು ಒಪ್ಪುತ್ತೇನೆ–ಎನ್ನುವಂಥ ವಿಚಾರವನ್ನು ಸ್ಪಷ್ಟವಾಗಿ ಹೇಳಿದರು. ಆದರೆ ಕೆಲವು ವಿಚಾರಗಳಲ್ಲಿ ನಾವು ಅಧಿಕಾರಿಗಳನ್ನು ನಂಬಬೇಕಾಗುತ್ತದೆ. ಅವರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದರು. ಹಾಗಿದ್ದರೆ ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ಆ ವಿಚಾರಧಾರೆ ತಮ್ಮಲ್ಲಿ ಎಲ್ಲಿ ಹೋಗಿತ್ತು ಅಥವಾ ತಮ್ಮ ಸರ್ಕಾರದ ವೈಫಲ್ಯಕ್ಕೆ ಯಾವ ಕಾರಣಗಳು ಇತ್ತು. ರಾಜ್ಯದಲ್ಲಿ ಇವೊತ್ತು ಭ್ರಷ್ಟಾಚಾರ ತಾಂಡವವಾಡುತ್ತಿದೆ ಎನ್ನುವಂಥ ವಿಚಾರಗಳನ್ನು ಎಲ್ಲಾ ಕಡೆಗಳಲ್ಲಿ, ಎಲ್ಲಾ ವೇದಿಕೆಗಳಲ್ಲಿ ಎಲ್ಲಾ ಪಕ್ಷದವರೂ ಹೇಳುತ್ತಾ ಇದ್ದಾರೆ. ಆದರ ಅರ್ಥ ಭ್ರಷ್ಟಾಚಾರವನ್ನು ತೊಲಗಿಸಬೇಕು ಎನ್ನುವಂಥಾದ್ದು ಕೇವಲ ಘೋಷಣೆಯೇ ಹೊರತು ಅದರ ಬಗ್ಗೆ ಯಾವುದೇ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲ. ಆದರೆ ಈ ಸಾರಿ ರಾಜ್ಯಪಾಲರು ಭಾಷಣ ಮಾಡತಕ್ಕ ಸಂದರ್ಭದಲ್ಲಿ ಈ ಒಂದು ಪ್ರಾಮಾಣಿಕ ಪ್ರಯತ್ನದ ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ. ಅದು ಸರ್ಕಾರದ ನೀತಿ ಸಹ ಹೌದು ಅದರ ಬಗ್ಗೆ ವಿರೋಧಪಕ್ಷದ ನಾಯಕರು ಮತ್ತು ಬೇರೆ ಶಾಸಕರು ಟೀಕೆ ಮಾಡಿದರು. ಈಗ ನಾನು ಹೇಳುತ್ತಾ ಇದ್ದೇನೆ, ತಮ್ಮ ಪಕ್ಷ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ತಾವು ಹಲವಾರು ಕಾರ್ಯಕ್ರಮಗಳನ್ನು ತಂದಿದ್ದರೂ ಸಹ ಅದರ ಅನುಷ್ಠಾನ ಆಗಲಿಲ್ಲ. ಈಗ ಈ ಕಾರ್ಯಕ್ರಮಗಳಿಂದ ಜನರಿಗೆ ಪ್ರಯೋಜನವಾಗಬಹುದು ಎನ್ನುವ ಉದ್ದೇಶದಿಂದ ತಂದಿದ್ದೇವೆಯೇ ಹೊರತು ಕೇವಲ ಟೀಕೆ ಮಾಡುವಂಥ ಉದ್ದೇಶವಲ್ಲ. ಕೇವಲ ಮೂರು ನಾಲ್ಕು ಆಡಳಿತವನ್ನು ಸಂಪೂರ್ಣವಾಗಿ ಬದಲಾವಣೆ ಮಾಡಲಿಕ್ಕೆ ಉಂಟು ಎಂದು ತಾವು ತಪ್ಪು ತಿಳಿದಿದ್ದರೆ ಅದು ನಿಮ್ಮ ತಪ್ಪು ಕಲ್ಪನೆ ಎನ್ನುವಂಥ ವಿಚಾರವನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸಾಮಾನ್ಯವಾಗಿ ನಾವು

ಜನಸಾಮಾನ್ಯರ ಬಗ್ಗೆ ತಿಳಿಯಬೇಕಾಗುತ್ತದೆ. ಜನಸಾಮಾನ್ಯರ ನೋವೇ ತಮ್ಮ ಸಂತೋಷ ಎಂದು ಹೇಳಿದರೆ, ಅದರಿಂದ ಜನಸಾಮಾನ್ಯರಿಗೆ ಎಷ್ಟು ಕಷ್ಟವಾಗುತ್ತದೆ. ಅದರಲ್ಲಿ ಸಂತೋಷಪಡತಕ್ಕ ಅಧಿಕಾರಿಗಳಿದ್ದಾರೆ. ಈಗ ಸಾಧಾರಣವಾಗಿ ಓದು ಬರಹ ತಿಳಿದಂಥ ಜನಸಾಮಾನ್ಯರು ಯಾವುದಾದರೂ ಕಛೇರಿಗೆ ಹೋಗಿ ತಮ್ಮ ಕೆಲಸವನ್ನು ಮಾಡಿಕೊಳ್ಳಲಿಕ್ಕೆ ಪ್ರಯತ್ನಪಡಬಹುದು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಜನರಿಗೆ ಓದಲಿಕ್ಕೆ ಬರುವುದಿಲ್ಲ, ಬರೆಯಲಿಕ್ಕೆ ಬರುವುದಿಲ್ಲ ಅಂತಹ ಜನರು ತಮ್ಮ ಕೆಲಸ ಕಾರ್ಯಗಳಿಗೆ ಯಾವುದಾದರೂ ಕಛೇರಿಗೆ ಹೋದರೆ ಎಷ್ಟು ಕಷ್ಟವಾಗುತ್ತದೆ ಎನ್ನುವಂಥ ವಿಚಾರದ ಅರಿವು ಗ್ರಾಮಾಂತರ ಪ್ರದೇಶದಿಂದ ಬಂದಂಥ ಶಾಸಕರಿಗೆ ಈಗಾಗಲೇ ಆಗಿರಬಹುದು. ಮತ್ತೆ ಅಧಿಕಾರಿಗಳು ಏನು ಮಾಡುತ್ತಿದ್ದಾರೆನ್ನುವುದನ್ನು ಹೇಳುತ್ತೇನೆ. ಈ ಒಂದು ಆಡಳಿತ ಯಂತ್ರದ ಮೂಲಕ ಸಾಮಾನ್ಯವಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಏನಾದರೂ ಕೆಲಸ ಆಗಬೇಕಾದರೆ ಬಹಳ ಕಷ್ಟವಿದೆ. ಹಿರಿಯ ಪ್ರಾಥಮಿಕ ಶಾಲೆಯ ಬಗ್ಗೆ ಇಲ್ಲವೇ ಕಿರಿಯ ಪ್ರಾಥಮಿಕ ಶಾಲೆಯ ಬಗ್ಗೆ ಬೇಡಿಕೆ ಇದ್ದರೆ ಅದನ್ನು ಜಿಲ್ಲಾ ಪರಿಷತ್‌ನಿಂದ ಪಡೆಯಲಿಕ್ಕೆ ನಾಲ್ಕು ವರ್ಷಗಳು ಬೇಕಾಗುತ್ತದೆ ಶಾಸಕನಾದವನು ಸತತವಾಗಿ ಅದರ ಹಿಂದೆ ಹೋದರೂ, ೪ ವರ್ಷವಾದರೂ ಅದನ್ನು ಪಡೆಯುವುದಕ್ಕೆ ಬೇಕಾಗುತ್ತದೆ. ಇನ್ನು ಸಾಧಾರಣವಾಗಿ ಆಗಬೇಕಾದಂಥ ಕೆಲಸಗಳು ಯಾವ ವೈಖರಿಯಲ್ಲಿ ನಡೆಯಬಹುದು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನೇಕ ವಿರೋಧ ಪಕ್ಷದ ಸದಸ್ಯರುಗಳು ಈ ಭ್ರಷ್ಟಾಚಾರ ನಿರ್ಮೂಲವಾಗಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಯಾವ ದೃಷ್ಟಿಯಲ್ಲಿ ಇದು ಆಗಬೇಕೆಂಬ ಅಭಿಪ್ರಾಯವನ್ನು ಅವರು ಸ್ಪಷ್ಟವಾಗಿ ಹೇಳಲಿಲ್ಲ. ಆರ್ಥಿಕವಾಗಿ ಹಿಂದುಳಿದಿರತಕ್ಕ ವರ್ಗದವರಿಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸತಕ್ಕ ವ್ಯವಸ್ಥೆ ಯಾವ ರೀತಿ ಆಗಬೇಕು ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಆಡಳಿತದಲ್ಲಿ ದಕ್ಷತೆ ಹೆಚ್ಚಿಸತಕ್ಕ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ಒಬ್ಬ ವ್ಯಕ್ತಿ ಹುಡ್ಕೋ ಮನೆಗಳಿಗೆ ಅರ್ಜಿ ಹಾಕಬೇಕಾದರೆ, ಅದಕ್ಕೆ ಬೇಕಾದ ಕೆಲವು ದಾಖಲೆಗಳನ್ನು ಒದಗಿಸುವವರು ಯಾರು ಎಂಬ ವಿಚಾರ ಬರುತ್ತದೆ. ಮನೆ ನಿವೇಶನಕ್ಕಾಗಿ ೫ ಸೆಂಟ್ ಜಮೀನು ಮಂಜೂರು ಮಾಡಿದರೆ ಇದಕ್ಕೆ ಸಂಬಂಧಪಟ್ಟ ನಕ್ಷೆ, ಆದಾಯ ಸರ್ಟಿಫಿಕೇಟ್ ಮತ್ತು ಸ್ವಾಧೀನದ ಸರ್ಟಿಫಿಕೇಟ್ ಇವುಗಳನ್ನೆಲ್ಲಾ ವಾರ್ಷಿಕ ೨-೩ ಸಾವಿರ ರೂಪಾಯಿ ಆದಾಯ ಇರತಕ್ಕಂಥ ಒಬ್ಬ ಸಾಮಾನ್ಯನಿಂದ ಕೇಳುವಂತಹ ಸನ್ನಿವೇಶ ಇದೆ. ಆದರೆ ಅದೇ ಮನೆ ನಿವೇಶನ ಮಂಜೂರು ಮಾಡುವಂತಹ ಸಂದರ್ಭದಲ್ಲಿ ಮನುಷ್ಯ ನಕಾಶೆ, ಆದಾಯ ಸರ್ಟಿಫಿಕೇಟ್ ಮತ್ತು ಅದರ ಆರ್. ಟಿ. ಸಿ. ಕೊಟ್ಟರೆ ಇವೆಲ್ಲಾ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಕಾಳಜಿವಹಿಸುತ್ತಿಲ್ಲ. ಕೆಲವು ಅಧಿಕಾರಿಗಳು ೧೦-೨೦ ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ಇರುತ್ತಾರೆ ಅವರಿಗೆ ರಾಜಕೀಯ ಪ್ರಭಾವಗಳು ಇರುತ್ತದೆ, ಇವತ್ತು ನಮ್ಮ ಇಂದಿನ ರಾಜಕೀಯ ಪರಿಸ್ಥಿತಿ ಯಾವ ರೀತಿ ಇದೆ ಅಂದರೆ, ಒಂದು ಆಡಳಿತ ಪಕ್ಷ, ಮತ್ತು ಒಂದು ವಿರೋಧ ಪಕ್ಷ ಇದೆಲ್ಲಕ್ಕಿಂತ ಹೆಚ್ಚಿನ ರಾಜಕೀಯ ಮುತ್ಸದ್ದಿತನ ಇರತಕ್ಕ ಅಧಿಕಾರಿಗಳು ಇರುತ್ತಾರೆ. ಅವರು ಎರಡೂ ಪಕ್ಷಗಳ ಜೊತೆ ಹೊಂದಿಕೊಂಡು ಹೋಗುತ್ತಾರೆ. ಆದ್ದರಿಂದ ಇಂಥ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದರಿಂದ ಜನರ ಮೂಲಭೂತ ಬೇಡಿಕೆಗಳನ್ನು ಪೂರೈಸಲಿಕ್ಕೆ ಮತ್ತು ಆಡಳಿತವನ್ನು ಚುರುಕುಗೊಳಿಸುವುದಕ್ಕೆ ಅನುಕೂಲವಾಗುತ್ತದೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಮತ್ತೆ ಮಾನ್ಯ ವಿರೋಧಪಕ್ಷದ ನಾಯಕರು ಪೋಲೀಸ್ ವ್ಯವಸ್ಥೆಯ ವಿಚಾರ ಮತ್ತು ಈ ಬಗ್ಗೆ ಈ ಭಾಷಣದಲ್ಲಿರುವಂಥ ದ್ವಂದ್ವನೀತಿಯ ಬಗ್ಗೆ ಹೇಳಿದ್ದಾರೆ. ನಿಜ, ಅವರು ಹೇಳಿದ ವಿಚಾರ ಸತ್ಯ. ಏಕೆಂದರೆ. ಈ ರಾಜ್ಯಪಾಲರ ಭಾಷಣದಲ್ಲಿರತಕ್ಕ ವಾಕ್ಯಗಳನ್ನು ನೋಡಿದರೆ ಅದು ವೇದ್ಯವಾಗುತ್ತದೆ. ೮೭ರಲ್ಲಿ ೮೮ರಲ್ಲಿ ಮತ್ತು ೮೯ನಲ್ಲಿ ಒಂದೇ ರೀತಿಯ ವಾಕ್ಯಗಳನ್ನು ಬರೆದಿದ್ದಾರೆ. ಇದೇ ಪರಿಸ್ಥಿತಿಯನ್ನು ನೋಡಿಕೊಂಡು ಬರುತ್ತಿದ್ದೇವೆ ನಾನು ವಿರೋಧ ಪಕ್ಷದ ಶಾಸಕನಾಗಿದ್ದಾಗ, ಮಾನ್ಯ ರಾಚಯ್ಯನವರು ಗೃಹ ಮಂತ್ರಿಗಳಾಗಿದ್ದರು. ಆಗಿನ ರಾಜ್ಯಪಾಲರ ಭಾಷಣದಲ್ಲಿ ಒಂದು ವಾಕ್ಯವನ್ನು ಉಲ್ಲೇಖ ಮಾಡಿದ್ದರು. ಸಿ. ಓ. ಡಿ. ಇಲಾಖೆಯ ಮೇಲೆ ಜನರಿಗೆ ಇರತಕ್ಕ ವಿಶ್ವಾಸ ನೋಡಿದರೆ ಪದೇ ಪದೇ ಸಿ. ಓ, ಡಿ. ಇಲಾಖೆಯ ಮೇಲೆ ಒತ್ತಾಯ ತರುತ್ತಿದ್ದಾರೆ, ಆದರೆ, ಪೋಲೀಸ್ ಇಲಾಖೆ ಮೇಲೆ ನಂಬಿಕೆ ಇಲ್ಲ ಎನ್ನುವಂಥ ಹೇಳಿಕೆಗಳು ಒಂದಲ್ಲ ಒಂದು ರೀತಿಯಲ್ಲಿ ದ್ವಂದ್ವ ನೀತಿಯಿಂದ ಕೂಡಿದೆ. ಇವುಗಳ ಬಗ್ಗೆ ಹೆಚ್ಚಿನ ಒಂದು ವಿಮರ್ಶೆಯ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರಲ್ಲಿ ಮತ್ತೊಂದು ವಿಚಾರವನ್ನು ಹೇಳಿದ್ದಾರೆ, ಹೊಸದಾಗಿ ಪೋಲೀಸ್ ಠಾಣೆಗಳನ್ನು ಪ್ರಾರಂಭ ಮಾಡಬೇಕು ಮತ್ತು ರಾತ್ರಿ ಪಹರೆಗಳನ್ನು ಜಾಸ್ತಿ ಮಾಡತಕ್ಕ ವಿಚಾರವನ್ನು ಕೂಡ ಹೇಳಿದ್ದಾರೆ.

ಹಳೆ ಪೋಲೀಸ್ ಸ್ಟೇಷನ್, ಹೊಸ ಪೋಲೀಸ್ ಸ್ಟೇಷನ್‌ನಲ್ಲಿರತಕ್ಕ ಸಿಬ್ಬಂದಿಯ ಸಂಖ್ಯೆಯನ್ನು ನೋಡಿದಾಗ ಹಳೆ ಪೋಲೀಸ್ ಸ್ಟೇಷನ್‌ನಲ್ಲಿ ಮುಂಚೆ ಇರುವಷ್ಟೆ ಸಿಬ್ಬಂದಿ ಇದೆ. ಹೊಸ ಪೋಲೀಸ್

ಸ್ಟೇಷನ್‌ನಲ್ಲಿ ಸಿಬ್ಬಂದಿ ಸಂಖ್ಯೆ ಜಾಸ್ತಿ ಇದೆ. ಒಂದು ಪೋಲೀಸ್ ಸ್ಟೇಷನ್ನಿನ ವ್ಯಾಪ್ತಿಯಲ್ಲಿ ಎಷ್ಟು ಪೋಲೀಸಿನವರ ಅವಶ್ಯಕತೆ ಇದೆ, ಅವರಿಗೆ ಏನೇನು ಸವಲತ್ತುಗಳು ಬೇಕಾಗಿದೆ ಅವರಿಗೆ ಉಚಿತವಾಗಿ ಬಡ್ಡಿ ರಹಿತ ಸಾಲವನ್ನು ಕೊಟ್ಟರೆ, ಅಥವಾ ವಾಹನ ಭತ್ಯವನ್ನು ಕೊಟ್ಟರೆ ಅವರು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಾರೆ. ಕೇವಲ ಒಂದು ಮೋಟಾರ್ ಸೈಕಲ್ ಕೊಟ್ಟು ಪೋಲಿಸ್ ಸ್ಟೇಷನ್ನಿನ ಸುತ್ತಳತೆಯ ೮೦ ಕಿ.ಮೀ.ನಲ್ಲಿರುವ ಗ್ರಾಮಗಳನ್ನು ನೋಡಿಕೊಳ್ಳಬೇಕೆಂದು ಹೇಳಿದರೆ ನಾವು ಏನು ಅವರಿಂದ ನಿರೀಕ್ಷೆ ಮಾಡುತ್ತೇವೆ ಆ ನಿರೀಕ್ಷೆಯನ್ನು ಮುಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಒಂದು ಒತ್ತನ್ನು ಪೋಲೀಸ್ ಇಲಾಖೆಯು ದಕ್ಷ ಆಡಳಿತದ ಬಗ್ಗೆ ತಾವು ನೀಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ. ಮತ್ತೊಂದು ಮುಖ್ಯವಾದ ವಿಚಾರವೆಂದರೆ ಈ ಪೋಲೀಸ್ ಇಲಾಖೆಯಲ್ಲಿ ಸಾಮಾನ್ಯವಾಗಿ ರಾಜಕೀಯ ಪ್ರಭಾವ ಇಲ್ಲದವರನ್ನು ಅಥವಾ ಅಧಿಕಾರವನ್ನು ದುರುಪಯೋಗ ಮಾಡಿದವರನ್ನು ಅಥವಾ ಬೇಜವಾಬ್ದಾರಿಯಿಂದ ಕೆಲಸ ಮಾಡಿದವರನ್ನು ಸಾಮಾನ್ಯವಾಗಿ ಸಿ.ಓ.ಡಿ. ಇಲಾಖೆಗೆ ಹಾಕುತ್ತಾರೆ. ಅದೇ ರೀತಿ ಬೇರೆ ಬೇರೆ ಪಕ್ಷಗಳು ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ಬೇರೆ ಬೇರೆ ಜನರನ್ನು ಸಿ.ಓ.ಡಿ. ಇಲಾಖೆಗೆ ವರ್ಗಾವಣೆ ಮಾಡುತ್ತಾರೆ. ಇದು ಸರಿಯಲ್ಲ. ಸಿ.ಓ.ಡಿ. ಇಲಾಖೆಯಲ್ಲಿರತಕ್ಕ ವ್ಯಕ್ತಿಗಳು ಪ್ರಾಮಾಣಿಕರಾಗಿರಬೇಕು. ಪರಿಶುದ್ಧರಾಗಿರಬೇಕು. ಅವರ ಹಸ್ತ ಪರಿಶುದ್ಧವಾಗಿರಬೇಕು, ಅವರಿಗೆ ಯಾವುದೇ ಒಂದು ಕೇಸನ್ನು ಕೊಟ್ಟರೆ ಅವರು ಆ ಬಗ್ಗೆ ಪ್ರಾಮಾಣಿಕವಾಗಿ ತನಿಖೆ ಮಾಡಿ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡುವಂತಹ ವ್ಯವಸ್ಥಿತವಾದ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೇ ವಿನಃ ಕೇವಲ ಅದಕ್ಷ ಅಧಿಕಾರಿಗಳನ್ನು ಸಿ.ಓ.ಡಿ. ಇಲಾಖೆಗೆ ಹಾಕಿದರೆ ಅಲ್ಲಿ ಯಾವ ಒಂದು ಒಳ್ಳೆಯ ಫಲಿತಾಂಶವನ್ನು ನಾವು ನಿರೀಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ. ಪೋಲೀಸ್ ಇಲಾಖೆಯ ಮೇಲೆ ಕೆಲವೊಂದು ಸಂದರ್ಭದಲ್ಲಿ ದೂರುಗಳು ಬರುತ್ತವೆ ಪೋಲೀಸ್ ಇಲಾಖೆಯ ಮೇಲೆ ಬಂದಂಥ ದೂರನ್ನು ಸಹ ತನಿಖೆ ಮಾಡಲು ಸಿ.ಓ.ಡಿ.ಯವರಿಗೆ ಹಾಕುತ್ತಾರೆ. ಇದು ಸರಿಯಲ್ಲ. ಈ ಪೋಲೀಸ್ ಇಲಾಖೆಯ ಮೇಲೆ ಬರತಕ್ಕ ದೂರನ್ನು ಪರಿಶೀಲನೆ ಮಾಡಲಿಕ್ಕೆ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಆಗಬೇಕು ಹಾಗೂ ದಕ್ಷ ಸಿ.ಓ.ಡಿ. ಅಧಿಕಾರಿಗಳನ್ನು ತನಿಖೆ ಮಾಡಲು ಸಿ.ಓ.ಡಿ. ಇಲಾಖೆಗೆ ಹಾಕಬೇಕೆಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ರಾಜ್ಯದ ಏಳು ಜಿಲ್ಲೆಗಳಲ್ಲಿ ಹೆಂಡದ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿದೆ. ಅದೇ ರೀತಿಯಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಂಡದ ಮಾರಾಟವನ್ನು ರದ್ದು ಮಾಡತಕ್ಕ ವಿಚಾರದ ಬಗ್ಗೆ ಸಂಕ್ಷಿಪ್ತವಾಗಿ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಕಲಬೆರಕೆಯಾದ ಹೆಂಡವನ್ನು ಕುಡಿಯುವುದರಿಂದ ಆರೋಗ್ಯಕ್ಕೆ ಬಹಳ ಹಾನಿಯಾಗುತ್ತದೆ ಎಂಬ ವಿಚಾರವನ್ನು ನಾನು ಸಹ ಒಪ್ಪುತ್ತೇನೆ. ಆದರೆ ಎಲ್ಲಿ ಕಲಬೆರಕೆಯಾಗುತ್ತದೆ, ಆ ಜಿಲ್ಲೆಗಳಲ್ಲಿ ರದ್ದು ಮಾಡುವುದು ಸ್ವಾಭಾವಿಕ ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೇಕಾದಷ್ಟು ತೆಂಗಿನ ಮರಗಳಿವೆ. ಬೇಕಾದಷ್ಟು ಹೆಂಡ ತೆಗೆಯುವಂತಹ ವ್ಯವಸ್ಥೆ ಇದೆ. ಮತ್ತು ಜನರಿದ್ದಾರೆ, ಜೊತೆಗೆ ಅಂಗಡಿವಾರು ಏಲಂ ಆಗಿ ಮಾರಾಟವಾಗುತ್ತಿರುವುದರಿಂದ ಮೂರು ಕಡೆಗಳಲ್ಲಿ ಅದರ ಪ್ರಯೋಜನ ಪಡೆಯತಕ್ಕಂಥ ವ್ಯವಸ್ಥಿತ ಜನರಿದ್ದಾರೆ. ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಡತಕ್ಕ ಜವಾಬ್ದಾರಿ ಸರ್ಕಾರದ್ದೇ ಆಗಿರುವುದರಿಂದ ಈಗಿನ ವ್ಯವಸ್ಥೆಯನ್ನು ರದ್ದು ಮಾಡಬಾರದು. ಒಂದು ವೇಳೆ ರದ್ದು ಮಾಡಿದರೆ ಅದು ಪಂಜಾಬ್ ಅಥವಾ ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕರು ಇದ್ದಾರೆಂದು ಹೇಳಿ ನಮ್ಮ ಕರ್ನಾಟಕ ರಾಜ್ಯದಲ್ಲಿರುವವರಿಗೆ ಬಂದೂಕು ಲೈಸೆನ್ಸ್ ಅನ್ನು ರದ್ದು ಮಾಡಿದ ಹಾಗೆ ಆಗುತ್ತದೆ. ಯಾವುದೋ ಒಂದು ಜಿಲ್ಲೆಯಲ್ಲಿ ಏನೋ ಒಂದು ಅನಾಹುತ ಆಗುತ್ತದೆ ಎಂದು ಹೇಳಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಸೇಂದಿ ಮಾರಾಟವನ್ನು ರದ್ದು ಮಾಡುವುದು. ಸರಿಯಲ್ಲ ಎನ್ನುವ ಅಭಿಪ್ರಾಯಕ್ಕೆ ಅಲ್ಲಿಯ ಜನರು ಬಂದಿದ್ದಾರೆ. ಹಾಗೂ ನಮ್ಮ ಜಿಲ್ಲೆಯ ಪ್ರತಿನಿಧಿಗಳೂ ಹಾಗೂ ಶಾಸಕರು ಬಂದಿದ್ದಾರೆ. ಈ ಬಗ್ಗೆ ಸರ್ಕಾರದವರು ಮರು ಪರಿಶೀಲನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಇನ್ನು ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ಕ್ಕೆ ಇಳಿಸಬೇಕೆನ್ನುವ ಮತ್ತೊಂದು ವಿಚಾರ ಇದೆ. ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ೫೦ ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡತಕ್ಕ ವ್ಯವಸ್ಥೆ ಇದ್ದರೂ ಸಹ ಹಿಂದಿನ ಸರ್ಕಾರ ಏನು ಕ್ರಮ ತೆಗೆದುಕೊಂಡಿಲ್ಲ. ನಂತರ ಈಗ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದೆ. ಜನರು ಏನು ಅಭಿಮಾನದಿಂದ ಮತ ಕೊಟ್ಟು ಆರಿಸಿ ಕಳುಹಿಸಿದ್ದಾರೆ. ಅವರಿಗೆ ಪೂರಕವಾಗಿ ೫೦ ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿದ ನಂತರ ತಾವು ೫೮ ರಿಂದ ೫೫ಕ್ಕೆ ಮಾಡಬಹುದೇ ಹೊರತು ಬೇರೆ ಬೇರೆ ರಾಜ್ಯಗಳಲ್ಲಿ ಅಥವಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರತಕ್ಕ ವ್ಯತ್ಯಾಸಗಳನ್ನು ಸಮತೂಗಿಸಿಕೊಂಡು ಈ ಒಂದು ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಒಂದೊಂದು ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಈ ಬಗ್ಗೆ ಅನಿಶ್ಚತೆ

ಇರುತ್ತದೆ. ಆದ್ದರಿಂದ ೫೮ ವರ್ಷವಾದರೆ ೫೮ ವರ್ಷ ಅಂತ ಹೇಳಿ, ೫೫ ವರ್ಷವಾದರೆ ೫೫ ಅಂತ ಹೇಳಿ. ಈ ಬಗ್ಗೆ ಯಾವುದಾದರೂ ಒಂದು ಸ್ಪಷ್ಟವಾದ ನೀತಿ ಇರಬೇಕು.

ಅಧ್ಯಕ್ಷರು.— ತಾವು ೫ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸುತ್ತೀರಾ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.— ನಾನು ಇನ್ನು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು.— ಹಾಗಾದರೆ ೨ನೇ ತಾರೀಖಿನ ದಿವಸ ಪ್ರಾರಂಭಿಸಿ.

ಅಧ್ಯಕ್ಷರು.— ಈ ದಿನ ಮಧ್ಯಾಹ್ನ ೩-೦೦ ಗಂಟೆಗೆ ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ ಈ ಕೆಳಕಂಡ ತೀರ್ಮಾನವನ್ನು ತೆಗೆದುಕೊಂಡಿತು.

೨-೪-೧೯೯೦	ಬೆಳಿಗ್ಗೆ ೧೧ ಗಂಟೆಗೆ ಶಾಸನ ರಚನಾ ಕಾರ್ಯಕಲಾಪಗಳು, ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಚರ್ಚೆಯನ್ನು ಮುಂದುವರಿಸುವುದು.
೩-೪-೧೯೯೦	ಬೆಳಿಗ್ಗೆ ೯ ಗಂಟೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದುವರಿಸುವುದು.
೪-೪-೧೯೯೦	ಬೆಳಿಗ್ಗೆ ೯-೦೦ ಗಂಟೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಮುಖ್ಯಮಂತ್ರಿಗಳ ಉತ್ತರ.

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಾಶ ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ''ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಾಶ ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸಬೇಕೆಂದು ಈ ಸದನವು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ'' ಈ ನಿರ್ಣಯವನ್ನು ಮಂಡಿಸುತ್ತಾ ಇದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಲಿಕ್ಕೆ ತಮ್ಮ ಅಪ್ಪಣೆಯನ್ನು ಪಡೆಯುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಿರಂತರವಾಗಿ ಕರ್ನಾಟಕ ರಾಜ್ಯದಲ್ಲಿ ನಿಸರ್ಗ ಸಂಪತ್ತಿನ ನಾಶ ಸುದೀರ್ಘವಾಗಿ ನಡೆಯುತ್ತಿದೆ. ಈ ನಾಶವನ್ನು ತಪ್ಪಿಸುವ ಬಗ್ಗೆ ಸರ್ಕಾರ ಯಾವುದೇ ರೀತಿಯಾದಂಥ ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಕನ್ನಡ ನಾಡು ನಿಸರ್ಗದಲ್ಲಿ ಇಡೀ ದೇಶದಲ್ಲಿಯೇ ಅತ್ಯಂತ ರಮಣೀಯವಾದಂಥ ನಾಡು. ಗಂಧದ ಗುಡಿ, ಚಿನ್ನದ ನಾಡು, ಸುಂದರವಾದಂಥ ಪ್ರದೇಶ, ಯಾವ ಜಿಲ್ಲೆಯನ್ನು ನೋಡಿದರೂ ಅಷ್ಟೊಂದು ಸುಮಧುರವಾದಂಥ, ಭವ್ಯವಾದಂಥ ಒಂದು ಪ್ರದೇಶವನ್ನು ಹೊಂದಿರತಕ್ಕಂಥ ಈ ನಾಡಿನಲ್ಲಿ ನಿಸರ್ಗದ ನಾಶ, ಬಹುಶಃ ಯಾವುದೇ ರಾಜ್ಯದಲ್ಲಿ ಇಷ್ಟೊಂದು ಮಟ್ಟದಲ್ಲಿ ಇಷ್ಟೊಂದು ಪರಿಣಾಮಕಾರಿಯಾಗಿ ನಡೆದಿಲ್ಲ ಎಂಬುದನ್ನು ನಾನು ಕಣ್ಣಾರೆ ಅನೇಕ ಕಡೆ ಹೋಗಿ ನೋಡಿದ್ದೇನೆ. ತಾವು ಅನೇಕ ಸಾರಿ ಧಾರ್ಮಿಕ ಸ್ಥಳವಾದಂಥ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ತಾವು ಹೋಗುತ್ತಿರುವುದು ಗೊತ್ತಿದೆ. ನಾನೂ ಸಹ ಹೋಗುತ್ತಿದ್ದೇನೆ. ಇಂತಹ ಅನೇಕ ಧಾರ್ಮಿಕ ಸ್ಥಳಗಳು ಈ ನಿಸರ್ಗದ ರಮಣೀಯತೆಯನ್ನು ಕಳೆದುಕೊಂಡು ಒಂದು ರೀತಿಯ ಬರಡಾಗಿದೆ. ೭ ಮಲೆ, ೭೭ ಮಲೆ, ಮಹದೇಶ್ವರನಿಗೆ ಉಘೆ, ಎನ್ನತಕ್ಕಂತಾದ್ದು ಮೊದಲಿನಿಂದ ಒಂದು ಪದ್ಧತಿ, ಈ ೭ ಮಲೆ, ೭೭ ಮಲೆ ದಾಟಿ ಮುಂದೆ ಸಿಕ್ಕತಕ್ಕದ್ದು ಮಹದೇಶ್ವರ ದೇವಸ್ಥಾನ. ಅಷ್ಟೊಂದು ಪವಿತ್ರವಾದಂಥ, ರಮಣೀಯವಾದಂಥ ನಿಸರ್ಗ ಸಂಪತ್ತನ್ನು ಹೊಂದಿರತಕ್ಕಂಥದ್ದು ಈ ಒಂದು ಧಾರ್ಮಿಕ ಸ್ಥಳ. ಎಲ್ಲಿ ೭ ಮಲೆ ಇದೆ, ಎಲ್ಲಿ ೭೭ ಮಲೆ ಇದೆ, ಅನೇಕ ಕಡೆ ಈ ಗ್ರಾನೈಟ್ ಲೂಟಿ ಮಾಡುವ ಒಂದು ಗುತ್ತಿಗೆದಾರರು ಇಡೀ ನಿಸರ್ಗವನ್ನೇ ನಾಶಮಾಡಿ ಗ್ರಾನೈಟ್ ಕಲ್ಲುಗಳನ್ನು ತೆಗೆದು ವಿದೇಶಗಳಿಗೆ ಸುಮಾರಾಗಿ ೧೮ ರಾಷ್ಟ್ರಗಳಿಗೆ ಮಾಡತಕ್ಕಂಥಾದ್ದು, ಹತ್ತಾರು ವರ್ಷಗಳಿಂದ ನಡೆದು ಬಂದಿದೆ. ಅಧ್ಯಕ್ಷರೆ, ತಮಗೆ ಹೇಳುವುದಾದರೆ, ಈ ಒಂದು ಲೂಟಿಗೆ, ಹಗಲು ದರೋಡೆಗೆ ನಿಸರ್ಗ ಸಂಪತ್ತಿನ ನಾಶಕ್ಕೆ ಅನೇಕ ಧಾರ್ಮಿಕ ಸ್ಥಳಗಳು ಇದಕ್ಕೆ ಬಲಿಯಾಗಿವೆ. ಮಲೆ, ಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ. ಪವಿತ್ರವಾದಂಥ ಶಿವಗಂಗೆ ಬೆಟ್ಟ, ರಾಮದೇವರ ಗುಡ್ಡ, ಮುಗ್ಗಲಮರಿ ಬಸವೇಶ್ವರ ದೇವಸ್ಥಾನ ಹೀಗೆ